RNI:KAR/KAN/2021/27600

# ಕರುನಾಡ ಕಂದ

ಪಾಕ್ಷಿಕ

ಸಂಪುಟ-1 । ಸಂಚಿಕೆ-24 ದಿನಾಂಕ: 16-10-2022 ಪುಟಗಳು: 16

ಬೆಲೆ: 20/-

Editor : KARIBASAPPA BALIGAR

ಸಂಪಾದಕರು : ಕರಿಬಸಪ್ಪ ಬಳಿಗಾರ

ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಷಯಗಳು

ಬಸವರಾಜ ಬಳಿಗಾರ

ಸಂಪಾದಕರು, ಕರುನಾಡ ಕಂದಮೊ : 9986366909





## ಭತ್ತದ ನಾಡಿಗೆ ಕಾಲಿಟ್ಟ ಬಿಜೆಪಿ ಸಂಕಲ್ಪ ಯಾತ್ರೆ ಯಡಿಯೂರಪ್ಪ ರಾಜಾಹುಲಿ ಆದರೆ ಶ್ರೀ ರಾಮುಲು ಚೀತಾ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

## ಭೂತಾರಾಧನೆ-ದೈವಾರಾಧನೆ





## ನ್ಯೂ ಲೈಫ್ ಪತ್ತಾರ ಫಿಜಿಯೋಥೆರಪಿ ಕ್ಲಿನಿಕ್

### ದೇಶದಲ್ಲೇ ಒಂದು ಹೆಸರಾಂತ ಕ್ಲಿನಿಕ್ ಆಗಿ ಹೊರಹೊಮ್ಮಲಿ

## ಮೈಸೂರು ಜಿಲ್ಲೆಯಲ್ಲಿ "ಭಾರತ ಜೋಡೋ" ಪಾದಯಾತ್ರೆ





## ಲಕ್ಷಾಂತರ ಜನಸ್ತೋಮಕ್ಕೆ ಸಾಕ್ಷಿಯಾದ ಮೈಸೂರು ದಸರಾ

ಕರುನಾಡ ಕಂದ
ಸಂಪುಟ–1 । ಸಂಚಿಕೆ–24
ದಿನಾಂಕ: 16–10–2022 । ಪುಟಗಳು: 16

# ನಗೆ ಹಬ್ಬ



ಕಲಬುರಗಿ:ಜಿಲ್ಲೆಯ ಜೇವರ್ಗಿ ಪಟ್ಟಣದ ಎ ಪಿ ಎಂ ಸಿ ಯಾರ್ಡ್ ನಲ್ಲಿ ಡಾಕ್ಟರ್ ಸಿದ್ಧಯ್ಯ ಪುರಾಣಿಕ (ಕಾವ್ಯಾನಂದ) ಸಂಸ್ಮರಣೆ ಹಾಗೂ ಶ್ರೀ ಮಹಾಲಕ್ಷ್ಮೀ ಜಾತ್ರಾ ಮಹೋತ್ಸವ ಅಂಗವಾಗಿ ಇತ್ತೀಚಿಗೆ ಅಭಿನವ ಬೀಚಿ ಹಾಸ್ಯ ಬ್ರಹ್ಮ ಶ್ರೀ ಗಂಗಾವತಿ ಪ್ರಾಣೇಶ್ ಹಾಗೂ ಅವರ ಸಂಗಡಿಗರಾದ ನರಸಿಂಹ ಜೋಶಿ ಹಾಗೂ ಬಸವರಾಜ ಮಹಾಮನಿ ಇವರಿಂದ ನಗೆಹಬ್ಬ ಕಾರ್ಯಕ್ರಮ ಬಂದಿತು.

ನಗೆಹಬ್ಬ ಕಾರ್ಯಕ್ರಮವನ್ನು ಉದ್ದೇಶಿಸಿ ಹಾಸ್ಯ ಬ್ರಹ್ಮ ಶ್ರೀ ಪ್ರಾಣೇಶ್ ಗಂಗಾವತಿಯವರು ಅದ್ಭುತವಾಗಿ ಎಲ್ಲರನ್ನೂ ಸಾಹಿತ್ಯದ ನಗೆಹಬ್ಬದಲ್ಲಿ ನಕ್ಕು–ನಲಿಸಿದರು ಮತ್ತು ಇವತ್ತಿನ ಜನರಲ್ಲಿ ಟಿವಿ ಮೊಬೈಲ್ ಬಂದಮೇಲೆ ಸಾಹಿತ್ಯ ಮತ್ತು ನಗುವುದನ್ನು ಮರೆತುಬಿಟ್ಟಿದ್ದೇವೆ ಮಕ್ಕಳಿಗೆ ಒಳ್ಳೆಯ ಪುಸ್ತಕವನ್ನು ಓದುವ ಹವ್ಯಾಸ ಬೆಳೆಸಿ ಎಂದು ಪಾಲಕರಿಗೆ ವಿನಂತಿಯನ್ನು ಮಾಡಿಕೊಳ್ಳುವ ಜೊತೆಗೆ ನಗೆ ಹಬ್ಬ ಕಾರ್ಯಕ್ರಮವನ್ನು ಅದ್ಭುತವಾಗಿ ಯಶಸ್ವಿಗೊಳಿಸಿದರು.ಇದೇ ತರ

ಇನ್ನೋರ್ವ ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ನರಸಿಂಹ ಜೋಶಿ ಅವರು ಕೂಡಾ ವಿವಿಧ ರೀತಿಯ ಗಣ್ಯರ ಹಾಗೂ ರಾಜಕೀಯ ಧುರೀಣರ ಧ್ವನಿಯನ್ನು ಅರ್ಥಪೂರ್ಣವಾಗಿ ಅದ್ಭುತವಾದ

ಮಿಮಿಕ್ರಿ ಮಾಡಿ ಜನರಿಗೆ ನಕ್ಕು–ನಲಿಸಿದರು. ಕೊನೆಗೆ ಕಲ್ಯಾಣ ಕರ್ನಾಟಕದ(ಹತ್ತಿಗುಡೂರ) ಯುವ ಪ್ರತಿಭಾವಂತರಾದ ಬಸವರಾಜ ಮಹಾಮನಿ ಅವರು ಕೂಡಾ ಸಾಹಿತ್ಯ ನಗೆಯ ಬಗ್ಗೆ ಹಲವಾರು ವಿಷಯಗಳನ್ನು ಹೇಳಿ ಮತ್ತು ಜೊತೆಗೆ ಈ ಭಾಗದ ಜನರು ನನಗೆ ಉನ್ನತಮಟ್ಟಕ್ಕೆ ಬೆಳಸಿದ್ದಾರೆ ಎಂದು ಅವರು ಕೂಡಾ ಸಂತಸ ವ್ಯಕ್ತಪಡಿಸಿದರು.ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ಷ.ಬ್ರ. ಡಾ" ರುದ್ರಮುನಿ ಶಿವಾಚಾರ್ಯರು ಸುಕ್ಷೇತ್ರ ಕಡಕೋಳ,ಮಾಜಿ ಜಿಲ್ಲಾ ಪಂಚಾಯತ್ ವಿರೋಧ ಪಕ್ಷದ ನಾಯಕರಾದ ಶ್ರೀ ಬಸವರಾಜಗೌಡ ಪಾಟೀಲ್ ನರಿಬೋಳರವರು ಜ್ಯೋತಿ ಬೆಳಗಿಸುವುದರ ಮೂಲಕ ಮತ್ತು ಸಸಿಗೆ ನೀರು ಹಾಕುವುದರ ಮೂಲಕ ಜೊತೆಗೆ ಸಿದ್ದಯ್ಯ ಪುರಾಣಿಕರವರ ಭಾವಚಿತ್ರಕ್ಕೆ ಮಾಲಾರ್ಪಣೆಯನ್ನು ಶ್ರೀ ವಿಜಯಕುಮಾರ್ ಕೆ ಹಿರೇಮಠ ಜೆಡಿಎಸ್ ಮುಖಂಡರು ಮಾಡುವುದರ ಮೂಲಕ ಕಾರ್ಯಕ್ರಮ ಪ್ರಾರಂಭಿಸಿದರು.

ಹಾಗೂ ಮುಖ್ಯ ಅತಿಥಿಗಳಾಗಿ ಶ್ರೀ ಅಶೋಕ ಸಾಹೂ ಗೋಗಿ,ರಾಜಶೇಖರ ಸೀರಿ,ಬಿ ಎನ್ ಪಾಟೀಲ್,ಸಿದ್ದು ಬಿ ಅಂಗಡಿ ಮತ್ತು ಗೌರವ ಸನ್ಮಾನಿತರು,ಗೌರವಾಧ್ಯಕ್ಷರಾದ ಚನ್ನಮಲ್ಲಯ್ಯ ಹಿರೇಮಠ,ಕ ಸಾ ಪ ಜೇವರ್ಗಿ ತಾಲ್ಲೂಕ ಅಧ್ಯಕ್ಷರಾದ ಎಸ್ ಕೆ ಬಿರಾದಾರ,ಕಾನೂನು ಸಲಹೆಗಾರರಾದ ರಾಜು ಮುದ್ದಡಗಿ,ಪತ್ರಿಕಾ ಪ್ರತಿನಿಧಿಗಳಾದ ಧನರಾಜ,ಚಂದ್ರಶೇಖರ ಪಾಟೀಲ್ ಗುಡೂರ ,ಶರಣು,ಸುರೇಶ,ಸಂಚಾಲಕರು,ವಿಶೇಷ ಆಹ್ವಾನಿತರು,ಗೌರವ ಸಲಹೆಗಾರರು,ನಗರ ಘಟಕದ ಅಧ್ಯಕ್ಷರಾದ ಬಸವರಾಜ ಬಾಗೇವಾಡಿ,ವಲಯ ಘಟಕದ ಅಧ್ಯಕ್ಷರಾದ ಚಂದ್ರಶೇಖರ ತುಂಬಗಿ,ಪರಮೇಶ್ವರ ಬಿರಾಳ ಕೆ,ಸಂಗಮೇಶ ಸಂಕಾಲಿ,ಬಸವರಾಜ ದಬಕಿ,ಸಿದ್ದರಾಮಯ್ಯ ಸ್ವಾಮಿ ಹಾಗೂ ಕ ಸಾ ಪ ಎಲ್ಲಾ ಪದಾಧಿಕಾರಿಗಳು ಹಾಜರಿದ್ದರು.

**–ಚಂದ್ರಶಾಗೌಡ ಎಸ್ ಪಾಟೀಲ್ ಎಸ್.ಎನ್.**

# ಮೈಸೂರು ಜಿಲ್ಲೆಯಲ್ಲಿ ಭಾರತ ಜೋಡೋ ಪಾದಯಾತ್ರೆ



ಮೈಸೂರು:ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರ ಭಾರತ ಜೋಡೋ ಯಾತ್ರೆ ಮೈಸೂರು ಜಿಲ್ಲೆಗೆ ಅಕ್ಟೋಬರ್ 3ರಂದು ಆಗಮಿಸಿತು.ಕೇರಳ ರಾಜ್ಯದಿಂದ ಭಾರತ ಜೋಡೋ ಯಾತ್ರೆ ಮುಗಿಸಿ ರಾಹುಲ್ ಗಾಂಧಿಯವರ ಪಾದಯಾತ್ರೆಯು ಮೈಸೂರು ಜಿಲ್ಲೆಯ ಗಡಿ ತಾಲ್ಲೂಕು ಗುಂಡ್ಲುಪೇಟೆ ಮೂಲಕ ರಾಜ್ಯದ ಮೈಸೂರು ಜಿಲ್ಲೆಗೆ ಆಗಮಿಸಿತು. ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿಕೆ ಶಿವಕುಮಾರ್ ಮತ್ತಿತರ ಪ್ರಮುಖ ನಾಯಕರು ರಾಹುಲ್ ಗಾಂಧಿ ಅವರನ್ನು ಜಿಲ್ಲೆ ಮೈಸೂರು ಜಿಲ್ಲೆಗೆ ಸ್ವಾಗತಿಸಿದರು.ಯಾತ್ರೆಗೆ ಮೈಸೂರು ಜಿಲ್ಲೆಯಲ್ಲಿ ಸಹಸ್ರಾರು ಜನರು ಸಾಥ್ ನೀಡಿದರು.ಮೈಸೂರು ಜಿಲ್ಲೆಯ ನಾಗರೀಕರು ಭಾರತ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಕಾಂಗ್ರೆಸ್ ಸೇವಾದಳದವರು ಕಾಂಗ್ರೆಸ್ ಧ್ವಜ ಹಿಡಿದು ಸಾಗಿದರು ಮಂಗಳ ವಾದ್ಯ, ಬ್ಯಾಂಡ್ ವಾದನ ಆದಿವಾಸಿಗಳ ಕುಣಿತ,ಕಂಸಾಳೆ, ಡೊಳ್ಳುಕುಣಿತ,ವೀರಗಾಸೆ,ಚೆಂಡೆ–ಮದ್ದಳೆ,ನಗಾರಿ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಲಾತಂಡಗಳು ಯಾತ್ರೆಗೆ ಮೆರಗು ನೀಡಿದವು.ಪಾದಯಾತ್ರೆ ಮಧ್ಯದಲ್ಲಿ ಸಿಂಧುವಳ್ಳಿಯಲ್ಲಿ ರೈತ ಮುಖಂಡರು ಕೃಷಿ ಚಟುವಟಿಕೆ ಬಳಸುವ ಯಂತ್ರೋಪಕರಣಗಳ ಬೆಲೆ ಏರಿಕೆ ಕಬ್ಬಿಗೆ ವೈಜ್ಞಾನಿಕ ದರ ನಿಗದಿ ಕೃಷಿ ಕಾಯ್ದೆಗಳನ್ನು ರಾಜ್ಯ ರದ್ದುಪಡಿಸಿರುವುದು ಸ್ವಾಮಿನಾಥನ್ ಅವರ ವರದಿ ಜಾರಿಗೆ ಆಗದಿರುವುದು ಸೇರಿದಂತೆ ವಿವಿಧ ಸಮಸ್ಯೆಗಳನ್ನು ರಾಹುಲ್ ಗಾಂಧಿಯವರಿಗೆ ತಿಳಿಸಿದರು.

ಮಾರ್ಗದುದ್ದಕ್ಕೂ ಕಾಂಗ್ರೆಸ್ ಮುಖಂಡರು ಪಾದಯಾತ್ರಿಗಳಿಗೆ ಮಜ್ಜಿಗೆ, ಪುಳಿಯೋಗರೆ,ಸಮೋಸ, ಕಬ್ಬಿನಹಾಲು,ಬಿಸ್ಕೆಟ್, ಹಣ್ಣುಗಳನ್ನು ವಿತರಿಸಿ ಉಪಚರಿಸಿದರು.

ಸುತ್ತೂರು ಸಿರಿಗಳ ಭೇಟಿ:– ಚಾಮುಂಡೇಶ್ವರಿ ಬೆಟ್ಟದ ತಪ್ಪಲಿನ ಶ್ರೀ ಸುತ್ತೂರು ಶಾಖಾ ಮಠಕ್ಕೆ ಭೇಟಿ ನೀಡಿದ ರಾಹುಲ್ ಗಾಂಧೀಜಿಯವರು ಶ್ರೀಗಳೊಂದಿಗೆ ಮಾತುಕತೆ ನಡೆಸಿದರು.ಸುತ್ತೂರು ಶ್ರೀಗಳು ಅವರಿಗೆ ಹೂವಿನ ಹಾರ ಹಾಕಿ ಆಶೀರ್ವಾದ ನೀಡಿದರು.ಪಾದಯಾತ್ರೆಯಲ್ಲಿ ರಸ್ತೆಯುದ್ದಕ್ಕೂ ನೆರೆದಿದ್ದ ಜನರನ್ನು ಅಲ್ಲಲ್ಲಿ ಮಾತನಾಡಿಸಿ ಅವರ ಸಮಸ್ಯೆಗಳನ್ನು ಆಲಿಸುತ್ತಿರುವುದು ಕಂಡುಬಂದಿತು.

ಟಿ–ಶರ್ಟ:ಯಾತ್ರೆಯಲ್ಲಿ ಭಾಗವಹಿಸಿದ್ದ ವಿವಿಧ ವಿಧಾನಸಭಾ ಕ್ಷೇತ್ರಗಳ ಕಾರ್ಯಕರ್ತರು ಆಯಾ ಕ್ಷೇತ್ರದ ಮುಖಂಡರ ಭಾವಚಿತ್ರ ಹಾಗೂ ರಾಹುಲ್ ಗಾಂಧಿ ಭಾವಚಿತ್ರವುಳ್ಳ ಟಿ–ಶರ್ಟ್ ಧರಿಸಿ ಗಮನ ಸೆಳೆದರು.

ಗಾಂಧಿ ಜಯಂತಿ:ರಾಹುಲ್ ಗಾಂಧೀಜಿ ಅವರು ಮತ್ತು ರಾಜ್ಯ ಕಾಂಗ್ರೆಸ್ ನಾಯಕರು ಮಹಾತ್ಮ ಗಾಂಧಿ ಭೇಟಿ ನೀಡಿದ್ದ ಐತಿಹಾಸಿಕ ಸ್ಥಳವಾದ ನಂಜನಗೂಡು ತಾಲ್ಲೂಕಿನ ಬದನವಾಳು ಖಾದಿ ಗ್ರಾಮೋದ್ಯೋಗ ಕೇಂದ್ರದಲ್ಲಿ ಗಾಂಧಿಜಯಂತಿಯನ್ನು ವಿಭಿನ್ನವಾಗಿ ಆಚರಿಸಿದರು.

ಖಾದಿ ಗ್ರಾಮೋದ್ಯೋಗ ಕೇಂದ್ರದಲ್ಲಿರುವ ಮಹಾತ್ಮಗಾಂಧೀಜಿ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಪುಷ್ಪನಮನ ಸಲ್ಲಿಸಿದರು.

ಬಳಿಕ ವಿಪಕ್ಷನಾಯಕ ಸಿದ್ದರಾಮಯ್ಯ, ಕೆ.ಸಿ ವೇಣುಗೋಪಾಲ್,ರಣದೀಪ್ ಸಿಂಗ್ ಸುರ್ಜೆವಾಲಾ ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್,ಕಾರ್ಯಧ್ಯಕ್ಷ ಧ್ರುವನಾರಾಯಣ್,ಸಲೀಮ್ ಅಹಮದ್, ವಿಧಾನಪರಿಷತ್ ನಾಯಕಬಿಕೆ ಹರಿಪ್ರಸಾದ್ ಪುಷ್ಪನಮನ ಸಲ್ಲಿಸಿದರು ನಂತರ ಗಾಯಕಿ ಸಂಗೀತಕಟ್ಟಿ ಮತ್ತು ತಂಡದವರು ಹಾಡಿದ ಪ್ರಾರ್ಥನೆ ಗೀತೆಗೆ ರಾಹುಲ್ ಗಾಂಧಿ ಗಾಂಧೀಜಿಗೆ ನಮನ ಸಲ್ಲಿಸಿದರು.ರಘುಪತಿ ರಾಘವ ರಾಜಾರಾಮ್, ವಂದೇ ಮಾತರಂ,ರಾಮ್ ರಾಮ್ ಗೀತೆಗಳು ಕಾರ್ಯಕ್ರಮಕ್ಕೆ ಕಳೆಗಟ್ಟಿದವು. ಗಾಂಧೀಜಿಯವರು 1927 ಮತ್ತು ಸಾವಿರ 1932 ರಲ್ಲಿ ಭೇಟಿ ನೀಡಿದ್ದ ವೇಳೆ ಖಾದಿ ಗ್ರಾಮದಲ್ಲಿ ನೌಕರರಾಗಿದ್ದ ಬದನವಾಳು ಗ್ರಾಮದ ರಂಗಯ್ಯನ್ರವರನ್ನು ಆತ್ಮೀಯವಾಗಿ ಮಾತನಾಡಿಸಿ ಕುಶಲೋಪರಿ ವಿಚಾರಿಸಿದರು.

ಮಳೆಯಲ್ಲಿ ಭಾಷಣ:– ಮೈಸೂರಿನ ಬಂಡಿಪಾಳ್ಯದ ಬಳಿ ಪಾದಯಾತ್ರೆ ಅಂತ್ಯವಾದ ಬಳಿಕ ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣ ಮಾಡಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರು, ಬಿಜೆಪಿ ವಿರುದ್ಧ ಹರಿ ಹಾಯ್ದರು.ರಾಹುಲ್ ಗಾಂಧಿಯವರು 06:48 ವೇದಿಕೆಯನ್ನು ಏರುತ್ತಿದ್ದಂತೆ ಜೋರು ಮಳೆ ಆರಂಭವಾಯಿತು ಈ ವೇಳೆ ಸಹಾಯಕರು ಛತ್ರಿ ಹಿಡಿಯಲು ಮುಂದಾದಾಗ ಅದನ್ನು ನಿರಾಕರಿಸಿದ ನಿರಾಕರಿಸಿದ ಅವರು ಮಾತು ಮುಂದುವರಿಸಿದರು ರಾಜ್ಯದಲ್ಲಿ ಬಿಜೆಪಿ ಸರಕಾರ ಕಿತ್ತೊಗೆಯಬೇಕೆಂದು ಹೇಳುತ್ತಿದ್ದಂತೆ ನೆರೆದಿದ್ದ ಸಹಸ್ರಾರು ಕಾರ್ಯಕರ್ತರು ಶಿಳ್ಳೆ ಹೊಡೆದು ಚಪ್ಪಾಳೆ ತಟ್ಟಿದರು.ಕರ್ನಾಟಕದಲ್ಲಿ




ಬಿಜೆಪಿ ಸರಕಾರ ಜನರ ಹಿತ ಮರೆತು ಲೂಟಿ ಹೊಡೆಯುವುದರಲ್ಲಿ ನಿರತವಾಗಿದೆ.ಸರ್ಕಾರದಿಂದ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ಆಗಿಲ್ಲ,ಪ್ರತಿಯೊಂದು ಕೂಡಾ ಕಮಿಷನ್ ವ್ಯವಹಾರವಾಗಿದೆ ಎಂದು ಜನರು ಹೇಳುತ್ತಿದ್ದಾರೆ. ಪಕ್ಷದ ನಾಯಕರು ಏನೂ ತಿಳಿಯದವರಂತೆ ನಟಿಸುತ್ತಿದ್ದಾರೆ ಎಂದು ಟೀಕಿಸಿದರು.ಬಿಜೆಪಿ ಜಾತಿ ಮತ್ತು ಧರ್ಮದ ಧರ್ಮದ ಹೆಸರಿನಲ್ಲಿ ದೇಶವನ್ನು ವಿಭಜಿಸುವ ಕೆಲಸ ಮಾಡುತ್ತಿದೆ.ಆದರೆ ಕಾಂಗ್ರೆಸ್ ಭಾರತ ಜೋಡೊ ಕೆಲಸವನ್ನು ಮಾಡುತ್ತಿದೆ ಎಂದು ನುಡಿದರು.ದೇಶದಲ್ಲಿ ನಿರುದ್ಯೋಗ ಸಮಸ್ಯೆ ತಾಂಡವಾಡುತ್ತಿದೆ ಕಾಂಗ್ರೆಸ್ ಕೊಟ್ಟಮಾತಿನಂತೆ ಜನರನ್ನು ಉಳಿಸುವ ಕೆಲಸ ಮಾಡಲಿದೆ ಈ ನಿಟ್ಟಿನಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದ ವರೆಗೆ ಭಾರತಕ್ಕೆ ಯಾತ್ರೆ ನಡೆಸಲಾಗುತ್ತಿದೆ. ಐಕ್ಯತೆ ಯಾತ್ರೆಯು ಸತ್ಯ ಅಹಿಂಸೆ ನ್ಯಾಯ ಮಾರ್ಗವಾಗಿದೆ ಯಾವುದೇ ಕಾರಣಕ್ಕೂ ಯಾತ್ರೆ ನಿಲ್ಲಿಸುವುದಿಲ್ಲ ಜೋರು ಮಳೆಯಲ್ಲೂ ನನ್ನ ಭಾಷಣ ಆಲಿಸಿದ ಎಲ್ಲರಿಗೂ ಧನ್ಯವಾದಗಳು ಎಂದು ತಿಳಿಸಿದರು.ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಎಐಸಿಸಿ ಪ್ರಧಾನ ಕಾರ್ಯದರ್ಶಿ ಮತ್ತು ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೆವಾಲಾ,ಪ್ರಧಾನ ಕಾರ್ಯದರ್ಶಿ ಕೆಸಿ ವೇಣುಗೋಪಾಲ್ ಮಾಜಿ ಸಚಿವ ಹೆಚ್ ಸಿ ಮಾದೇವಪ್ಪ ಮತ್ತಿತರರು ಉಪಸ್ಥಿತರಿದ್ದರು.

**–ಜಾಕೀರ್ ಹುಸೇನ್**

ಕರುನಾಡ ಕಂದ
ಸಂಪುಟ–1 । ಸಂಚಿಕೆ–24
ದಿನಾಂಕ: 16–10–2022 । ಪುಟಗಳು: 16

# ಲಕ್ಷಾಂತರ ಜನಸ್ತೋಮಕ್ಕೆ ಸಾಕ್ಷಿಯಾದ ಮೈಸೂರು ದಸರಾ

ಮೈಸೂರು:ಅಕ್ಟೋಬರ್ 5ರಂದು ಮೈಸೂರು ಅರಮನೆ ಆವರಣದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾದ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಜಂಬೂಸವಾರಿಗೆ ಚಾಲನೆ ನೀಡಿದರು.ಇವರ ಜೊತೆಯಲ್ಲಿ ಜಿಲ್ಲಾ ಉಸ್ತುವಾರಿ ಉಸ್ತುವಾರಿ ಸಚಿವ ಎಸ್ ಟಿ ಸೋಮಶೇಖರ್,ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನಿಲ್ ಕುಮಾರ್ ರಾಜವಂಶದ ಯದುವೀರ್ ಕೃಷ್ಣ ದತ್ತರಾಜ ಒಡೆಯರ್,ಮೇಯರ್ ಶಿವಕುಮಾರ್ ಜಿಲ್ಲಾಧಿಕಾರಿ ಡಾಕ್ಟರ್ ಬಗಾದಿ ಗೌತಮ್ ಹಾಗೂ ನಗರ ಪೊಲೀಸ್ ಆಯುಕ್ತ ಡಾಕ್ಟರ್ ಚಂದ್ರಗುಪ್ತ ರವರು ರವರು ಸಹ ವೇದಿಕೆಯಲ್ಲಿದ್ದರು.

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ವಿಜಯದಶಮಿಯ ಜಂಬೂ ಸವಾರಿ ಮೆರವಣಿಗೆಯ ವಿಜೃಂಭಣೆಯಿಂದ ಯಶಸ್ವಿಯಾಗಿ ನೆರವೇರಿತು.ಐತಿಹಾಸಿಕ ನವರಾತ್ರಿ ಉತ್ಸವದ ಪ್ರಮುಖ ಘಟ್ಟವಾದ ಜಂಬೂಸವಾರಿಯಲ್ಲಿ ಲಕ್ಷಾಂತರ ಲಕ್ಷಾಂತರ ಮಂದಿ ಜಮಾಯಿಸಿದ್ದು ಈ ಬಾರಿ ವಿಶೇಷವಾಗಿತ್ತು.



48 ಸ್ತಬ್ಧ ಚಿತ್ರಗಳು:ಈ ಬಾರಿ ದಸರಾ ಮಹೋತ್ಸವದಲ್ಲಿ 48 ಸ್ತಬ್ಧ ಚಿತ್ರಗಳು ಒಂದಕ್ಕಿಂತ ಒಂದು ನಾಡಿನ ಕಲಾವೈಭವ ಮೆರೆದವು.ಈ ಸ್ತಬ್ಧಚಿತ್ರಗಳು ಸರಕಾರದ ಸಾಧನೆಗಳು,ಶಿಕ್ಷಣ, ಆರೋಗ್ಯ,ಸಾಹಿತ್ಯ,ಕಲೆ ಹಾಗೂ ಸಾರ್ವಜನಿಕ ಸೌಲಭ್ಯಗಳನ್ನು ಬಿಂಬಿಸುವ ರಾಜ್ಯದ ವಿವಿಧ ಜಿಲ್ಲೆಗಳ ಒಟ್ಟು 48 ಸ್ತಬ್ಧ ಚಿತ್ರಗಳು ಜಂಬೂಸವಾರಿಯ ಜೊತೆಯಲ್ಲಿ ಸಾಗುವ ಮೂಲಕ ಜನರ ಆಕರ್ಷಣೆಗೊಂಡವು.ಬಾಗಲಕೋಟೆ ಜಿಲ್ಲೆಯ ಮುಧೋಳ ಶ್ವಾನ,ಕೊಪ್ಪಳ ಜಿಲ್ಲೆಯ ಗವಿಸಿದ್ದೇಶ್ವರ,ಇಳಕಲ್ ಸೀರೆ ಹಾಗೂ ದುರ್ಗಾಂಬ ದೇವಸ್ಥಾನ ಸ್ತಬ್ಧಚಿತ್ರ,ಬಳ್ಳಾರಿಯ ದುರ್ಗಮ್ಮ ದೇವಸ್ಥಾನ,ಮಿಂಚೇರಿ ಗುಡ್ಡ ಕಮಲ ಬಸದಿ ಹಾಗೂ ರೇಣುಕಾದೇವಿ ದೇವಸ್ಥಾನ,ಮೈಸೂರು ಜಿಲ್ಲೆಯ ಸೋಮನಾಥಪುರದ ಚೆನ್ನಕೇಶವ ದೇವಸ್ಥಾನ ಬೆಂಗಳೂರು ಗ್ರಾಮ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜೈನಬಸದಿ,ಬೆಂಗಳೂರು ನಗರ ಜಿಲ್ಲೆ ಕಡಲೆಕಾಯಿ ಪರಿಷೆ, ಬಸವನಗುಡಿ,ಕಾವೇರಿ ನೀರಾವರಿ ನಿಗಮದ ರೈತರು ಹಾಗೂ ಸಾರ್ವಜನಿಕ ಸೌಕರ್ಯಗಳ,ಅನುಭವ ಮಂಟಪ ಚಾಮರಾಜನಗರಜಿಲ್ಲೆಯ ಪವರ್ ಸ್ಟಾರ್ ದಿ.ಪುನೀತ್ ರಾಜಕುಮಾರ್ ಅವರ ಪ್ರತಿಮೆ ಯೊಂದಿಗೆ,ವನ್ಯಧಾಮ ಹಾಗೂ ಶ್ರೀ ಮಹದೇಶ್ವರ ವಿಗ್ರಹ ಸ್ತಬ್ಧಚಿತ್ರಗಳು,ಆಜಾದಿ ಕಾ ಅಮೃತಮಹೋತ್ಸವ ಸ್ತಬ್ಧಚಿತ್ರ,ಚಿಕ್ಕಬಳ್ಳಾಪುರ ಜಿಲ್ಲೆಯ ಭೋಗಾನಂದೀಶ್ವರ ದೇವಸ್ಥಾನ ಹಾಗೂ ಗ್ರೀನ್ ನಂದಿ ಕ್ಲೀನ್ ನಂದಿ,ಚಿಕ್ಕಮಗಳೂರು ಜಿಲ್ಲೆಯ ಸಪ್ತನದಿಗಳು,ಚಿತ್ರದುರ್ಗ ಜಿಲ್ಲೆಯ ವಾಣಿವಿಲಾಸ ಜಲಾಶಯ,ಒನಕೆ ಓಬವ್ವ,ಕುದುರೆ ಮೇಲೆ ಆಸೀನರಾಗಿದ್ದ ಮದಕರಿ ನಾಯಕ,ದೀಪ ಸ್ತಂಭಗಳನ್ನು ಪ್ರದರ್ಶಿಸುವ ಸ್ತಬ್ಧಚಿತ್ರಗಳು,ದಕ್ಷಿಣ ಕನ್ನಡ ಜಿಲ್ಲೆಯ ಕಂಬಳ ಹುಲಿವೇಷ ಹಾಗೂ ಭೂತ ಕೋಲು,ದಾವಣಗೆರೆ ಜಿಲ್ಲೆಯ ಸಂತೆಬೆನ್ನೂರು ಪುಷ್ಕರಣಿ ಧಾರವಾಡ ಜಿಲ್ಲೆಯ ಸಂಗೀತ ವಿದ್ವಾಂಸರ ಸ್ತಬ್ಧಚಿತ್ರಗಳು,ಬೆಳಕು ಯೋಜನೆ,ಪರಿವರ್ತಕ ಅಭಿಯಾನ,ಗದಗ ಜಿಲ್ಲೆಯ ಶ್ರೀ ಕ್ಷೇತ್ರ ಶ್ರೀಮಂತಗಡ,ಹೊಳಲಮ್ಮದೇವಿ ಮತ್ತು ಶಿವಾಜಿ,ಹಾಸನ ಜಿಲ್ಲೆಯ ಬೇಲೂರು–ಹಳೇಬೀಡು ಹಾಗೂ ಶ್ರಾವಣಬೆಳಗೊಳದ ಗೊಮ್ಮಟೇಶ್ವರ ವಿಗ್ರಹ,ಕೆಎಂಎಫ್ ನಂದಿನಿ ಕ್ಷೀರಧಾರೆ ಹಾಗೂ ಹಾಲು ಉತ್ಪನ್ನಗಳು ಈ ರೀತಿ ಹಲವಾರು ಜಿಲ್ಲೆಗಳ ಹಲವಾರು ಸ್ತಬ್ಧಚಿತ್ರಗಳು ಜನರ ಆಕರ್ಷಣೆಗೊಂಡವು.

ಡ್ರೋನ್ ಶೂಟ್:ಇದೇ ಮೊದಲ ಬಾರಿ ಪ್ರಸ್ತುತಗೊಂಡ ಡ್ರೋನ್ ಶೂಟ್ ವಿಭಿನ್ನ ಕಾರ್ಯಕ್ರಮ ಪ್ರೇಕ್ಷಕರ ಕಣ್ತುಂಬಿತು.

ಅಭಿಮನ್ಯು ಆನೆ ಹ್ಯಾಟ್ರಿಕ್:ಕರ್ನಾಟಕ ಅರಣ್ಯ ಇಲಾಖೆಯ ಹೆಮ್ಮೆಯ ಅಭಿಮನ್ಯು ಸತತ ಮೂರನೇ ಬಾರಿ ಯಶಸ್ವಿಯಾಗಿ ಚಿನ್ನದ ಅಂಬಾರಿ ಹೊತ್ತು ಸಾಧನೆ ಮಾಡಿ,ಸಾವಿರದಿನ್ನೂರು ಕೆಜಿ ಭಾರಹೊತ್ತು 5 ಕಿಲೋಮೀಟರು ಅಂತರವನ್ನು 2.15 ಗಂಟೆಗಳ ಗಂಟೆಯಲ್ಲಿ ನಿರಾಯಾಸವಾಗಿ ಕ್ರಮಿಸಿ ಪ್ರೇಕ್ಷಕರ ಗಮನಸೆಳೆದಿತ್ತು.

ಈ ಬಾರಿ ದಸರಾದಲ್ಲಿ ರಸ್ತೆಯ ಬದಿಯಲ್ಲಿ ಕುಳಿತು ವಿಶ್ವವಿಖ್ಯಾತ ಜಂಬೂಸವಾರಿ ವೀಕ್ಷಿಸಿದ ಜನಸಮೂಹ ಜನರು ಅಲ್ಲಲ್ಲಿ ಜನರ ನೂಕುನುಗ್ಗಲು ನಿಯಂತ್ರಣಕ್ಕೆ ಪೊಲೀಸರು ಹರಸಾಹಸ ಪಡಬೇಕಾಯಿತು.ಮೈಸೂರು ನಗರ ಬಸ್ ನಿಲ್ದಾಣದ ಬಳಿ ನೂಕುನುಗ್ಗಲಿನಲ್ಲಿ ಬ್ಯಾರಿಕೇಡ್ ಗಳು ನೆಲಕ್ಕುರುಳಿದವು. ಜಂಬೂಸವಾರಿಯ ಆರಂಭವಾಗುತ್ತಿದ್ದಂತೆ ಸಯ್ಯಾಜಿರಾವ್ ರಸ್ತೆಯಲ್ಲಿ ಪೊಲೀಸರು ರಸ್ತೆ ಬದಿಯಲ್ಲಿ ಹಾಕಿದವರಿಗೆ ಬಂದವರಿಗೆ ಲಾಠಿ ರುಚಿ ತೋರಿಸಿದರು ಅರಮನೆ ಆವರಣದಿಂದ ಬರುತ್ತಿರುವುದನ್ನು ಗಮನಿಸಿ ಪೊಲೀಸರು ಎಚ್ಚರ ವಹಿಸಿದ್ದರು.

ಅಪಾಯವನ್ನು ಲೆಕ್ಕಿಸದೇ ಶೀತಲ ಕಟ್ಟಡಗಳು ಮರಗಳ ರೆಂಬೆಗಳಗಳ ಮೇಲೆ ಮೇಲೇರಿ ದಸರಾ ಮೆರವಣಿಗೆ ವೀಕ್ಷಿಸಿದರು. ಕೋವಿಡ್ ನಿಂದಾಗಿ ಎರಡು ವರ್ಷಗಳ ನಂತರ ಜಂಬೂ ಸವಾರಿ ದಸರಾ ಮಹೋತ್ಸವದ ಎಲ್ಲಾ ಕಾರ್ಯಗಳು ತುಂಬಾ ಆಕರ್ಷಣೆಯಾಗಿದ್ದವು.

–ಜಾಕೀರ್ ಹುಸೇನ್





2–10–2022 ರಂದು ಹುಬ್ಬಳ್ಳಿ ನಗರದ ಕಿಮ್ಸ್ ಆಸ್ಪತ್ರೆಯ ಮುಂಭಾಗದಲ್ಲಿ ಗಾಂಧೀಜಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸೂಚಿಸಲಾಯಿತು

ಈ ಸಂದರ್ಭದಲ್ಲಿ ಶ್ರೀ(ಸದಾನಂದ ದಂಗನವರ ಕೆಪಿಸಿಸಿ ಕಾರ್ಯದರ್ಶಿ),(ಶ್ರೀ ಅಲ್ತಾಫ್ ಹಳ್ಳೂರ ಡಿಸಿಸಿ ಅಧ್ಯಕ್ಷರು),(ಶ್ರೀ ಎನ್.ಎಚ.ಕೊಣ್ಣಾರೆಡ್ಡಿ.) ಶ್ರೀ ಹನುಮಂತಪ್ಪ ಅಲಕೊಡ,ಶ್ರೀ ಬಸು ಬೆನಕಲ. ಶ್ರೀ ಅನಿಲ ಬುನಿಯಾನ,ಶ್ರೀ ಶಾರುಖ್ ಮುಲ್ಲಾ ಅವರೊಂದಿಗೆ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು.

–ಯೂಸುಫ್ ಎನ್ ಬೇಪಾರಿ

ಕರ್ನಾಟಕದ ಪ್ರತಿ ತಾಲೂಕಿನಲ್ಲಿ ಪಾರ್ಟ್ ಟೈಮ್ (ಗೌರವ ಧನ)

ಫುಲ್ ಟೈಮ್‌ಗೆ (ಸಂಬಳ) ಸ್ಥಳೀಯ ವರದಿಗಾರರಾಗಿ ಕಾರ್ಯ ನಿರ್ವಹಿಸಲು ಆಸಕ್ತ ಯುವಕ–ಯುವತಿಯರು ತಮ್ಮ ಹೆಸರು ಹಾಗೂ ತಾಲ್ಲೂಕು ವಾಟ್ಸ್ ಆಪ್ ಅಥವಾ ಕರೆ ಮಾಡಿ

ಬಸವರಾಜ ಬಳಿಗಾರ ಸಂಪಾದಕರು,
ಕರುನಾಡ ಕಂದ 9986366909.

ಈಗಾಗಲೇ ಮಾಧ್ಯಮದ ಅನುಭವ ಇದ್ದವರು ಹಾಗೂ ಹೊಸದಾಗಿ ಸೇರಬಯಸುವವರು ಸಂಪರ್ಕಿಸಬಹುದು.

ಕರುನಾಡ ಕಂದ
ಸಂಪುಟ–1 । ಸಂಚಿಕೆ–24
ದಿನಾಂಕ: 16–10–2022 । ಪುಟಗಳು: 16

# ಮಾನಸ ಗಂಗೋತ್ರಿ ಎಂಬ ಮಾಸದ ನೆನಪು..!

ಅದು 2019 ರ ಸಮಯ,ಆಗಷ್ಟೇ ಪದವಿ ಮುಗಿದಿತ್ತು ನಂತರದಲ್ಲಿ ಮಾನಸಗಂಗೋತ್ರಿ ಎಂಬ ವಿದ್ಯಾಕಾಶಿಯ ಗೂಡು ಕೂಡಾ ಸೇರಿದೆ. ಅಲ್ಲಿಯವರೆಗೂ ಕನ್ನಡ ಮಾಧ್ಯಮದಲ್ಲೇ ಪತ್ರಿಕೋದ್ಯಮ ಪದವಿ ಮುಗಿಸಿದ್ದ ನನಗೆ, ಅಚಾನಕ್ ಎಂಬಂತೆ ಆರ್ಕಿಯೊಲಜಿ ಎಂಬ ವಿಷಯದಲ್ಲಿ ಸ್ನಾತಕೋತ್ತರ ಪದವಿ ಮಾಡಲು ನಿರ್ಧರಿಸಿದೆ ಅದರಂತೆ ಆರ್ಕಿಯೊಲಜಿ ಅಧ್ಯಯನ ವಿಭಾಗದಲ್ಲಿ ಪ್ರವೇಶಾತಿ ಪಡೆದಿದ್ದು ನಿಜ. ನಂತರದಲ್ಲಿ ತರಗತಿಗಳು ಶುರುವಾದವು ದೈನಂದಿನ ಕ್ಲಾಸ್ ಅಟೆಂಡ್ ಮಾಡುತಿದ್ದೆ,ತರಗತಿಗಳೂ ಕೂಡಾ ಹಾಗೆಯೇ ನಡೆಯುತ್ತಿದ್ದವು.ಈ ಮಧ್ಯೆ ಮೊದಲನೆಯ ಸೆಮಿಷ್ಟರ್ ಪರೀಕ್ಷೆ ಕೂಡಾ ಬಂದೇ ಬಿಡ್ತು ಆರ್ಕಿಯೊಲಜಿ ನನಗೆ ಹೊಸ ವಿಷಯ ಆದ್ದರಿಂದ ಅಂಗೋ ಹಿಂಗೋ ಮೊದಲನೆಯ ಸೆಮಿಷ್ಟರ್ ಪಾಸ್ ಆದೆ.ಹೀಗೆ ಎಲ್ಲವೂ

ಕಾಲಚಕ್ರದಂತೆ ಉರುಳುತಿತ್ತು,ಹೀಗಿರುವಾಗ ಒಮ್ಮೆ ಬಂತು ನೋಡಿ ಕೊರೋನಾ ಎಂಬ ಕರಿನೆರಳು,ಬಿಟ್ಟು ಬಿಡದೆ ನಮ್ಮ ಸ್ನಾತಕೋತ್ತರ ಪದವಿ ಮುಗಿಯುವವರೆಗೂ,ಅದು ಎರಡನೇ ಅಲೆಯನ್ನು ಕೂಡಾ ಮುಗಿಸಿತ್ತು,ವಿಶೇಷವೆಂದರೆ ಈ ಮಧ್ಯೆ ನಮ್ಮ ಆರ್ಕಿಯೊಲಜಿ ಡಿಪಾರ್ಟ್ ಮೆಂಟ್ ನಿಂದ ಎರಡು ಬಾರಿ ಎಕ್ಸವೇಷನ್ ಟ್ರಿಪ್‌ಗೆ ಹೋಗಿದ್ದೋ,ಅಲ್ಲಿಯೇ ನನಗೆ ಈ ಆರ್ಕಿಯೊಲಜಿ ವಿಷಯದ ಮೇಲೆ ತುಂಬಾ ಆಸಕ್ತಿ ಬೆಳೆದದ್ದು.

ಅಂತೂ ಇಂತೂ ಕೊರೋನಾ ಎರಡನೆ ಅಲೆಯ ಜೊತೆಗೆ

ಸ್ನಾತಕೋತ್ತರ ಪದವಿಯೂ ಮುಗಿದಿದೆ ಎರಡು ವರ್ಷ ವಿದ್ಯಾಭ್ಯಾಸ ಮಾಡಿದ ವಿಧ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದ



ಸುವರ್ಣ ಕ್ಷಣಗಳನ್ನು ಮೆಲುಕು ಹಾಕುತ್ತಾ ಭಾರವಾದ ಹೃದಯದೊಂದಿಗೆ ವಿದಾಯ ಹೇಳಿದ್ದಾರೆ.

**ಸ್ನಾತಕೊತ್ತರ ಪದವಿ ಕಲಿತ ವಿಭಾಗದ ಕೊಡಿಗೆಗಳು:**

ಕಲಿಸಿದ ಲೆಕ್ಚರರ್ಸ್,ಭಿನ್ನ ಕಾರಣಗಳಿಗಾಗಿ ನೆನಪಿನಲ್ಲಿ ಉಳಿದಿರುವ ಉಪನಾಸ್ಯಕರು, ಬಯಲು ರಂಗಮಂದಿರ,ಹುಟ್ಟು ಹಬ್ಬಕ್ಕೆ ಸಾಕ್ಷಿಯಾದ ಬುದ್ದಪ್ರತಿಮೆ ಹಾಗೂ ದೊಡ್ಡಗಡಿಯಾರದ ಆವರಣ,ಜಾಣ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ತಾಣ ಗ್ರಂಥಾಲಯ ಹಾಗೂ ಜಯಲಕ್ಷ್ಮಿ ಅರಮನೆಯ ಕಾರಿಡಾರ್,ಹೀಗೆ ಸಾವಿರಾರು ನೆನಪುಗಳನ್ನು ಕಟ್ಟಿಕೊಟ್ಟಿದೆ ಈ ಮಧ್ಯೆ ಪರೀಕ್ಷೆ,ಪ್ರಾಜೆಕ್ಟ್, ವೈವಾ ಅಂತ ಟೆನ್ಷನ್ ಇದ್ರೂ ಮನಸ್ಸಿನ ಒಳಗೆ ಬಿಟ್ಟು ಹೋಗುವ ಭಯ ಕಾಡುತ್ತಲೇ ಇತ್ತು ಕೊನೆ ಕ್ಷಣದಲ್ಲಿ ಕೆಲವರು ಇನ್ನೂ ಹತ್ತಿರ ಹಾಗಿದಂತೂ ನಿಜ.

ಮರುಕಳಿಸದ ನೆನಪನ್ನ ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಾ,ಸಾಕಷ್ಟು ಚೇಷ್ಟೆ,ಒಂದಿಷ್ಟು ಬೇಸರ,ಮತ್ತೆ ಬೇರೆ ಬೇರೆ ಡಿಪಾರ್ಟ್ಮೆಂಟ್‌ನ ಗೆಳತಿಯರೊಂದಿಗೆ ವಾರಕ್ಕೊಮ್ಮೆ ಹೋಟೆಲ್ ಸುಗ್ಗಿ ಹಟ್ಟಿಯ ಪಾಟ್ ಬಿರಿಯಾನಿ ತಿಂದದ್ದು, ಹೂಟಗಳ್ಳಿಯ ನಮ್ ಅಣ್ಣನ ರೂಮ್‌ನಲ್ಲಿ ವಾರಕ್ಕೆ ಮೂರುದಿನ ಡಿಪಾರ್ಟ್ ಮೆಂಟ್ ಸ್ನೇಹಿತರೊಂದಿಗೆ ಪಾರ್ಟಿ ಮಾಡಿದ್ದು,ಪಾಕವಿದ್ಯೆ ಪ್ರವೀಣನಾಗಿದ್ದ ಸಂಗಮೇಶ್‌ನ ಕೈಚಳಕದ ಅಡುಗೆಯ ಸವಿರುಚಿ, ಯಾದಗಿರಿಯ ಸುರಪುರದ ಸ್ನೇಹಿತನ ಮದುವೆ ಸಂದರ್ಭದಲ್ಲಿ ಅವರ ಊರಿನಲ್ಲಿ ಕಳೆದ ಕ್ಷಣ, ಸ್ನೇಹಿತೆಯರೊಟ್ಟಿಗೆ ಕೈ ಕೈ ಹಿಡಿದು ಸುತ್ತಾಡಿದ ಕುಕ್ಕರಹಳ್ಳಿಯ ಕೆರೆಯ ಆವರಣ,ಪ್ರವಾಸಿ ಮಂದಿರಗಳಿಗೆ ಭೇಟಿ ನೀಡಿದ ಕ್ಷಣ,ಇವೆಲ್ಲವೂ ಈಗ ಬರೀ ನೆನಪಷ್ಟೇ.ಒಂದು ಕಡೆ ಡಿಪಾರ್ಟ್ಮೆಂಟ್‌ನ ಸ್ನೇಹಿತರು ಇನ್ನೊಂದು ಕಡೆ ಹಾಸ್ಟೆಲ್‌ನ ಸ್ನೇಹಿತರು ಇಬ್ಬರು ಒಂದೇ ತೂಕ ಬರ್ತಾರೆ.ನನಗೆ ನೆನಪಿರುವ ಹಾಗೇ ನಮ್ಮ ಸ್ನಾತಕೋತ್ತರ ಪದವಿಯ ಅತೀ ಹೆಚ್ಚು ಸಮಯವನ್ನು ಜೆ.ಸಿ ಕಾಲೇಜು ಕ್ಯಾಂಟೀನ್‌ನಲ್ಲಿ ಕಳೆದಿದ್ದೆ ಒಂದು ವಿಸ್ಮಯ.

ಹುಡುಗರಿಗೆ ಲೇಡಿಸ್ ಹಾಸ್ಟೇಲ್‌ನ ರಸ್ತೆ ಸವೆಸಿದ ದಿನಗಳು,ಹುಡುಗ–ಹುಡುಗಿಯರಿಬ್ಬರಿಗೂ ಹರಟೆಯ ಅಡ್ಡವಾಗಿದ್ದ ರೌಂಡ್ ಕ್ಯಾಂಟೀನ್, ಅದರ ಎದುರಿಗೆ ನೆನಪುಗಳಷ್ಟೇ ಗಾಢವಾಗಿ ಬೇರುಬಿಟ್ಟಿರುವ ಆಲದ ಮರ,ಮಗ್ಗುಲಲ್ಲೇ ಇರುವ ಕುಕ್ಕರಹಳ್ಳಿ ಕೆರೆ,ಪಕ್ಷಿಗಳ ಕಲರವ,ಸಾಲುಮರಗಳ ಚಪ್ಪರದಿಂದ ಕೂಡಿರುವ ಜೆ.ಸಿ ಕಾಲೇಜು ಡೌನ್ ಹೀಗೆ "ನೆನಪುಗಳ ಮಾತು ಮಧುರ" ಎಂಬಂತೆ ಪ್ರತಿಯೊಬ್ಬರಿಗೂ ಗಂಗೋತ್ರಿ ಎಂದರೆ ನೆನಪುಗಳ ಭಾವಭಿತ್ತಿ,ಈಗಷ್ಟೇ ಪದವಿ ಮುಗಿಸಿ ವಿಶ್ವವಿದ್ಯಾಲಯದ ಮೆಟ್ಟಿಲು ಹತ್ತಿರುವ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಸೊಬಗನ್ನು ನೋಡಿ ಮೈಮರೆಯುವುದಂತೂ ಸತ್ಯ!.

–ಚಂದು ನಿಹಾನ್,ಮೈಸೂರು

## "ಇಷ್ಟೇ ಪ್ರಪಂಚ"

ಹೆತ್ತವರನ್ನು ಬಿಟ್ಟು
ಅನತಿ ದೂರ
ಒಂಟಿಯಾಗಿ ಬಾಳ್ವೆ
ಮಡದಿ, ಮಕ್ಕಳು
ಒಂದು ಕಡೆ
ಕಾಯಕವೇ ಕೈಲಾಸ
ಅನ್ನುವ ಖ್ಯಾತಿ
ಅದೇ ಗೌರವ
ಬೆಲೆಯಿಲ್ಲದ ಬಾಳು
ಕಣ್ಣೀರಿನ ಗೋಳು
ಹಸಿವು ನೀಗಿಸಲು
ಹರಸಾಹಸದ ಬವಣೆ
ಸವೆಸಿದ ಹಾದಿ
ಸುಖವೂ ಸಲೀಸಾಗಿ
ಕಷ್ಟವ ಮರೆಸಿ
ಜ್ಞಾನವ ಪಸರಿಸಿ
ಸಹನೆಯ ತುಂಬಿ
ಎರಡು ದೋಣಿಯ
ಮೇಲೆ ಕಾಲು
ತೂಗುಯ್ಯಾಲೆಯಲ್ಲಿ ಆಟ
ಇದೇ ವಿಧಿಯಾಟ
ಎನ್ನ ಸಂಸ್ಕಾರ
ಬುದ್ಧಿ ಮತ್ತೆಯು
ಎತ್ತಣವೂ ಸಾಗುವುದೆಂಬ
ನಿರೀಕ್ಷೆಯಲ್ಲಿ ಸದ್ಗುಣ
ಹೆಜ್ಜೆಗಳನ್ನು ಇಟ್ಟು
ನ್ಯಾಯ ಒದಗಿಸುವ
ಶಕ್ತಿ ನೀನಾಗು
ಯುಕ್ತಿ ನಾನಾಗುವೆ
ಇಷ್ಟೇ ಪ್ರಪಂಚ.

–ದೇವರಾಜು ಬಿ ಎಸ್ ಹೊಸಹೊಳಲು

## ಹೆಣ್ಣಿನ ಮಹತ್ವ

ಪ್ರೀತಿಗೆ ಮತ್ತೊಂದು ಹೆಸರೇ ಹೆಣ್ಣು
ಮಮತೆಯ ಕರೆಯೋಲೆ ಹೆಣ್ಣು
ಗಂಡಿಗೆ ಸರ್ವಸ್ವ ಹೆಣ್ಣು
ತಂದೆಗೆ ಪ್ರಪಂಚವೇ ಹೆಣ್ಣು.

ಹೆಣ್ಣು ಎಂದರೆ ಪವಿತ್ರ
ಹೆಣ್ಣು ಎಂದರೆ ಹೂವು
ಹೆಣ್ಣು ಎಂದರೆ ಬಾಳಿನ ಕಣ್ಣು
ಹೆಣ್ಣು ಎಂದರೆ ಮನೆಯ ದೀಪ

ಹೆಣ್ಣನ್ನು ದ್ವೇಷಿಸಿದರೆ ನೀನಲ್ಲ ಮನುಜ
ಹೆಣ್ಣನ್ನು ಗೌರವಿಸಿದರೆ ಆಗುವುದು ಜನ್ಮ ಪಾವನ
ಭೂಮಿಯಲ್ಲಿ ಹೆಣ್ಣಿಗೂ ಸಮಾನ ಹಕ್ಕಿದೆ ಹೆಣ್ಣು
ಜಗತ್ತಿನ ಕಣ್ಣು.

–ಅಕ್ಷತಾ ಹರೋಲಿ
ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ

# ಹೇಮಗುಡ್ಡದಲ್ಲಿ ಅದ್ದೂರಿ ದಸರಾ ಆಚರಣೆ

ಕೊಪ್ಪಳ–ಗಂಗಾವತಿ ತಾಲೂಕಿನ ಐತಿಹಾಸಿಕ ಸ್ಥಳ ಹಾಗೂ ಕರ್ನಾಟಕದಲ್ಲಿ ದಸರಾ ಪ್ರಾರಂಭದ ಮೂಲಸ್ಥಳವಾದ ಹೇಮಗುಡ್ಡದಲ್ಲಿ ನಾಡಹಬ್ಬ ದಸರಾದ ಪ್ರಯುಕ್ತ ಒಂಬತ್ತು ದಿನಗಳ ಕಾಲ ನವದುರ್ಗೆಯರ ಪೂಜಾ ಕಾರ್ಯಗಳು,ಪುರಾಣ ಪ್ರವಚನ,ಹೋಮ ಹವನಗಳು ಜರುಗಿದವು ದಸರದ ಒಂಬತ್ತನೆಯ ದಿನವಾದ ದಿನಾಂಕ 04–10–2022 ಮಂಗಳವಾರದಂದು ಬೆಳಿಗ್ಗೆ 10:30 ರಿಂದ 11:30 ರ ವರೆಗೆ 40 ಜೋಡಿ ಸಾಮೂಹಿಕ ವಿವಾಹಗಳು ಮತ್ತು ಸಂಜೆ 4:30ಕ್ಕೆ ದುರ್ಗಾದೇವಿ ಮೂರ್ತಿಯನ್ನು ಹೊತ್ತು ಆನೆಯ ಮೇಲೆ ಅಂಬಾರಿ ಮೆರವಣಿಗೆ ಸುಮಾರು ಎರಡು ಕಿಲೋಮೀಟರ್ ವರೆಗೆ ವಿಜೃಂಭಣೆಯಿಂದ ನೆರವೇರಿತು ಇದರ ಎಲ್ಲಾ ಜವಾಬ್ದಾರಿಯನ್ನು ಎಚ್ ಜಿ ರಾಮುಲು ಕುಟುಂಬದವರು ವಹಿಸಿಕೊಂಡಿದ್ದರು.





ಕರ್ನಾಟಕದ ಪ್ರತಿ ತಾಲೂಕಿನಲ್ಲಿ ಪಾರ್ಟ್ ಟೈಮ್ (ಗೌರವ ಧನ)
ಫುಲ್ ಟೈಮ್‌ಗೆ (ಸಂಬಳ) ಸ್ಥಳೀಯ ವರದಿಗಾರರಾಗಿ ಕಾರ್ಯ ನಿರ್ವಹಿಸಲು ಆಸಕ್ತ ಯುವಕ–ಯುವತಿಯರು ತಮ್ಮ ಹೆಸರು ಹಾಗೂ ತಾಲ್ಲೂಕು ವಾಟ್ಸ್ ಆಪ್ ಅಥವಾ ಕರೆ ಮಾಡಿ
ಬಸವರಾಜ ಬಳಿಗಾರ ಸಂಪಾದಕರು,
'ಕರುನಾಡ ಕಂದ' ಮೊ : 9986366909
ಈಗಾಗಲೇ ಮಾಧ್ಯಮದ ಅನುಭವ ಇದ್ದವರು ಹಾಗೂ ಹೊಸದಾಗಿ ಸೇರಬಯಸುವವರು ಸಂಪರ್ಕಿಸಬಹುದು.
ನಿಮ್ಮ ಸ್ಥಳೀಯ ಸುದ್ದಿ ಹಾಗೂ ಎಲ್ಲಾ ರೀತಿಯ ಜಾಹೀರಾತುಗಳಿಗಾಗಿ ಕರೆ ಮಾಡಿ 9986366909

ಕರುನಾಡ ಕಂದ
ಸಂಪುಟ-1 । ಸಂಚಿಕೆ-24
ದಿನಾಂಕ: 16-10-2022 । ಪುಟಗಳು: 16

# ನ್ಯೂ ಲೈಫ್ ಪತ್ತಾರ ಫಿಜಿಯೋಥೆರಪಿ ಕ್ಲಿನಿಕ್ ದೇಶದಲ್ಲೇ ಒಂದು ಹೆಸರಾಂತ ಕ್ಲಿನಿಕ್ ಆಗಿ ಹೊರಹೊಮ್ಮಲಿ




ಅಥಣಿ : ನೀವು ಆರೋಗ್ಯಕರವಾಗಿ ಇರಬೇಕೆಂದರೆ ಯಾವಾಗಲೂ ಚಲನವಲನದಿಂದ ಇರಬೇಕು, ನಿಮ್ಮ ಜೀವನ ಆರೋಗ್ಯದಿಂದಿರಲಿ, ಮಧುಮೇಹ, ಹೃದ್ರೋಗ, ರಕ್ತದೊತ್ತಡ, ಹೊಟ್ಟೆನೋವು, ತಲೆನೋವು, ಕೀಲುನೋವು ಮತ್ತಾವುದೇ ರೋಗದಿಂದ ಬಳಲುತ್ತಿರಲಿ ಅವರು ಯಾವಾಗಲೂ ಚಟುವಟಿಕೆಯಿಂದಿರಬೇಕು ಮತ್ತು ನಿಯಮಿತವಾಗಿ ಮತ್ತು ನಿರಂತರವಾಗಿ ವ್ಯಾಯಾಮ ಮಾಡುತ್ತಿರಬೇಕು ಎಂದು ಐದು ದಿನಗಳ ಕಾಲ ನಡೆದ ಫಿಜಿಯೋಥೆರಪಿ ಚಿಕಿತ್ಸಾ ಶಿಬಿರದ ಸಮಾರೋಪ ಸಮಾರಂಭದಲ್ಲಿ ಡಾ.ಹನುಮಂತರಾವ್ ಪತ್ತಾರ ಅಭಿಪ್ರಾಯಪಟ್ಟರು.

ನ್ಯೂ ಲೈಫ್ ಪತ್ತಾರ್ ಫಿಜಿಯೋಥೆರಪಿ ಹಾಗೂ ಶ್ರೀಬಸವೇಶ್ವರ ಪದವಿ ಮಹಾವಿದ್ಯಾಲಯದ ಐ.ಕ್ಯೂ.ಎ.ಸಿ,ರೆಡ್ ಕ್ರಾಸ್ ಮತ್ತು ಎನ್.ಎಸ್.ಎಸ್. ಘಟಕದ ಸಹಯೋಗದಲ್ಲಿ ಐದು ದಿನಗಳ ಕಾಲ ನಡೆದ ಫಿಜಿಯೋಥೆರಪಿ ಚಿಕಿತ್ಸಾ ಶಿಬಿರ ಯಶಸ್ವಿಯಾಗಿ ನಡೆದಿದೆ ಎಂದು ಹೇಳುತ್ತೇನೆ.

ನ್ಯೂ ಲೈಫ್ ಪತ್ತಾರ ಫಿಜಿಯೋಥೆರಪಿ ಕ್ಲಿನಿಕ್ ಜಮಖಂಡಿಗೆ ರಾಜ್ಯ ಹಾಗೂ ಹೊರ ರಾಜ್ಯದ ನಾನಾ ಭಾಗಗಳಿಂದ ಜನರು ಚಿಕಿತ್ಸೆಗೋಸ್ಕರ ಆಗಮಿಸುತ್ತಾರೆ. ಎಂಟೆತ್ತು ವರ್ಷಗಳಿಂದ ರೋಗಿಗಳಿಗೆ ಉತ್ತಮವಾದ ಚಿಕಿತ್ಸೆಯನ್ನು ನೀಡುತ್ತಾ ಪ್ರೀತಿಗೆ ಪಾತ್ರರಾಗಿದ್ದೇವೆ ಹಾಗೂ ಉನ್ನತ ತಂತ್ರಜ್ಞಾನದ ಯಂತ್ರಗಳೇ 21 ನೇ ಶತಮಾನದ ಔಷಧಿಗಳು ಎಂದು ಹೇಳಿದರು.

ಶ್ರೀ ಬಸವೇಶ್ವರ ಪದವಿ ಮಹಾವಿದ್ಯಾಲಯದ ಅಧ್ಯಕ್ಷರಾದ ಶ್ರೀ ಪ್ರೊಫೆಸರ್ ಎಸ್ ಬಿ ದೇಗೌಡ ನಿರ್ದೇಶಕರು (ವಿಶ್ರಾಂತ) ಕಾಲೇಜು ಶಿಕ್ಷಣ ಇಲಾಖೆ ಬೆಂಗಳೂರು ಅವರು ಮಾತನಾಡಿ **"ವೈದ್ಯೋ ನಾರಾಯಣ ಹರಿ"** ಎನ್ನುವಂತೆ ನಮ್ಮ ಬದುಕು ಸಾವಿನ ನೋವಿನ ಜೊತೆ ಇರುವ ನೋವಿಗೆ ಸಾಂತ್ವನ ಹೇಳುವ ಧೈರ್ಯವ ನೀಡುವ ಸದಾನಗುಮೊಗದ ಸಾವಿನ ಅಂಚಿನಲ್ಲಿದ್ದರೂ ಬದುಕುವ ವಿಶ್ವಾಸವನ್ನು ಕೊಡುವ ರಕ್ತ ಸಂಬಂಧಿ ಯಾಗಿದಿದ್ದರು ಸ್ವಂತ ಎನಿಸುವಂತವ ಸಾಧಕ, ಬೋಧಕ, ಜೀವ ರಕ್ಷಕ, ಶ್ರಮಿಕ, ದೈವ ಸಂಭೂತ ವೈದ್ಯರು ಅಂದರೆ ತಪ್ಪಾಗುವುದಿಲ್ಲ ಯಾವುದೇ ತರಹದ ಗುಳಿಗೆ ಇಂಜೆಕ್ಷನ್ ನೀಡಲಾಗದೆ ಒಂದು ಯಾಂತ್ರಿಕ ಮಷೀನ್ ಗಳ ಸಹಾಯದಿಂದ ಉತ್ತಮವಾದ ಚಿಕಿತ್ಸೆಯನ್ನು ತಾವೆಲ್ಲರೂ ಐದು ದಿನಗಳ ಕಾಲ ನೀಡಿದ್ದೀರಿ.

ಒಂದು ವಿಶೇಷ ಏನೆಂದರೆ "ದೇಶದಲ್ಲೇ ಆರನೇ ಮಷೀನ್, ಹಾಗೂ ರಾಜ್ಯದಲ್ಲೇ ಮೊದಲ ಮಷೀನ್ ಇರೋದು ನ್ಯೂ ಲೈಫ್ ಪತ್ತಾರ ಫಿಜಿಯೋಥೆರಪಿ ಕ್ಲಿನಿಕ್ ನಲ್ಲಿ ಮಾತ್ರ"ಎಂದು ಹೆಮ್ಮೆಯಾಗುತ್ತದೆ ನಮಗೆ, ನಿಮ್ಮ ಈ ಸೇವೆ ಅಥಣಿ, ರಾಯಬಾಗ, ಹಾರೋಗೇರಿ ಭಾಗದ ಜನರಿಗೆ ತುಂಬಾ ಉಪಯೋಗವಾಗಿದೆ ಎಂದು ಹೇಳಿದರು.

ಪ್ರಾಂಶುಪಾಲರಾದ ಪ್ರೊಫೆಸರ್ ಆನಂದ ಲಗಳಿ ಅವರು ಮಾತನಾಡುತ್ತಾ ಪ್ರಾಚೀನ ಭಾರತದ ಯೋಗಕ್ಕೆ ಇಂದು ಅಂತರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಸ್ಥಾನ ದೊರೆತಿದೆ ಹಾಗೂ "ನ್ಯೂ ಲೈಫ್ ಪತ್ತಾರ ಫಿಜಿಯೋಥೆರಪಿ ಕ್ಲಿನಿಕ್ ದೇಶದಲ್ಲೇ ಒಂದು ಹೆಸರಾಂತ ಕ್ಲಿನಿಕ್ ಆಗಿ ಹೊರಹೊಮ್ಮಲಿ" ಎಂದು ನಾಡಿನ ಆರಾಧ್ಯ ದೈವರಾಧ ಶಿವಯೋಗಿಗಳಲ್ಲಿ ಪ್ರಾರ್ಥಿಸುತ್ತೇವೆ ಎಂದು ಹೇಳಿದರು ಹಾಗೂ ಡಾಕ್ಟರ್ ಹಣಮಂತರಾವ್ ಪತ್ತಾರ ಅವರ ಆತ್ಮೀಯ ಸ್ನೇಹಿತರಾದ ಸದಾಕಾಲ ಬೆನ್ನಲುಬಾಗಿ ಸೇವೆ ಸಲ್ಲಿಸುತ್ತಿರುವ ಡಾಕ್ಟರ್ ಶ್ರೀಕಾಂತ ಸಾಲಿಮನಿ ಅವರ ಸೇವೆ ಅನನ್ಯವಾದುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಶಿಧರ ಪತ್ತಾರ,ನಾಮದೇವ ಆಸಂಗಿ,ಲಕ್ಷ್ಮಣ್ ಕಾಂಬಳೆ,ಘಾಟಗೆ ಮೇಡಂ, ಪೂಜಾ ಹಿರೇಮಠ,ಭಾಗ್ಯಶ್ರೀ ಪೂಜಾರಿ,ಅಂಕಿತಾ ಪಾಟೀಲ,ಸ್ವಾತಿ ಸವದಿ,ಲಕ್ಷ್ಮೀ ಮಿರ್ಜಿ,ತಂಜಿಲ ಜಮಾದಾರ,ಪ್ರಶಾಂತ ಕಾಂಬಳೆ, ಮನೋಜ ಕಾರಾಜನಗಿ ಕಾಲೇಜಿನ ಆಡಳಿತ ಮಂಡಳಿಯವರು ಹಾಗೂ ಸಿಬ್ಬಂದಿ ವರ್ಗದವರು,ವಿದ್ಯಾರ್ಥಿ-ವಿದ್ಯಾರ್ಥಿನಿಯರು ಹಾಜರಿದ್ದರು ಪೂಜಾ ಮಾನೆ ಪ್ರಾರ್ಥನೆ ಸಲ್ಲಿಸಿದರು,ಐಶ್ವರ್ಯ ಮಿರ್ಜಿ ಸ್ವಾಗತಿಸಿದರು,ಅಪ್ಸನಾ ಅವಟಿ ನಿರೂಪಿಸಿದರು ಪ್ರಕಾಶ್ ಕಾಂಬಳೆ ವಂದನಾರ್ಪಣೆ ಸಲ್ಲಿಸಿದರು.

**ವರದಿ: ವಿಶ್ವನಾಥ ಹರೋಲಿ**

# ಗ್ರಾ.ಪಂ.ಮಂಗಳೂರು ವತಿಯಿಂದ ಕಸದ ಸಂಗ್ರಹಣೆ ಬುಟ್ಟಿ ವಿತರಣೆ



ಕೊಪ್ಪಳ ಜಿಲ್ಲೆಯ ಕುಕನೂರು ತಾಲೂಕಿನ ಮಂಗಳೂರು ಗ್ರಾಮ ಪಂಚಾಯಿತಿ ವತಿಯಿಂದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಜಯಂತಿ ಅಂಗವಾಗಿ ಅಕ್ಟೋಬರ್ 2 ರವಿವಾರದಂದು ನೌಕರರು ಹಾಗೂ ಸಿಬ್ಬಂದಿಗಳು ಸ್ವಚ್ಛ ಭಾರತ ಒಂದು ಹೆಜ್ಜೆ ಸ್ವಚ್ಛತೆ ಕಡೆ ಎನ್ನುವಂತೆ ಸ್ವತಃ ತಾವೇ ಮನೆ ಮನೆಗೆ ತೆರಳಿ ಕಸದ ಬುಟ್ಟಿ ಹಂಚಲು ಪ್ರಾರಂಭಿಸಿದರು. ಇಲ್ಲಿಯವರೆಗೆ 2520ಕ್ಕೂ ಹೆಚ್ಚು ಮನೆಗಳಿಗೆ ಕಸದ ಬುಟ್ಟಿ ವಿತರಿಸಿದ್ದಾರೆ.ಕಸವನ್ನು ಎಲ್ಲಿಯೂ ಚೆಲ್ಲದೇ ಕಸದ ಬುಟ್ಟಿಯಲ್ಲಿ ಸಂಗ್ರಹಿಸಿ ಪಂಚಾಯಿತಿಯ ವಾಹನ ಬಂದಾಗ ಕಸವನ್ನು ಹಾಕುವದು.ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಸ್ವಚ್ಛ ಭಾರತ ಅಭಿಯಾನವನ್ನು ಮೊದಲು ಸೂಚಿಸಿದ್ದರು.ಈ ಅಭಿಯಾನಕ್ಕೆ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಕಸ ಗುಡಿಸುವುದರ ಮೂಲಕ ಚಾಲನೆ ನೀಡಿದರು.

ಇಡೀ ರಾಷ್ಟ್ರಕ್ಕೆ ಸ್ವಚ್ಛತೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಈ ಅಭಿಯಾನ ಸಹಕಾರಿಯಾಗಿದೆ. ಸ್ವಚ್ಛ ಭಾರತ ಅಭಿಯಾನದಿಂದ ಗ್ರಾಮಗಳು, ತಾಲೂಕುಗಳು, ಜಿಲ್ಲೆಗಳು, ರಾಜ್ಯಗಳು, ಸ್ವಚ್ಛತೆಯತ್ತ ಸಾಗುತ್ತಿದೆ ಎಂದು ಹೇಳಬಹುದಾಗಿದೆ. ಸಾರ್ವಜನಿಕರು ಮೊದಲನೆಯದಾಗಿ ನಾವುಗಳು ನಮ್ಮ ಗ್ರಾಮವನ್ನು ಸ್ವಚ್ಛವಾಗಿ ಜೊತೆಗೆ ನಮ್ಮ ಮನೆಯನ್ನು ಸ್ವಚ್ಛತೆ ಕಾಪಾಡಬೇಕು ಇದು ನಮ್ಮ ಕರ್ತವ್ಯವಾಗಿದೆ ಎಂದು ಕುಕನೂರು ತಾಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀರಾಮಣ್ಣ ದೊಡ್ಡಮನಿ ತಿಳಿಸಿದರು.ಸ್ವಚ್ಛತೆಯ ಕಾಯಕವು ಅತ್ಯಮೂಲ್ಯ ಸ್ವಚ್ಛತೆ ಎಂಬುದು ಪ್ರತಿ ಮನೆ ಮನೆ ಗ್ರಾಮಗಳಲ್ಲಿ ಆಗಬೇಕಾಗಿದೆ ಕುಕನೂರು ತಾಲೂಕು ಪಂಚಾಯಿತಿಯ ನಿರ್ದೇಶಕರಾದ ಶ್ರೀ ವೆಂಕಟೇಶ್ ಅವರು ತಿಳಿಸಿದ್ದಾರೆ.ಪ್ರತಿಯೊಂದು ಗ್ರಾಮವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು ಗ್ರಾ.ಪಂ. ಜೊತೆ ಸಾರ್ವಜನಿಕರ ಸಹಕಾರ ಅತಿ ಅವಶ್ಯಕ ಎಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ನೀಲಂ ಟಿ.ಚಳಗೇರಿ ಅವರು ತಿಳಿಸಿದರು. ಕಸದ ಬುಟ್ಟಿ ಹಂಚಿಕೆಯಲ್ಲಿ ಗ್ರಾಮ ಪಂಚಾಯತಿಯ ದ್ವಿತೀಯ ದರ್ಜೆ ಸಹಾಯಕರಾದ ಭೀಮಣ್ಣ ಕುದ್ರಿಕೊಟಗಿ,ಕರವಸೂಲಿಗಾರ ರಾಘವೇಂದ್ರ ದೇಶಪಾಂಡೆ,ಕಂಪ್ಯೂಟರ್ ಆಪರೇಟರ್ ವೀರೇಶ್ ಚಿನ್ನೂರು,ಭರತೇಶ್ ದೇಸಾಯಿ,ಆವಾಸ್ ಮಿತ್ರ ಕಿರಣ್ ಪೂಜಾರ ಹಾಗೂ ಗ್ರಾಮ ಪಂಚಾಯತಿಯ ಸಿಬ್ಬಂದಿಗಳು ಭಾಗವಹಿಸಿದ್ದರು.

**ವರದಿ-ರವಿ ನಿಂಗಪ್ಪ ಆಗೋಲಿ**

# ಅಂಬೇಡ್ಕರ್ ವಸತಿ ಶಾಲೆ ಉದ್ಘಾಟನೆ



ಅರಕಲಗೂಡು : ಮಕ್ಕಳಿಗೆ ಅನುಕೂಲವಾಗುವಂತೆ ವಸತಿ ಶಾಲೆಗಳಿಗೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಲಾಗುವುದು ಎಂದು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಹೇಳಿದರು.

ತಾಲೂಕಿನ ಬರಗೂರು- ದೊಡ್ಡಮಗ್ಗೆ ಗ್ರಾಮದಲ್ಲಿ 24 ಕೋಟಿ ರೂ ವೆಚ್ಚದಲ್ಲಿ ಸ್ಥಾಪಿಸಿರುವ ಅಂಬೇಡ್ಕರ್ ವಸತಿ ಶಾಲೆ ಉದ್ಘಾಟಿಸಿ ಮಾತನಾಡಿದ ಅವರು ರಾಜ್ಯದಲ್ಲಿರುವ ಹಾಸ್ಟೆಲ್ ಗಳ ನಿರ್ವಹಣೆಗೆ 1110 ಕೋಟಿ ರೂ ಅಗತ್ಯವಿದ್ದು ಸದ್ಯಕ್ಕೆ 710 ಕೋಟಿ ರೂ ಬಿಡುಗಡೆ ಮಾಡಲಾಗಿದ್ದು ಮೆರಿಟ್ ಆಧಾರದ ಮೇಲೆ ಹಾಸ್ಟೆಲ್ ಗಳ ನಿರ್ವಹಣೆಗೆ ಅನುದಾನ ನೀಡಲಾಗುವುದು ವಸತಿ ಶಾಲೆಗಳಲ್ಲಿ ಮಕ್ಕಳ ಉನ್ನತ ಶಿಕ್ಷಣಕ್ಕೆ ನೆರವಾಗುವ ನಿಟ್ಟಿನಲ್ಲಿ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಹೆಣ್ಣು ಮಕ್ಕಳಿಗೆ ಕರಾಟೆ ತರಬೇತಿ ನೀಡುವ ಸಮವಸ್ತ್ರಗಳಿಗೆ 18 ಕೋಟಿ ರೂ ವ್ಯಯಿಸಲಾಗುತ್ತಿದೆ ಎಂದರು ತಾಲೂಕಿನಲ್ಲಿ ಅರೆಬರೆ ಕಾಮಗಾರಿ ನಡೆದು ಪಾಳು ಬಿದ್ದಿರುವ 41 ಅಂಬೇಡ್ಕರ್ ವಸತಿ ಶಾಲೆಗಳ ಅಭಿವೃದ್ಧಿ ಕೆಲಸಕ್ಕಾಗಿ 3.41 ಕೋಟಿ ರೂ ಅನುದಾನ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು.

ದೇಶಕ್ಕೆ ಸ್ವಾತಂತ್ರ್ಯ ಬಂದು ಎಪ್ಪತ್ತು ವರ್ಷ ಕಳೆದರೂ ಕೆಳ ವರ್ಗದ ಜನರ ಮೇಲೆ ನಡೆಯುತ್ತಿರುವ ಶೋಷಣೆ ದಬ್ಬಾಳಿಕೆ ಇನ್ನೂ ನಿಲ್ಲದರ ಅಸ್ಪೃಶ್ಯತೆ ಆಚರಣೆ ಜೀವಂತವಾಗಿದೆ.ಇದನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಜನ ಜಾಗೃತಿ ನಡೆಸಲಾಗುತ್ತಿದೆ. ರಾಜಕಾರಣಿಗಳಿಗಿಂತ ಸಮಾಜದ ಜನತೆ ಸಮಾನತೆ ತಂದು ಬದಲಾವಣೆಗೆ ಮುನ್ನುಡಿ ಬರೆಯಬೇಕಿದೆ ಎಂದರು.ಕಲ್ಯಾಣ ಇಲಾಖೆ ಜಿಲ್ಲಾ ಉಪ ನಿರ್ದೇಶಕ ಎಚ್.ವಿ. ಮಂಜುನಾಥ್,ತಹಸೀಲ್ದಾರ್ ಶ್ರೀನಿವಾಸ್, ತಾಪಂ ಇಒ ಗಿರೀಧರ್,ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಕೌಸರ್ ಅಹಮದ್, ಮಲ್ಲಿಕಾರ್ಜುನ ಎಸ್.ಅಲ್ಲೀಪುರ್,ಪ್ರಾಂಶುಪಾಲೆ ಜಿ. ಸುಮಲತ,ಬಿಇಒ ದೇವರಾಜು,ಗ್ರಾಪಂ ಅಧ್ಯಕ್ಷೆ ಮಂಜುಳಾ,ಸದಸ್ಯರು ಇತರರಿದ್ದರು.

ವಸತಿ ಶಾಲೆ ಹೆಣ್ಣು ಮಕ್ಕಳು ಕರಾಟೆ ಪ್ರದರ್ಶಿಸಿದರು.

ಇದಕ್ಕೂ ಮುನ್ನ ಸಚಿವ ಕೋಟಾ ಶ್ರೀನಿವಾಸ್ ಪೂಜಾರಿ ಅವರು ಗ್ರಾಪಂ ವ್ಯಾಪ್ತಿಯ ಹಳ್ಳಿಗಳಲ್ಲಿ ರಸ್ತೆ,ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ 1.19 ಕೋಟಿ ರೂ ವೆಚ್ಚದ ವಿವಿಧ ಪ್ರಗತಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿದರು.

**-ಸುಧೀಂದ್ರ.ಡಿ.**

ಕರುನಾಡ ಕಂದ
ಸಂಪುಟ-1 । ಸಂಚಿಕೆ-24
ದಿನಾಂಕ: 16-10-2022 । ಪುಟಗಳು: 16

# ಹಸಿದ ಹೊಟ್ಟೆಗೆ ಆಸರೆಯಾದ ಅಂತರ್ಯಾಮಿ ಫೌಂಡೇಶನ್

ಬೆಳಗಾವಿಯ ಸಮಾಜಸೇವಕರು ಹಾಗೂ ಯುವ ಮುಖಂಡರುಗಳಾದ ನಾಗರಾಜ ಗಸ್ತಿ ಅವರು ಸ್ವಯಂ ಸೇವಾ ಸಂಸ್ಥೆಯಾದ ಅಂತರ್ಯಾಮಿ ಫೌಂಡೇಶನ್ ವತಿಯಿಂದ ಅನ್ನ ಸಂತರ್ಪಣಾ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದು ನಿತ್ಯ ಬೆಳಗಾವಿ ನಗರದಲ್ಲಿ ಬಸ್ ನಿಲ್ದಾಣಗಳಲ್ಲಿ,ರಸ್ತೆ ಬದಿಯಲ್ಲಿರುವ ಅನಾಥರಿಗೆ ಹಾಗೂ ನಿರಾಶ್ರಿತರಿಗೆ ಆಹಾರ ಕೊಟ್ಟು ಹಸಿವು ನೀಗಿಸುವ ಮಹತ್ವದ ಕೆಲಸವನ್ನು ಮಾಡುತ್ತಿದ್ದಾರೆ. ಬಡವ,ಬಲ್ಲಿದರ ಮತ್ತು ಸಾಮಾಜಿಕ ಸೇವೆಗಳಿಗಾಗಿ ಅವರ ಒಂದು ಕನಸಿನ ಅಂತರ್ಯಾಮಿ ಫೌಂಡೇಶನ್ ಸಂಸ್ಥೆಯನ್ನು ಹುಟ್ಟು ಹಾಕಿ ಅದರ ಮುಖಾಂತರ ಬಡವರಿಗೆ,ವಿದ್ಯಾರ್ಥಿಗಳಿಗೆ, ಆಸರೆಯಾಗಿ ನಿಂತಿದ್ದಾರೆ. ಅನ್ನ,ಆರೋಗ್ಯ,ಅಕ್ಷರ,ಆಶ್ರಯಗಳ ಮೂಲಕ ಹೀಗೆ ಅನೇಕ ಕಾರ್ಯಗಳು ಫೌಂಡೇಷನ್ ವತಿಯಿಂದ ಮಾಡಲಾಗುತ್ತಿದೆ. ಚಿಕ್ಕೋಡಿಯ ಶ್ರೀ ಸತ್ಯ ಸಾಯಿ ಮಲ್ಟಿಸ್ಪೆಷಯಾಲಿಟಿ ಆಸ್ಪತ್ರೆಯಲ್ಲಿ ಉಚಿತವಾಗಿ ಗರ್ಭಿಣಿ ತಾಯಂದಿರ ಹಾಗೂ ಮೂತ್ರ ರೋಗ ವೈದ್ಯಕೀಯ ಶಿಬಿರ, ಹಾಗೂ ರಕ್ತ ತಪಾಸಣೆ ಹಾಗೂ ಅನೇಕ ರೀತಿಯಲ್ಲಿ ಬೆಳಗಾವಿ ಜಿಲ್ಲೆಯಾದ್ಯಂತ ಸೇವಾ ಕಾರ್ಯಗಳನ್ನು ಮಾಡುತ್ತಿದ್ದಾರೆ.



ಅನ್ನ ದಾನದ ಮಹತ್ವ ಜಗತ್ತಿನೊಳಗೆ ಅನ್ನಕ್ಕಿಂತಲೂ ಹೆಚ್ಚು ತೃಪ್ತಿಕರವಾದ ಎರಡನೆಯ ವಸ್ತು ಯಾವುದೂ ಇಲ್ಲ ಎಂದು ಯಾಕೆಂದರೆ ಎಲ್ಲಾ ಜೀವಿಗಳ ಪ್ರಾಣ ಅನ್ನವನ್ನೇ ಅವಲಂಬಿಸಿರುವುದು.ಹೀಗಾಗಿ ಮೊದಲಿಗೆ ಅನ್ನ ಧಾನವೇ ಶ್ರೇಷ್ಠ. ವೇದಗಳಲ್ಲಿ ಹೇಳಿದಂತೆ ಹಸಿದವರಿಗೆ ಮಾಡುವ ಅನ್ನದಾನದಿಂದ ಪುಣ್ಯಲೋಕ ಪ್ರಾಪ್ತಿಯಾಗುವುದು.ಸಕಲ ಜೀವ ರಾಶಿಗಳಿಗೆ ಶಕ್ತಿಯನ್ನು ಕೊಡುವುದೇ ಅನ್ನ. ಅದಕ್ಕಾಗಿಯೇ ಶಂಕರಾಚಾರ್ಯರು ಶಕ್ತಿ ಸ್ವರೂಪಿಣಿಯಾದ ಜಗನ್ಮಾತೆಯನ್ನು ಅನ್ನಪೂರ್ಣೇ ಸದಾಪೂರ್ಣೇ ಶಂಕರ ಪ್ರಾಣವಲ್ಲಭೇ ಎಂದು ಸ್ತುತಿಸಿದ್ದಾರೆ ಎಂದು ಹೇಳುವ ಮೂಲಕ. ಮಹಾಭಾರತದಲ್ಲಿ ಶ್ರೀಕೃಷ್ಣನು ಶಾಂತಿ ಪರ್ವದಲ್ಲಿ ಭೀಷ್ಮನಿಗೆ ದಾನದ ಮಹತ್ವದ ಬಗ್ಗೆ ಈ ರೀತಿ ಹೇಳುತ್ತಾನೆ.

ಈ ಚರಾಚರ ಪ್ರಪಂಚವು ಅನ್ನದಿಂದ ಆಧರಿಸಲ್ಪಟ್ಟಿದೆ.ಯಾವನು ಆಹಾರವನ್ನು ಕೊಡುತ್ತಾನೋ ಅವನು ಜೀವನವನ್ನು ಕೊಟ್ಟಂತೆ.ಆದ್ದರಿಂದ ಯಾರು ಈ ಲೋಕ ಮತ್ತು ಪರಲೋಕದಲ್ಲಿ ಸುಖದಿಂದ ಇರಲು ಬಯಸುತ್ತಾನೋ ಅವನು ಅನ್ನವನ್ನು ದಾನ ಮಾಡಲು ಪ್ರಯತ್ನಿಸುತ್ತಾನೆ.

ಅನ್ನವೇ ದೇವರು,ಅನ್ನವೇ ಬದುಕು,ಅನ್ನವೇ ಸಂಸ್ಕೃತಿ,ಅನ್ನವೇ ಪ್ರಸಾದ,ಅನ್ನ ದೇವರ ಮುಂದೆ ಅನ್ಯ ದೇವರುಂಟೆ? ಅನ್ನವಿರುವತನಕ ಅಷ್ಟೇ ಪ್ರಾಣ ಈ ಜಗದೊಳಗೆ ಅನ್ನವೇ ದೈವ. ಇದರ ಅರ್ಥ, ಅನ್ನವೆಂಬ ದೇವರ ಮುಂದೆ ಬೇರೆ ಯಾವ ದೇವರೂ ಇಲ್ಲ,ಎಲ್ಲಿಯವರೆಗೆ ಮನುಷ್ಯನಿಗೆ ತಿನ್ನಲು ಈ ಭೂಮಿಯಲ್ಲಿ ಅನ್ನ ದೊರೆಯುವುದೋ ಅಲ್ಲಿಯವರೆಗೆ ಮಾತ್ರ ಮನುಷ್ಯನ ಜೀವನ ಇರುತ್ತದೆ ಎಂದು.ಅನ್ನವೆಂದರೆ ಮನುಷ್ಯನ ಜೀವಧಾತುವಾಗಿದ್ದು, ದಾನಗಳಲ್ಲಿ ಅತ್ಯಂತ ಶ್ರೇಷ್ಠವಾದ ದಾನ ಅನ್ನದಾನ. ಏಕೆಂದರೆ ಮನುಷ್ಯನಿಗೆ ಧನ, ಕನಕ, ಆಸ್ತಿ ಅಥವಾ ಏನನ್ನೇ ದಾನವಾಗಿ ನೀಡಿದರೂ ಆತನನ್ನು ತೃಪ್ತಿ ಪಡಿಸಲು ಸಾಧ್ಯವಿಲ್ಲ. ಇನ್ನಷ್ಟು ಬೇಕು, ಮತ್ತಷ್ಟು ಬೇಕು ಎನ್ನುವ ಆಸೆ ಆತನಿಗೆ ದೊರೆತಷ್ಟೂ ಹೆಚ್ಚುತ್ತಾ ಹೋಗುತ್ತದೆ. ಆದರೆ ಹಸಿದವನಿಗೆ ಅನ್ನವನ್ನು ಹೊಟ್ಟೆ ತುಂಬುವಷ್ಟು ನೀಡಿದರೆ ಆತ ತೃಪ್ತನಾಗುತ್ತಾನೆ, ಹೊಟ್ಟೆ ತುಂಬಿದ ಅನಂತರ ಮತ್ತಷ್ಟು ಅನ್ನವನ್ನು ಆತನಿಗೆ ನೀಡಿದರೆ ಆತ ತಿನ್ನಲಾರ. ಅನ್ನ ಪರಬ್ರಹ್ಮ ವಸ್ತು ಎಂಬ ಮಾತೇ ಇದೆ. ಅಂದರೆ ಪ್ರತಿಯೊಂದು ಅಗುಳಿಗೂ ಜೀವವನ್ನು ನೀಡುವ ಶಕ್ತಿಯಿದೆ ಎಂದು ಹೇಳಿದರು.



ಒಂದು ಅನ್ನದ ಅಗುಳೂ ತಿಪ್ಪೆಯನ್ನು ಸೇರದಿರಲಿ. ಜನರ ನಿರ್ಲಕ್ಷ್ಯದಿಂದಾಗಿ ದೇಶದಲ್ಲಿ ಲಕ್ಷಗಟ್ಟಲೆ ಟನ್ ಆಹಾರ ಪೋಲಾಗುತ್ತಿದೆ, ಇಂತಹ ಹಸಿದ ಹೊಟ್ಟೆಗಳಿಗೆ ನೀವು ಕೂಡ ಆಸರೆಯಾಗಿ

ಹಸಿದ ಹೊಟ್ಟೆಗೆ ಅನ್ನವೇ ದೇವರು, ಅಂತಹ ಅನ್ನ ಸಂತರ್ಪಣಾ ಸೇವೆಯನ್ನು ಇವತ್ತು ಅಂತರ್ಯಾಮಿ ಫೌಂಡೇಶನ್ ಸಂಸ್ಥಾಪಕರು ಹಾಗೂ ಸದಸ್ಯರು, ಮಾಡುತ್ತಿದ್ದಾರೆ .

ಒಂದು ಹೊತ್ತಿನ ಊಟಕ್ಕೂ ಪರದಾಡುತ್ತಿರುವಂತಹ ವ್ಯಕ್ತಿಗಳು ಬೆಳಗಾವಿ ನಗರದಲ್ಲಿ ಕಂಡು ಬಂದಲ್ಲಿ "ಅಂತರ್ಯಾಮಿ ಫೌಂಡೇಶನ್" ಗೆ ಸಂಪರ್ಕಮಾಡಿ ಎಂದು ಹೇಳಿದರು.

"ಸೇವೆಗೆ ಇನ್ನೊಂದು ಹೆಸರೇ ಅಂತರ್ಯಾಮಿ ಫೌಂಡೇಶನ್ "

**-ಎಸ್ .ವಿಶ್ವನಾಥ**

# ರಮೇಶ್ ಬಲ್ಲಿದ್ ಅವರಿಂದ ಯುವಕರಿಗೆ ಮಾರ್ಗದರ್ಶನ

ರಾಯಚೂರು ಜಿಲ್ಲೆ ದೇವದುರ್ಗ ತಾಲೂಕನ್ನು ರಾಷ್ಟ್ರ ಮಟ್ಟದಲ್ಲಿ ಗುರುತಿಸುವಂತೆಮಾಡುತ್ತಿರುವ ಪ್ರತಿಭಾವಂತ ಯುವಕರಾದ ರಮೇಶ್ ಬಲ್ಲಿದ್ ರವರನ್ನು ದೇವದುರ್ಗ ತಾಲೂಕಿನ ಮಾಜಿ ಸೈನಿಕರಾದ ಪಂಪಣ್ಣ ಅಕ್ಕರಕಿರವರು ಪೂರ್ವ ಸೈನಿಕ ತರಬೇತಿ ಪಡೆಯುತ್ತಿರುವವರಿಗೆ ಅನುಕೂಲವಾಗಲಿ ಮತ್ತು ರಮೇಶ್ ಬಲ್ಲಿದ್ ರವರ ಕಲಿಕೆ ಗುಣಗಳು,ಜೀವನದ ಅನುಭವ ಯುವಕರಿಗೆ ಸಹಾಯವಾಗಲಿ ಎಂದು ಒಂದು ದಿನದ ಕಾರ್ಯಕ್ರಮವನ್ನು ಹಮ್ಮಿಕೊಂಡು ರಮೇಶ್ ಬಲ್ಲಿದ್ ರವರನ್ನು ಆಹ್ವಾನಿಸಿದ್ದರು



ರಮೇಶ್ ಬಲ್ಲಿದ್ ರವರು ಪೂರ್ವಭಾವಿ ಸೈನಿಕರನ್ನು ಉದ್ದೇಶಿಸಿ-ಜೀವನ,ಕಷ್ಟ,ಸಹನೆ,ಧೈರ್ಯ,ಸಹಾನುಭೂತಿ,ಶಿಸ್ತು, ಮತ್ತು ತಮ್ಮ ಜೀವನದಲ್ಲಿ ನಡೆದ ಕೆಲವು ಸುಖ ಮತ್ತು ದುಃಖದ ಬಗ್ಗೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮೊದಮೊದಲು ಪೂರ್ವಭಾವಿ ಸೈನಿಕರ ಪರಿಚಯ ಮಾಡಿಕೊಂಡು.ತಮ್ಮ ಪರಿಚಯವನ್ನು ಬಹಳ ಸ್ಪಷ್ಟವಾಗಿ ಮಾಡಿಕೊಂಡರು ನಂತರ ಪೂರ್ವಭಾವಿ ಸೈನಿಕರಿಗೆ ಕೆಲವು ಇಂಗ್ಲೀಷ್ ಪದಗಳ ಮತ್ತು ಪ್ರಶ್ನೆಗಳು ಮಾಡುವ ಮುಖಾಂತರ ತಮ್ಮ ಭಾಷಣವನ್ನು ಪ್ರಾರಂಭಿಸಿದರು ನಂತರ ಪೂರ್ವಭಾವಿ ಸೈನಿಕರ ವಾಸ್ತವ ಸ್ಥಿತಿ ಹಾಗೂ ಸೈನಿಕರಿಗೆ ಬೇಕಾಗುವ ಮೂಲ ವಸ್ತುಗಳ ಬಗ್ಗೆ ಬಹಳ ಸ್ಪಷ್ಟವಾಗಿ ತಿಳಿಸಿದಲ್ಲದೆ ಸೈನಿಕರಿಗೆ ಇರಬೇಕಾದ ಗುಣಗಳು ಯಾವುವು ಎಂಬುದನ್ನು ತಿಳಿಸಿಕೊಟ್ಟರು.ಸೈನಿಕ ಯಾವಾಗಲೂ ತಲೆ ಎತ್ತಿ ಎದೆ ಉಬ್ಬಿಸಿ ನಿಲ್ಲಬೇಕೇ ಹೊರತು ತಲೆ ತಗ್ಗಿಸಿ ನೆಲ ನೋಡಬಾರದು ಎಂದು ಭಾವಿ ಸೈನಿಕರ ಎದೆಯಲ್ಲಿ ಕಿಚ್ಚು ಹಚ್ಚಿ ಇಂಗ್ಲೀಷ್ ಕಲಿತಿದ್ದು ಹೇಗೆ ಮತ್ತು ಕಲಿಯುವಾಗ ಅವರು ಪಟ್ಟ ಕಷ್ಟದ ಬಗ್ಗೆಯೂ ಭಾವಿ ಸೈನಿಕರಿಗೆ ಹೇಳುವ ಆತ್ಮವಿಶ್ವಾಸವನ್ನು ಹೆಚ್ಚಿಸಿದರು.

ಸೈನಿಕರಿಗೆ ದೈಹಿಕ ಆರೋಗ್ಯ ಎಷ್ಟು ಮುಖ್ಯವೋ ಮಾನಸಿಕ ಸಾಮರ್ಥ್ಯವೂ ಅಷ್ಟೇ ಮುಖ್ಯ ಎಂಬುದನ್ನು ತಿಳಿಸಿ ಕೊಟ್ಟರು,

ತಾವು ಕಲಿತ ಇಂಗ್ಲೀಷ್ ನ್ನು ಹೊರ ದೇಶಗಳಿಗೂ ಹೋಗಿ ಅಲ್ಲಿರುವ ದೊಡ್ಡ ದೊಡ್ಡ ಮಹಾವಿಶ್ವವಿದ್ಯಾಲಯಗಳಲ್ಲಿ ಮಾತನಾಡಿ ಅಲ್ಲಿಯ ಜನರಿಂದ ಆಧುನಿಕ ರನ್ನ ಎಂಬ ಬಿರುದು ಪಡೆಯುವ ಮೂಲಕ ಕರ್ನಾಟಕದ ಘನತೆಯನ್ನು ಹೆಚ್ಚಿಸಿರೋದು ಬಹಳ ಸಂತೋಷಕರ ವಿಷಯವಾಗಿದೆ.

ಅವರು ತಮ್ಮ ಮನೆಯ ಕೆಲಸವನ್ನು ಮೊದಲ ಮಾಡಿಕೊಂಡು ತದ ನಂತರ ಅನ್ಯ ಕಾಯಕಗಳಿಗೆ ನಿರಾತಾರಾಗುತ್ತಾರೆ.ಅವರು ಮಾತನಾಡುವ ಇಂಗ್ಲೀಷ್ ಈಗ ಎಲ್ಲೆಡೆ ಸುದ್ದಿ ಆಗುತಿರೋದು ಹೆಮ್ಮೆಯ ವಿಷಯ

ಅವರ ಈ ಕಾಯಕ ಯಾವಾಗಲೂ ಹೀಗೆಯೇ ಮುಂದೆ ಸಾಗಲಿ ಎಂಬುದು ಎಲ್ಲರ ಆಶಯವಾಗಿದೆ.

**ವರದಿ-ಸೋಮನಾಥ್ ರಾಠೋಡ್**

ಗೊಂದಲದ ಗೂಡಿನ ಗುಬ್ಬಿ ನಾನು

ಕಣ್ಣಂಚಲ್ಲಿ ನೀರು ತುಂಬಿದೆ
ಯಾಕೆ ತಿಳಿಯದಾಗಿದೆ
ನನ್ನವರಿಗೆ ಏನಾಗಿದೆ

ಬಿಕ್ಕುತಿದೆ ಮನವು
ಯಾರ ನೆನಪು ಕಾಡುತ್ತಿದೆ
ಯಾಕೆ ಯಾಕೆ ಹೀಗಾಗುತಿದೆ

ಅರಿಯದೆ ಅಳುತಿಹೆನು
ಕಾಣದೆ ಮರುಗುತಿಹೆನು
ಉಕ್ಕುತಿದೆ ಮನವು

ಮುಖದಲ್ಲಿ ಆತಂಕ ತುಂಬಿದೆ
ಮನವು ಬಿಕ್ಕಳಿಸಿ ಅಳುವಂತಾಗಿದೆ
ದುಗುಡದಿ ಕಾಡುತಿದೆ

ಕಣ್ಣು ಮುಂದೆ ನನ್ನವರೆಲ್ಲಾ ಸೌಖ್ಯವೇ
ಮುಂದೇನಾದರೂ ಸಂಭವಿಸುವ ಸೂಚನೆಯೇ
ಹೀಗೇಕಾಗುತ್ತಿದೆ ನನಗೆ
ಮನವೇಕೆ ಗೊಂದಲದ ಗೂಡಾಗಿದೆ

**-ಭೂಮಿಕಾ (ಸವಿತಾ.ಡಿ)**

ಕರುನಾಡ ಕಂದ
ಸಂಪುಟ-1 | ಸಂಚಿಕೆ-24
ದಿನಾಂಕ: 16-10-2022 | ಪುಟಗಳು: 16

# ಭೂತಾರಾಧನೆ-ದೈವಾರಾಧನೆ

ಸಾಮಾನ್ಯವಾಗಿ ಆರಾಧನೆಗೊಳ್ಳುವ ಭೂತಗಳನ್ನು ಸ್ಥೂಲವಾಗಿ ಮೂರು ರೀತಿಯಲ್ಲಿ ವರ್ಗೀಕರಿಸಬಹುದು

1.ಪ್ರಾಣಿರೂಪದಲ್ಲಿರುವ ಭೂತ

2.ಮನುಷ್ಯನ ಮರಣಾನಂತರ ದೈವೀಕೃತವಾದ ಭೂತ

3.ಪುರಾಣದಿಂದ ಆಯ್ದುಕೊಂಡ ವ್ಯಕ್ತಿಗಳ ಭೂತ.

ಹುಲಿ,ಹಂದಿ,ನಂದಿ,ಕೋಣ ಇತ್ಯಾದಿ (ಪಿಲಿಚಂಡಿ, ಪಂಜುರ್ಲಿ,ಮೈಸಂದಾಯ)ಪ್ರಾಣಿಗಳು ಮೊದಲನೆಯ ವರ್ಗದ ರೂಪದಲ್ಲಿ ಆರಾಧನೆಗೊಳ್ಳುತ್ತವೆ.ಜುಮಾದಿ,ಕಲ್ಕುಡ-ಕಲ್ಲುರ್ಟಿ, ಕುಜುಂಬ-ಕಂಜ,ಕಾಂತಾಬಾರೆ-ಬೂದಾ ಬಾರೆ ಮೊದಲಾದ ವ್ಯಕ್ತಿಗಳು ಮಾನವರಾಗಿದ್ದಾಗ ವೀರ ಕೆಲಸ ಮಾಡಿ ಅಕಾಲ ಮರಣಕ್ಕೆ ತುತ್ತಾಗಿ ಅನಂತರ ಭೂತಗಳಾಗಿ ದೈವತ್ವ ಹೊಂದಿ ಆರಾಧನೆಗೊಳ್ಳುತ್ತವೆ.ಇವು ಎರಡನೆಯ ವರ್ಗಕ್ಕೆ ಸೇರುತ್ತವೆ.ಕೊಡಮಣಿತ್ತಾಯ,ಕಿಕ್ಕುಣಂತಾಯ, ಶಿವತ್ತಾಯ,ಅಣ್ಣಪ್ಪ,ಅಡ್ಕತ್ತಾಯ ಮೊದಲಾದ ದೈವಗಳನ್ನೂ ಈ ಗುಂಪಿಗೇ ಸೇರಿಸಬಹುದು. ತುಳುನಾಡಿನಲ್ಲಿ ಬೆರ್ಮೆ ಎಂಬ ದೈವ ಬ್ರಹ್ಮನ ಪ್ರತಿರೂಪವೇ ಆಗಿದೆ.ವೇದಬ್ರಹ್ಮನ ನಿರ್ದೇಶನ ಒಂದು ಕ್ರಮದಲ್ಲಿದ್ದರೆ ಬೆರ್ಮೆ ಎಂಬ ದೈವ ಭೂತಬ್ರಹ್ಮವಾಗಿ ಇನ್ನೊಂದು ರೀತಿಯಲ್ಲಿ ಆರಾಧನೆಗೊಳ್ಳುತ್ತದೆ.ಇವನಿಗೆ ನಾಲ್ಕು ಮುಖ ಮತ್ತು ನಾಲ್ಕು ಕೈಗಳು,ಕೈಗಳಲ್ಲಿ ಖಡ್ಗ,ಡಮರು ಕಪಾಲ



ಮತ್ತು ಕಠಾರಿ ಮೊದಲಾದ ಆಯುಧಗಳಿವೆ. ತುಳುವರ ಮೂಲ ದೇವರು "ಬೆಮ್ಮೆರ್".

ಭೂತನೆಲೆಯ ಸ್ಥಳವನ್ನು ಭೂತಸ್ಥಾನ,ಭೂತಸಾನ ಎಂದು ಕರೆಯುತ್ತಾರೆ.ಭೂತಸ್ಥಾನಕ್ಕೆ ಅಲಡೆ,ಗರಡಿ, ಕಟ್ಟೆ,ತಾನೊ,ಚಾವಡಿ ಎಂಬ ಹೆಸರುಗಳೂ ಇವೆ. ಇವು ಸಾಮಾನ್ಯವಾಗಿ 3.5 ಮೀ ಉದ್ದ, 2.5 ಮೀ ಅಗಲ, 3.5 ಮೀ ಎತ್ತರದ ಸಾಧಾರಣ ಗುಡಿಗಳಾಗಿರುತ್ತವೆ.ಇವಕ್ಕೆ ಕಿಟಕಿಗಳಿರುವುದಿಲ್ಲ. ರಾಜನ್ ದೈವಗಳಿಗೆ ಭೂತಗಳಿಗೆ ಇದಕ್ಕೂ ದೊಡ್ಡದಾದ ಭೂತಸ್ಥಾನಗಳಿರುವುದುಂಟು.ಸಾನದ ಒಳಗೆ ಮನುಷ್ಯರಂತೆ,ಪ್ರಾಣಿಗಳಂತೆ ರೂಪವಿರುವ ಹಿತ್ತಾಳೆಯ ಹಲವಾರು ಉರುಗಳಿರುತ್ತವೆ.ಜೊತೆಗೆ ಮಣೆಮಂಚ(ತೂಗುಮಂಚ) ಅಥವಾ ಕಾಲುಳ್ಳ ಮಂಚವಿರುತ್ತದೆ.ಇದನ್ನು ಉಜ್ಜಾಲ್ ಮಣೆಮಂಚ ಎನ್ನುತ್ತಾರೆ.ಇದರ ಮೇಲೆ ಭೂತದ ಖಡ್ಗ ಹಾಗೂ ಗಂಟೆ ಇರುತ್ತವೆ.ಭೂತಸ್ಥಾನದಲ್ಲಿ ಕಂಡುಬರುವ ಹುಲಿ,ಹಂದಿ,ಕೋಣ,ಎತ್ತು ಮೊದಲಾದವುಗಳು ವಿಗ್ರಹಗಳನ್ನು ಭೂತವಾಹನಗಳಾಗಿ ಉಪಯೋಗಿಸುವುದರ ಜೊತೆಗೆ ಅವನ್ನೂ ಭೂತಗಳ ಪರಿವಾರವೆಂದು ಕರೆದು ವಿಶೇಷ ಸಂದರ್ಭಗಳಲ್ಲಿ ಪೂಜಿಸುವುದೂ ಉಂಟು ಹೀಗೆ ಪೂಜಿಸುವಾಗ ಭೂತದ ಬಳಿ ಒಂದು ಕತ್ತಿ,ಕಂಚಿನ ಕಳಸದಲ್ಲಿ ನೀರು ದೀಪ ಇಟ್ಟಿರುತ್ತಾರೆ.

ತುಳುನಾಡ ಸಾಂಸ್ಕೃತಿಕ ಪದಕೋಶದಲ್ಲಿ ಸಾಮಾಜಿಕ ಬದುಕಿನಲ್ಲಿ ಮುಖ್ಯವಾಗಿ ತಿಳಿಯುವ ಪದ ಭೂತ.ಕನ್ನಡ ಭಾಷೆಯ ಸಾಂಸ್ಕೃತಿಕ ಪದಕೋಶದಲ್ಲಿ ಭೂತ ಪದ ಬಳಕೆಯಲ್ಲಿಲ್ಲ. ಸಂಸ್ಕೃತ ಭಾಷೆಯಲ್ಲೂ ಇಲ್ಲ ಮಲಯಾಳಿಗಳು ತೆಯ್ಯಂ ಎಂದು ಕರೆಯುವ ತುಳುವರ ಭೂತವು ದೈವ,ದೈವಂಕುಲು ಆಗಿ ಬಳಕೆಯಲ್ಲಿದೆ. ಪಾಶ್ಚಿಮಾತ್ಯದಿಂದ ಬಂದ ವಿದ್ವಾಂಸರು ಡೆವಿಲ್ ಎಂದು ಬಳಸಿದರು

1.ಆರಾಧನೆಯ ಪರಂಪರೆಯ ತುಳುನಾಡಿನಲ್ಲಿ ದೈವ(ಭೂತೊ)ಮತ್ತು ದೇವರು ಬೇರೆಬೇರೆ ಎಂದು ನೋಡುವುದಿಲ್ಲ.ದೈವ ಮತ್ತು ದೇವರು ಎರಡನ್ನೂ ಭಿನ್ನ ನೆಲೆಯಲ್ಲಿ ನಂಬಿ ಬದುಕುತ್ತಿದ್ದಾರೆ.14ನೆಯ ಶತಮಾನದಿಂದ ಈಚೆಗೆ ದೈವೊ ಪದದ ಬಳಕೆ ಆಗುತ್ತಿದೆ ಭೂತ+ಆರಾಧನೆ=ಭೂತಾರಾಧನೆ. ಭೂತವನ್ನು ನಂಬಿದವರಿಗೆ ಜಯ ಕೊಡುತ್ತದೆ, ನಂಬದವನಿಗೆ ಅಪಜಯವಾಗುತ್ತದೆ(ಭೂತೊ ನಂಬಿನಕ್ಲೆಗ್ ಇಂಬು ಕೊರ್ಪುಂಡು ನಂಬಂದ್ನಕ್ಲೆಗ್ ಅಂಬು ಕೊರ್ಪುಂಡು)ಎಂಬ ನಂಬಿಕೆಯಿದೆ. ತುಳುವಿನ ಅಂಬು' ಎಂಬ ಪದಕ್ಕೆ ಶಿಕ್ಷೆ ಎಂಬ ಅರ್ಥವಿರುವುದರಿಂದ ಶಿಕ್ಷೆ ಆಗದೆ ರಕ್ಷೆಗಾಗಿ ಭೂತವನ್ನು ನಂಬಿದರೆ ತಮಗೆ ಏನಾದರೂ ಒಳಿತಾಗಬಹುದೆಂದು ತುಳುನಾಡಿನ ಜನರು ನಂಬಿದ್ದಾರೆ.ನಂಬುವವರಿಗೆ ಭೂತ ಮೈಸೇರುತ್ತದೆಂದು ನಂಬಿಕೆಯಿದೆ ಅಂದರೆ ಭೂತ ನಂಬಿಕೆಯಿರುವವರಿಗೆ ವಶವಾಗುತ್ತದೆ ಹೀಗೆ ವಶವಾಗುವ ಭೂತ ನಂಬಿದವನಿಗೆ ಒಳ್ಳೆಯ ಮದಿಪು ನೀಡುತ್ತದೆ.ನಂಬುವವರು ದೇವರಿಗೆ ಹರಕೆ ನೀಡುವಂತೆ ಭೂತಕ್ಕೂ ಹರಕೆ ನೀಡುತ್ತಾರೆ ಕೋಲ ಕೊಡುವ,ನೇಮೊ ಮಾಡುವ,ತಂಬಿಲ,ಅಗೆಲ್ ಬಡಿಸುವ ಕ್ರಮ ಇಂದಿಗೂ ನಡೆದುಕೊಂಡು ಬಂದಿದೆ.ಭೂತಾರಾಧನೆ ಸಮಯದಲ್ಲಿ ಭೂತದ ವೇಷ ಹಾಕುವವನು ಮೈಗೆ ಅಲಂಕಾರಯುಕ್ತವಾದ ವೇಷಭೂಷಣ ತೊಡುತ್ತಾರೆ.ಸ್ತ್ರೀ ಪುರುಷ ಭೂತಗಳಿಗೆ ಪ್ರತ್ಯೇಕವಾದ ವೇಷಭೂಷಣಗಳಿರುತ್ತವೆ. ಅಣಿ ಕಟ್ಟಿಕೊಂಡು ಮುಗೊಕಟ್ಟಿಕೊಂಡು,ಕೈಯಲ್ಲಿ ಸುರಿಯೆ(ಕತ್ತಿ) ಹಿಡಿದುಕೊಂಡು,ಬಿಲ್ಲ್ ಪಗರಿ(ಬಿಲ್ಲುಬಾಣ) ಹಿಡಿದುಕೊಂಡು,ಕಾಲಿಗೆಗಗ್ಗರೊ ಕಟ್ಟಿಕೊಂಡು ಕುಣಿಯುವ ಕಾರ್ಯಕ್ರಮಕ್ಕೆ ಭೂತಾರಾಧನೆ ಎಂದು ಕರೆಯುತ್ತಾರೆ.ಭೂತಾರಾಧನೆ ಎಂಬ ಪದ ಆರಾಧನಾ ಪರಂಪರೆಯಿಂದ ಹುಟ್ಟಿದ ಪದವಲ್ಲ. ಅದು ತೌಳವ ಸಂಸ್ಕೃತಿಯನ್ನು ಒಟ್ಟಾಗಿ ಸೂಚಿಸುವ ಪದ. ದೈವ+ಆರಾಧನೆ=ದೈವಾರಾಧನೆ. ಭೂತಾರಾಧನೆಯನ್ನು ದೈವಾರಾಧನೆಯೆಂದು ಕರೆಯುತ್ತಾರೆ.ದೇವರ ಆರಾಧನೆಯಂತೆ ಭಯಭಕ್ತಿಯಿಂದ ವರ್ಷಕ್ಕೊಮ್ಮೆ ದೈವಕ್ಕೂ ಆರಾಧನೆ ನಡೆಯುತ್ತದೆ.

ಭೂತಾರಾಧನೆಯ ಬಗೆಗಳು

ಕಂಡಸೇವೆ,ಕೋಲ,ಜಾಲಾಟ,ನೇಮ,ಧರ್ಮನೇಮ,ಬಂಡಿಜಾತ್ರೆ,ಮೈಮೆ,ಮೆಚ್ಚಿ,ದರ್ಶನ,ಮಾಣಿಚ್ಚಿಲ್

**ಭೂತಾರಾಧನೆ ಮತ್ತು ಪಾಡ್ದನ**

ಪಾಡ್ದನಗಳು ಭೂತಗಳ ಹುಟ್ಟು,ಪ್ರಸರಣ, ಕಾರಣಿಕವನ್ನು ನಿರೂಪಣೆ ಮಾಡುವ ಪದ್ಯರೂಪದ ಕಥನಕವನಗಳು.ಪಾಡ್ದನವನ್ನು ತುಳುವರು ಪಾರ್ತನೊ,ಸಂದ್,ಸಂಧಿ ಹೀಗೆ ಬೇರೆಬೇರೆ ರೂಪದಲ್ಲಿ ಬಳಕೆ ಮಾಡುತ್ತಾರೆ.

**ಭೂತಾರಾಧನೆಯ ಕಟ್ಟು ಕಟ್ಟಳೆಗಳು**

ದೇವರಿಗೆ ದೇವಸ್ಥಾನ ಹೇಗೆ ಇದೆಯೋ ? ಹಾಗೆ ತುಳುವರ ನಂಬುವ ದೈವಗಳಿಗೆ ದೈವಸಾನ

ಸಾಮಾನ್ಯವಾಗಿ 16 ಕಟ್ಟುಕಟ್ಟಲೆಗಳನ್ನು ಕಾಣಬಹುದು. ನೇಮದ ವೇಳೆ ಕಟ್ಟುವ ಭೂತವೇಷಗಳು ಆಯಾ ಭೂತದ ಸ್ವಭಾವ ಸ್ವರೂಪಗಳಿಗೆ ತಕ್ಕುದಾಗಿರುತ್ತವೆ. ಮುಖವರ್ಣಿಕೆ, ಉಡುಪು ತೊಡುಪು, ಅಣಿಗಳಲ್ಲಿ (ಬೆನ್ನುಹಿಂದಕ್ಕೆ ಕಟ್ಟಿ ಕೊಳ್ಳುವ ಅಗಲವಾದ ರಚನೆ) ಸಾಕಷ್ಟು ವೈವಿಧ್ಯವಿರುತ್ತದೆ.ಕುಣಿತದ ವೈಖರಿಯಲ್ಲೂ ಹಾಗೆಯೇ ನೇಮಕ್ಕೆ ಸಂಬಂಧಪಟ್ಟಂತೆ ವಾಲಸಿರಿ, ಬಂಡಿ ಮೊದಲಾದ ಸಮಾರಂಭಗಳೂ ಜರುಗುವುದುಂಟು ವಾಲ ಸಿರಿ ಭೂತಸ್ಥಾನದ ಆವರಣದ ಹೊರಗೆ ನಡೆಯುತ್ತದೆ ಎಲ್ಲಾ ಭೂತಸ್ಥಾನಗಳಲ್ಲಿ ಬಂಡಿ ಇರಬೇಕೆಂದಲ್ಲ ಬಂಡಿ ಇದ್ದಲ್ಲ









ಅದನ್ನು ಸಿಂಗರಿಸಿ ಎಳೆಯುತ್ತಾರೆ. ಬಂಡಿಗಳಲ್ಲಿ ಹುಲಿ,ಹಂದಿ, ಕುದುರೆ ಮುಂತಾದವುಗಳ ಮೇಲೆ ಕುಳಿತಿರುವ ಭೂತಗಳ ವಿಗ್ರಹಗಳಿರುತ್ತವೆ.ವಿಗ್ರಹಗಳಿಲ್ಲದಿದ್ದಲ್ಲಿ ಭೂತವೇಷವನ್ನು ತೊಟ್ಟ ವ್ಯಕ್ತಿಯೇ ಕುಳಿತುಕೊಳ್ಳುತ್ತಾನೆ. ನೇಮದ ಅಂಗವಾಗಿ ತಪ್ಪಂಗಾಯಿ,ಸೊಟೆದಾರೆ ಮೊದಲಾದ ವಿನೋದಗಳೂ ಕೋಳಿ ಅಂಕವೂ ನಡೆಯುವುದುಂಟು.ಭೂತಗಳಲ್ಲಿಯೂ ಸೀಮೆಯ ರಾಜಂದೈವ,ಗ್ರಾಮದ ದೈವ,ಜಾಗದ ದೈವ, ಕುಟುಂಬದ ದೈವ,ಮನೆಯ ದೈವ?ಹೀಗೆ ಪ್ರತ್ಯೇಕವಾದ ವ್ಯವಸ್ಥೆ ಇದೆ.ಕೆಲವೊಮ್ಮೆ ವಿಶಿಷ್ಟ ಕಾರಣಗಳಿಗಾಗಿ ಧರ್ಮನೇಮ ಎಂಬ ವಿಶೇಷೋತ್ಸವವನ್ನು ಜರಗಿಸುವುದುಂಟು.ಅದರ ಅಂಗವಾಗಿ ಅನ್ನಸಂತರ್ಪಣೆಯೂ ನಡೆಯುವುದಿದೆ. ಕೋಲ ಎಂದರೆ ಅಲಂಕಾರ ಎಂದರ್ಥ.ಭೂತ ವೇಷಧಾರಿಗೆ ತೊಡಿಸುವ ವಿಶೇಷ ವೇಷ ಪರಿಕರಗಳ ಬೆಡಗಿನಿಂದಾಗಿ ಸಂಬಂಧಪಟ್ಟ ಉತ್ಸವಕ್ಕೂ ಅದೇ ಹೆಸರು ಬಂದಿದೆ. ಕೋಲವನ್ನು ವಾಡಿಕೆಯಂತೆ ವರ್ಷಕ್ಕೊಂದು ಬಾರಿ ನಿರ್ದಿಷ್ಟ ಸ್ಥಳದಲ್ಲಿ ನಿಶ್ಚಿತ ದಿನಗಳಲ್ಲಿ ಜರಗಿಸಬಹುದು ಅಥವಾ ವಿಶೇಷ ಸೇವೆಯಾಗಿ ಬೇರೆಯೇ ಸಂದರ್ಭಗಳಲ್ಲಿಯೂ ನಡೆಸಬಹುದು ಕೋಲದ ಚಪ್ಪರಕ್ಕೆ ಪತಾಕೆಯ ರೂಪದಲ್ಲಿ ಮಡಿವಾಳನು ಬಿಳಿ ಅಥವಾ ಕೆಂಪು ಬಟ್ಟೆ ಕಟ್ಟುವುದಿದೆ. ಎಳನೀರು, ಸೌತೆ,ಕುಂಬಳ ಮುಂತಾದವನ್ನು ಚಪ್ಪರದಲ್ಲಿ ತೂಗಿಸುತ್ತಾರೆ.ಕೋಲಕ್ಕೆ ಮೊದಲು ಮಣ್ಣು ಮುಹೂರ್ತ ಎಂಬ ವಿಧಿ ಜರುಗುವುದಿದೆ.ಕೋಲ ಜರಗಬೇಕಾದ ಸ್ಥಳದ ತುಸು ಮಣ್ಣನ್ನು ಆಯಾಸ್ಥಾನದ ಪೂಜಾರಿ ತಂದು,ಗಂಧಿ ಪ್ರಸಾದ ಸ್ವೀಕರಿಸಿ ಒಳಗೆ ಹೊರಗೆ ತುಲಸಿಕಟ್ಟೆ,ಪಾಗಾರ ಮುಂತಾದ ಎಡೆಗಳಲ್ಲಿ ಎಲ್ಲೆಲ್ಲಿ ಬಿರುಕುಗಳಿವೆಯೋ ಅಲ್ಲಿಗೆ ಮಣ್ಣನ್ನು ಮೆತ್ತಿ ಜಾಗವನ್ನು ಪ್ರಶಸ್ತಗೊಳಿಸುವನು. ಕೋಲದ ಚಪ್ಪರದ ನಡುವೆ ಗರಡಿಯ ಒಳಗೆ ನೆಲದಲ್ಲಿ ವಿವಿಧ ರೀತಿಯ ಮಂಡಲಗಳನ್ನು ಬಣ್ಣದ ಪುಡಿಗಳಿಂದ ಬರೆಯುವುದುಂಟು.ಮಂಡಲದ ಮೇಲಕ್ಕೆ ನೇರವಾಗಿ ಒಂದು ತೆಂಗಿನಕಾಯನ್ನು ವಿಧಿಪೂರ್ವಕವಾಗಿ ತೂಗಿಸುತ್ತಾರೆ. ಇದಕ್ಕೆ ಕುಕ್ಕಾಲಿ ಎಂದು ಹೆಸರು.ಕೆಲವು ಕೋಲಗಳಿಗೆ ಭಂಡಾರ ಹೋಗುವ ಕ್ರಮವಿದೆ.ಭೂತದ ಮೊಗ,ಬೆಳ್ಳಿ ಒಂಗಾರದ ನಗನಾಣ್ಯಗಳೇ ಮುಂತಾದ ವೇಷ ಸಾಮಗ್ರಿಗಳೂಸುರಿಗೆ ಮುಂತಾದ ಆಯುಧಗಳೂ ನಿಶಾನಿ,ಗಣೆ,ದೀವಟಿಗೆ ಮುಂತಾದ ಬಿರ್ದಿನಿಂದ ಕೊಂಬುವಾಲಗದೊಂದಿಗೆ ಕೋಲದ ಚಪ್ಪರದೆಡೆಗೆ ಸಾಗುವುವು.ಭೂತದ ವೇಷಕ್ಕೆ ತೆಂಗಿನ ಎಳೆಯಗರಿ, ಕೇಪಳದಹೂ,ಅರದಾಳ,ಮಸಿ,ಇಂಗಳಿಕ, ಕೆಂಪುವಸ್ತ್ರ,ದಗಲೆ,ಗೆಜ್ಜೆ,ಗಗ್ಗರ,ಕೈದಂಡೆ,ನೆತ್ತಿಪಟ್ಟ, ಚಪ್ಪರಕೊಂಬು,ಮಾಲೆಗಳು,ಅಣಿ ಮೊದಲಾದವನ್ನು ಉಪಯೋಗಿಸುತ್ತಾರೆ ಆಯಾ ಭೂತದ ಸ್ವರೂಪ, ಸ್ವಭಾವಗಳಿಂದ ತಕ್ಕ ಅಣಿಯನ್ನೂ ಮುಖವರ್ಣಿಕೆಯನ್ನೂ ಇತರ ಪರಿಕರಗಳನ್ನೂ ಬಳಸುತ್ತಾರೆ.ಪೂಜೆ ರೀತಿಯಲ್ಲಿ ಆಯಾ ಭೂತದ ರೌದ್ರಭಾವನೆಗೆ ಅನುಗುಣವಾಗಿ ಕುಣಿತದ ಮೂಲಕ ಪೂಜೆಯಾಗುತ್ತದೆ.ಭೂತವನ್ನು ಪ್ರತಿನಿಧಿಸುವ ವ್ಯಕ್ತಿಯನ್ನು ಬೂತಕಟ್ಟುನಾಯೆ(ಪಾತ್ರಿ) ಎನ್ನುತ್ತಾರೆ.ಒಂದೊಂದು ಭೂತಕ್ಕೂ ಅದಕ್ಕೊಪ್ಪುವ ಅರದಳವಿರುತ್ತದೆ. ಅಲಂಕಾರ,ವೇಷ, ಮುಖ ವರ್ಣಿಕೆ ಇರುತ್ತವೆ.ಮೈಗೆ ಕೆಂಪುಬಟ್ಟೆ,ನಡುವಿಗೆ ನೆರಿಗೆಯುಳ್ಳ ಲಂಗ,ತಲೆಗೆ ಕಿರೀಟ (ಅಣಿ),ಕಾಲಿಗೆ ಗಗ್ಗರ,ಸೊಂಟಕ್ಕೆ ದಟ್ಟಿ, ತೋಳಿಗೆ ವಂಕಿ,ಕೈಗೆ ಬಳೆ,ಎದೆಗೆ ಕಂಚಿನ ರಕ್ಷೆ,ಕಿವಿಗೆ ಮತ್ತು ಹಣೆಗೆ ಅಲಂಕಾರ ಇರುತ್ತದೆ ಒಮ್ಮೊಮ್ಮೆ ಆಯಾ ಭೂತದ ಮುಖವಾಡ ಧರಿಸಿ ಕುಣಿಯುವುದೂ ಉಂಟು ಭೂತಾರಾಧನೆ ಕೆಲವೊಮ್ಮೆ ಸಾರ್ವಜನಿಕವಾಗಿಯೂ ಒಂದೊಂದೆ ಮನೆಯಲ್ಲಿಯೂ ನಡೆಯುತ್ತದೆ.ಭತ್ತ,ಅಕ್ಕಿ, ಭತ್ತದ ಅರಳು,ಎಳನೀರು,ತೆಂಗಿನಕಾಯಿ,ಅಡಿಕೆ, ಹೊಂಬಾಳೆ,ತೆಂಗಿನ ಗರಿ?ಇವು ಭೂತಾರಾಧನೆಯ ಮುಖ್ಯ ವಸ್ತುಗಳು ಎಲ್ಲಾ ರೀತಿಯ ಭೂತ ಕಟ್ಟುವಾಗಲೂ ಕೈಯಲ್ಲಿ ದೀವಟಿಗೆಯಿರುತ್ತದೆ.

**ಭೂತಾರಾಧನೆಯ ಸಾಂಸ್ಕೃತಿಕ ವಿವರ**

ಉತ್ಸವಕ್ಕೆ ಕೊಡಿ (ಧ್ವಜ) ಏರಿಸುವ ಕ್ರಮವಿದೆ.ನೇಮಕ್ಕೆ ಕೆಲವು ದಿನ ಮುಂಚೆ ಕೋಳಿಕುಂಟ ಎಂಬ ವಿಧಿ ಜರುಗುವುದುಂಟು. ಅಂದು ನೇಮಕ್ಕಾಗಿ ಬಾಳೆಗೊನೆ ಕಡಿಯುವ ಗೊನೆಮುಹೂರ್ತ ಎಂಬ ಕ್ರಮ ಇದೆ (ಕೋಳಿಕುಂಟವಾದ ಮೇಲೆ ಆ ಊರನ್ನು ಬಿಟ್ಟು ಯಾರೂ ದೂರ ಪ್ರಯಾಣ ಕೈಗೊಳ್ಳಬಾರದೆಂಬ ಕಟ್ಟಳೆ ಇದೆ).ಊರ ಜನವರ್ಗದ ಪ್ರತಿನಿಧಿಗಳೂ ದೈವದ ಸೇವೆಗೆ ಸಂಬಂಧಪಟ್ಟ ಪೂಜಾರಿ ಮುಂತಾದ ವ್ಯಕ್ತಿಗಳೂ ಸಕಲ ಬಿರುದಾವಳಿಗಳಿಂದ ಭೂತದ.ಭಂಡಾರವನ್ನು (ಆಯುಧ, ಮೊಗ ಮುಂತಾದ ಪೂಜಾ ಸಾಮಗ್ರಿಗಳನ್ನು) ಭೂತಸ್ಥಾನಕ್ಕೆ ಒಯ್ಯುತ್ತಾರೆ.ಉತ್ಸವದ ಸಂದರ್ಭದಲ್ಲಿ ಆಯಾ ಭೂತದ ಹುಟ್ಟುಕಟ್ಟುಗಳನ್ನು ಭೂತಕ್ಕೆ ಕಟ್ಟುವವರೂ ಅವರ ಸಂಗಡಿಗರೂ ತೆಂಬರೆ ಎಂಬ ವಾದ್ಯದ ಬಡಿತದೊಂದಿಗೆ ರಾಗವಾಗಿ ಹಾಡುತ್ತಾರೆ. ಒಂದೇ ವೇಳೆ ಎರಡು ಅಥವಾ ಮೂರು ಭೂತಗಳು ಕಾಣಿಸಿಕೊಳ್ಳಬಹುದು. ಬೇರೆ ಬೇರೆ ಭೂತಗಳನ್ನು ಒಬ್ಬನೇ ವ್ಯಕ್ತಿ ಒಂದಾದ ಮೇಲೆ ಒಂದರಂತೆ ಆವೇಶ ಬರಿಸಿಕೊಳ್ಳಬಹುದು.

**ಭೂತಾರಾಧನೆಯ ಸಾಂಸ್ಕೃತಿಕ ವಿವರ**

ಗೊನೆ ಕಡಿಯುವುದು,ಕೋಳಿಗೂಟ,ಕಿರುವಾಳ್ ಇಳಿಯುವುದು,ಕೂಡು ತಂಬಿಲ,ಕೊಡಿಯಡಿ, ಸಿಂಗದನೊ ,ಅರ್ದಲ,ವೇಷಭೂಷಣ,ಗಗ್ಗರೊದೆಚ್ಚಿ, ಬೊಂಡು ಬಾರಣೆ ,ಅಣಿಕಟ್ಟುವುದು,ಮಣಿಕಡ್ತಲೆ ಹಿಡಿಯುವುದು,ಹೂವು-ಅಕ್ಕಿ ಹಾಕುವುದು, ಇಂಡಿಸೇವೆ

**ಭೂತಾರಾಧನೆಯ ಬಣ್ಣಗಾರಿಕೆ**

ಪ್ರಾಣಿ ಸೂಚಕ ಭೂತಗಳ ಮುಖವರ್ಣಿಕೆ,ರಾಜಸ ಸ್ವಭಾವದ ಅರಸು ಭೂತಗಳ ಮುಖವರ್ಣಿಕೆ, ಹೆಣ್ಣು ಭೂತಗಳ ಮುಖವರ್ಣಿಕೆ, ನೀಚ ಭೂತಗಳ ಮುಖವರ್ಣಿಕೆ, ಮನುಷ್ಯ ಸತ್ತು ಭೂತ ಆದ ಭೂತಗಳ ಮುಖವರ್ಣಿಕೆ

**ಭೂತದ ಮುಗ**

ಮುಗವನ್ನು ಮುಖವಾಡವೆಂದು ತಿಳಿಯಬಹುದು. ಮುಖವಾಡಗಳನ್ನು ಹಿತ್ತಾಳೆ ಮತ್ತು ತಾಮ್ರ ಮಿಶ್ರಿತ ಕಂಚಿನಿಂದ ತಯಾರಿಸಲಾಗಿರುತ್ತದೆ.ಮನುಷ್ಯರನ್ನು ಹೋಲಿಕೆ ಮಾಡಿ ತಯಾರಾದ ಮುಖವಾಡ, ಪ್ರಾಣಿಗಳನ್ನು ಹೋಲಿಕೆ ಮಾಡಿ ತಯಾರಾದ ಮುಖವಾಡ.

**ಭೂತಗಳು ಹಿಡಿವ ಆಯುಧ**



ಅಡ್ಯಾಣೊ ಎಂದರೆ ಗುರಾಣಿಯೆಂದು ತಿಳಿಯಬಹುದು,ಕಡ್ತಲೆ ಎಂದರೆ ಬಾಳ್ ಕತ್ತಿ, ಕತ್ತಿ, ಕೆಂಡೊ, ಚವಲೊ, ಬಾಣ, ಬಿಲ್ಲು, ಬೆತ್ತ - ಜೋಡಿ ಬೆತ್ತವನ್ನು ಬೆಳ್ಳಿಕಟ್ಟದಲ್ಲಿ ತಯಾರಿಸಲಾಗುತ್ತದೆ. ಸುರಿಯೆ - ಒಂದು ವಿಧದ ಕತ್ತಿ, ಸೂಟೆ - ತೆಂಗಿನ ಮಡಲಿನಿಂದ ಅಥವಾ ಬಿದಿರಿನಿಂದ ತಯಾರಿಸಲಾದ ಸೂಟೆಯು ಒಂದು ಕೈಯಲ್ಲಿ ಹಿಡಿಯವಷ್ಟು ಉದ್ದ ಇರುತ್ತದೆ. ಕೆಲವು ಕಡೆ ರಾತ್ರಿಯಿಡೀ ಉರಿಯುವ ದೊಡ್ಡ ಸೂಟೆ ಕಟ್ಟುತ್ತಾರೆ.

**ಭೂತಾರಾಧನೆಯ ಇತಿಹಾಸ**

1.ಕ್ರಿ.ಶ. 1379ರಲ್ಲಿ ಕಾರ್ಕಳ ತಾಲೂಕಿನ ಕಾಂತೇಶ್ವರ ದೇವಸ್ಥಾನದಲ್ಲಿ ಸಿಕ್ಕಿರುವ ಶಾಸನ ಆಧಾರ. ಈ ಶಾಸನದಲ್ಲಿ ದೈವಕ್ಕೆ ತಪ್ಪಿದವರು ಎಂಬ ಪದದ ಬಳಕೆಯಿದೆ.'

2.ಕಾರ್ಕಳ ತಾಲೂಕಿನ ಉದ್ಯಾವರದಲ್ಲಿ ಕ್ರಿ.ಶ. 1543ರಲ್ಲಿ ದೊರೆತಿರುವ ಶಾಸನದಲ್ಲಿ ನಂದಳಿಕೆ ದೈವೊ ಪದದ ಉಲ್ಲೇಖವಿದೆ.

3.ಕ್ರಿ.ಶ.1499ಡ್ ಉಡುಪಿ ತಾಲೂಕಿನ ಕಾಪು ಪ್ರದೇಶದಲ್ಲಿ ದೊರೆತ ಶಾಸನದಲ್ಲಿ ನಂದಳಿಕೆ ದೈವದ ಪ್ರಸ್ತಾಪವಿದೆ.

4.ಕ್ರಿ.ಶ.1446ರಲ್ಲಿ ದೊರೆತ ಬಸ್ರೂರು ಶಾಸನದಲ್ಲಿ ಮತ್ತು ಕ್ರಿ.ಶ.1566ರಲ್ಲಿ ದೊರೆತ ಬಾರಕೂರು ಶಾಸನದಲ್ಲಿ ಬೊಬ್ಬರ್ಯ ಭೂತದ ಹೆಸರಿದೆ.

5.ಕ್ರಿ.ಶ. 1432ರಲ್ಲಿ ದೊರೆತ ಸುಳ್ಯದ ಎಡಮಂಗಿಲ ಶಾಸನದಲ್ಲಿ ಸಿರಾಡಿ ದೈವಕ್ಕೆ ಪ್ರಸಾದ ತುಪ್ಪದೊಳು ಎಂಬ ಪದದ ಬಳಕೆಯಿದೆ.

ಸಂಗ್ರಹ-ಚಂದ್ರಶೇಖರ್ ಹೆಬ್ಬಾರ್ ಕೊಲ್ಯ

ಕರುನಾಡ ಕಂದ
ಸಂಪುಟ-1 | ಸಂಚಿಕೆ-24
ದಿನಾಂಕ: 16-10-2022 | ಪುಟಗಳು: 16

# ಭೂಮಿ ತಾಯಿಯ ಸೀಮಂತ ಸಂಭ್ರಮ

ಎಳೆತೆನೆ ಹೊತ್ತ ಹಸಿರಿನಿಂದ ಕಂಗೊಳಿಸುವ ಭತ್ತದ ಗದ್ದೆಗಳ ನಡುವಿನ ಭೂಮಿ ತಾಯಿಯ ಸೀಮಂತ ಸಂಭ್ರಮ ಮಲೆನಾಡಿನಾದ್ಯಂತ ಸಡಗರ ತಂದಿತ್ತು. ಭತ್ತ ತೆನೆ ಒಡೆಯುವ ಮುನ್ನ ಫಸಲಿನ ಗಭ9 ಹೊತ್ತ ಭೂಮಿ ತಾಯಿಗೆ ಬಯಕೆ ತೀರಿಸುವ ಹಬ್ಬವೇ ಭೂಮಿ ಹುಣ್ಣಿಮೆ.

ಸೀಗೆ ಹುಣ್ಣುಮೆಯ ದಿನ ಮಲೆನಾಡಿನ ಬಹುತೇಕ ಕಡೆ ಈ ಹಬ್ಬವನ್ನು ಅತ್ಯಂತ ವಿಶಿಷ್ಟವಾಗಿ ಆಚರಿಸುತ್ತಾರೆ .

ಮಲೆನಾಡು ಪ್ರದೇಶಗಳಲ್ಲಿ ಹೆಚ್ಚಾಗಿ ಈ ಹಬ್ಬವನ್ನು ಭೂಮಿತಾಯಿಯೊಂದಿಗಿನ ಕಳ್ಳು ಬಳ್ಳಿಯ ನಂಟಿನ ಸಂಭ್ರಮದಂತೆ ಆಚರಿಸುತ್ತಾರೆ. ಕೃಷಿಕ ಸಮುದಾಯಗಳ ರೈತಾಪಿ ಜನ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಈ ಭೂಮಿ ಹುಣ್ಣುಮೆ ಆಚರಿಸುತ್ತಾರೆ.ಭೂಮಿಯಲ್ಲಿ ಉತ್ತಿಭಿತ್ತಿ ಅನ್ನ ಬೆಳೆಯುವ ಅನ್ನದಾತನಿಗೆ ಭೂಮಿ ಎಂದರೆ ಬರೀ ಮಣ್ಣಲ್ಲ ಭೂಮಿ ಅನ್ನ ಕೊಡುವ ತಾಯಿ ಹಾಗಾಗಿ ಈ ಹುಣ್ಣುಮೆಯ ಹೊತ್ತಿಗೆ ಕಾಳು ಕಟ್ಟುವ ಹಂಗಾಮಿನಲ್ಲಿ ಬಸುರಿ ಭೂಮಿ ತಾಯಿಯ



ಬಯಕೆ ತೀರಿಸಿ ಉತ್ತಮ ಫಸಲು ಕೊಡು ತಾಯೇ ಎಂದು ಬೇಡುವ ಭೂಮಿ ತಾಯಿಯ ಚೊಚ್ಚಲ ಮಕ್ಕಳ ಹಬ್ಬ ಇದು .

ಮಲೆನಾಡಿನ ವಿಶಿಷ್ಟ ಹಬ್ಬ ಅವರ ಕಲಾ ನೈಪುಣ್ಯತೆ ಪ್ರಕೃತಿ ಮತ್ತು ಮನುಷ್ಯನ ನಡುವಿನ ಅನ್ಯೋನ್ಯತೆ ಬಿಂಬಿಸುವ ಹಬ್ಬ ಇದು ಅವರು ಈ ಹಬ್ಬದಲ್ಲಿ ಬಿದುರಿನ ಬುಟ್ಟಿಗೆ ವಿವಿಧ ನೈಸರ್ಗಿಕ ಬಣ್ಣಗಳಿಂದ ಚಿತ್ತಾರ ಬರೆದು ಅದರಲ್ಲಿ ಪೂಜಾ ಸಾಮಗ್ರಿಗಳನ್ನು

ತುಂಬಿಕೊಂಡು ಹೋಗಿ ಭೂಮಿ ಪೂಜೆ ಮಾಡುತ್ತಾರೆ.ಚಿತ್ತಾಕಷ9ಕ ಜಾನಪದ ಕಲೆಯ ಆ ಬುಟ್ಟಿಯನ್ನು ಭುಮ್ಮಣಿ ಬುಟ್ಟಿ ಎಂದು ಕರೆಯುತ್ತಾರೆ ಜೊತೆಗೆ ಭೂಮಿ ಹುಣ್ಣುಮೆಯ ಹಿಂದಿನ ರೈತ ಮಹಿಳೆಯರು ಮನೆ ಸೇರಿಸಿ ಮಡಿಯುಟ್ಟು ಇಡೀ ರಾತ್ರಿ ನಿದ್ದೆ ಮಾಡದೆ ವಿಶೇಷ ಅಡುಗೆಯನ್ನು ಸಿದ್ದಪಡಿ ಸುತ್ತಾರೆ.ಭೂಮಿಯ ಮೇಲಿರುವ ವಿವಿಧ ಸೊಪ್ಪು ತರಕಾರಿ ಗೆಡ್ಡೆ ಗೆಣಸು ಗಳನ್ನು ಹಾಕಿ ಸಿದ್ಧಪಡಿಸಿದ ಪದಾಥ9ಕ್ಕೆ" ಸಾಗುಸೊಪ್ಪು ಅಥವಾ ಚರಗ"ಎನ್ನುತ್ತಾರೆ .

ಅಲ್ಲದೇ ಭೂಮಿ ತಾಯಿಗೆ ಎಡೆಮಾಡಲು ಚೀನಿ ಕಾಯಿ, ಸೌತೆಕಾಯಿ,ಕುಂಬಳಕಾಯಿ ಕಡಬು ಮತ್ತು ಕೊಟ್ಟೆ ಕಡಬು ಏಳು ಬಗೆಯ ಪಲ್ಯ ಬಗೆ ಬಗೆಯ ಸಿಹಿತಿಂಡಿ ಸಿದ್ದಪಡಿ ಸುತ್ತಾರೆ.ರಾತ್ರಿ ತಯಾರಿಸಿದ ಕಡಬು ಬುತ್ತಿಯನ್ನು ಭುಮ್ಮಣಿ ಬುಟ್ಟಿಗೆ ತುಂಬಿ ತಲೆಯ ಮೇಲೆ ಹೊತ್ತು ಗದ್ದೆಗೆ ಕೊಂಡೊಯ್ದು ಅಲ್ಲಿ ಭತ್ತ ಅಥವಾ ತೋಟದಲ್ಲಿ ಪೂಜೆ ಮಾಡಿ ಎಡೆ ಮಾಡಿ ಊಟ ಮಾಡುವುದು ವಾಡಿಕೆ ಹಾಗೇ

ಗದ್ದೆಯಲ್ಲಿ ಪೂಜೆ ಸಲ್ಲಿಸಿದ ನಂತರ ಕಾಗೆ ಇಲಿಗಳಿಗೂ ಎಡೆ ಇಟ್ಟು ನಂತರ ಎಲ್ಲರೂ

ಗದ್ದೆಯಲ್ಲಿ ಯೇ ಸಾಮೂಹಿಕವಾಗಿ ಹಬ್ಬದೂಟ ಸವಿಯುತ್ತಾರೆ.ಭುಮ್ಮಣಿ ಬುಟ್ಟಿಯ ಚಿತ್ತಾರಗಳಲ್ಲಿ ಕಾಣುವ ಜೀವ ಚರ ತುಡಿತಗಳು ಮತ್ತು ಇಡೀ ಈ ಹಬ್ಬದ ಪ್ರಕೃತಿ ಆರಾಧನೆ ಯ ಅಂಶಗಳು ಕಲಾವಂತಿಕೆ ಮತ್ತು ಜೀವ ಪರೆತೆಗೆ ನಿದರ್ಶನ ಆ ಹಿನ್ನೆಲೆಯಲ್ಲಿಯೇ ಇಂದು ಬುಟ್ಟಿ ಚಿತ್ತಾರ ಮತ್ತು ಹಸೆ ಚಿತ್ತಾರಗಳು ರಾಷ್ಟ್ರ ಅಂತರಾಷ್ಟ್ರೀಯ

ಮಟ್ಟದಲ್ಲಿ ಗಮನ ಸೆಳೆದಿದೆ ಕಲೆ ಮತ್ತು ಪ್ರಕೃತಿ ನಡುವಿನ ಅವಿನಾಭಾವ ಸಂಬಂಧದ ಜೊತೆಗೆ ಧಾಮಿ9ಕ ಆಯಾಮದಲ್ಲಿಯೂ ಭೂಮಿ ಹುಣ್ಣುಮೆ ಆಸಕ್ತಿದಾಯಕ.

**-ಶ್ರೀಮತಿ ವಿದ್ಯಾ ಉದಯ್ ಕುಮಾರ್,ಸಾಗರ**


# "ಉದ್ಯೋಗ ಖಾತ್ರಿ ಯೋಜನೆಯ ಕಾಮಗಾರಿಯಲ್ಲಿ ಲಕ್ಷಾಂತರ ರೂಪಾಯಿ ಅವ್ಯವಹಾರ ಜಿ ಪಂ ಸಿಇಓ ಅವರಿಗೆ ಮನವಿ"

ಗದಗ ತಾಲ್ಲೂಕಿನ ತಿಮ್ಮಾಪೂರ ಗ್ರಾಮ ಪಂಚಾಯಿತಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕಾಮಗಾರಿಯಾದ ಭರಮಗುಡಿ ಹಳ್ಳವನ್ನು ಹುಳುಎತ್ತುವುದು ಮತ್ತು ಅಭಿವೃದ್ಧಿ ಪಡಿಸುವು ಕೆಲಸಕ್ಕೆ ಸುಮಾರು 11 ಲಕ್ಷ ರೂಪಾಯಿಗಳ ಕಾಮಗಾರಿಯಲ್ಲಿ ಕೆಲಸಕ್ಕೆ ಹೋಗದೆ ಇರುವವರ ಹೆಸರಿನಲ್ಲಿ ಎನ್ ಎಮ್ ಆರ್ ಹಾಕಿ ಪೇಮೆಂಟ್ ಮಾಡಿ ಲಕ್ಷಾಂತರ ರೂಪಾಯಿ ಹಣವನ್ನು ಗ್ರಾಮ ಪಂಚಾಯಿತಿ ಪಿಡಿಓ ,ಇಂಜಿನಿಯರ ,ಅಧ್ಯಕ್ಷ ,ಹಾಗೂ ಜಿ ಕೆ ಎಂ ,ಕಾಯಕ ಬಂಧುಗಳ ಸೇರಿ ಲಕ್ಷಾಂತರ ರೂಪಾಯಿ ಹಣವನ್ನು ಲಪಟಾಯಿಸಿದಾರೆ .

ಅಭಿವೃದ್ಧಿ ಹೆಸರಿನಲ್ಲಿ ಕಾಮಗಾರಿಯನ್ನು ಪ್ರಾರಂಭಿಸಿ ಸಂಪೂರ್ಣ ಕಳಪೆ ಕಾಮಗಾರಿಯನ್ನು ಮಾಡಿ ಕೆಲಸಕ್ಕೆ ಹೋಗದೆ ಇರುವವರ ಹೆಸರಿನಲ್ಲಿ ಲಕ್ಷಾಂತರ ರೂಪಾಯಿ ಸರಕಾರದ ಹಣವನ್ನು ಲೂಟಿಮಾಡಿದ್ದಾರೆ.

ಈ ವಿಷಯವನ್ನು ಕುರಿತು ಚರ್ಚಿಸಲು ಸಾರ್ವಜನಿಕರು ಹಾಗೂ ರೈತ ಸಂಘದ ಮುಖಂಡರು ಗ್ರಾಮ ಪಂಚಾಯತಿಗೆ ಭೇಟಿ ನೀಡಿದಾಗ ಪಿಡಿಓ ಸುಮಂಗಲಾ ಪತ್ತಾರ ಅವರನ್ನು ವಿಚಾರಿಸಿದಾಗ ಅರಿಕೆ ಉತ್ತರವನ್ನು ನೀಡುತ್ತಾರೆ.

ಈ ಕುರಿತು ಗ್ರಾಮ ಪಂಚಾಯಿತಿ ಅಧ್ಯಕ್ಷ ನೀಲ್ಲಪ್ಪ ಗಾಜಿ ಅವರನ್ನು ವಿಚಾರಿಸಿದಾಗ ಅವರು ಸಾರ್ವಜನಿಕರ ಮೇಲೆ ದರ್ಪ ತೋರಿಸಿ ನೀವು ಏನು ಮಾಡುತ್ತೀರಿ ಮಾಡಿಕೋಳಿ ಎಂದು ತನ್ನ ಆಪ್ತ ಚೇಲಾಗಳಿದ ನ್ಯಾಯವನ್ನು ಕೆಳಲುಬಂದ




ಸಾರ್ವಜನಿಕ ಮೇಲೆ ಗುಂಡಾಗಿರಿಯನ್ನು ಮಾಡಿಸುತ್ತಾನೆ.

ಗ್ರಾಮ ಪಂಚಾಯಿತಿ ಕಾರ್ಯಾಲಯ ಕೆಲಸದ ವೇಳೆಯಲ್ಲಿ ಕಾರ್ಯನಿರ್ವಹಣೆ ಮಾಡುವ ಬದಲು ರಾತ್ರಿ 10 ಘಂಟೆಯ ಮೇಲೆ ಗ್ರಾಮ ಪಂಚಾಯತಿ ಕಾರ್ಯ ಚಟುವಟಿಕೆ ನೆಡೆಯುತವೆ.

ತಿಮ್ಮಾಪೂರ ಗ್ರಾಮದಲ್ಲಿ ಒಟ್ಟು 650 ಜನ ಉದ್ಯೋಗ ಖಾತ್ರಿ ಜಾಬ್ ಕಾರ್ಡ್ ಹೊಂದಿದ ಕೂಲಿ ಕಾರ್ಮಿಕರು ಇದ್ದಾರೆ .ಆದರೆ ಎಲ್ಲಾ ಕೂಲಿ ಕಾರ್ಮಿಕರಿಗೆ ಇಲ್ಲಿ ಉದ್ಯೋಗ ಸಿಗುತ್ತಿಲ್ಲ ಅಧ್ಯಕ್ಷ ಆಪ್ತರಾದ ಪ್ರಕಾಶ ಯತ್ನಟ್ಟಿ ಹಾಗೂ ಶಿವಪುತ್ರಪ್ಪ ತಿಮ್ಮಾಪೂರ ಉದ್ಯೋಗ ಮಿತ್ರ ಕೆಲಸಮಾಡುತಿದ್ದು ಅವರು ತಮ್ಮಗೆ ಬೇಕಾದವರನ್ನು ಮಾತ್ರ ಕೆಲಸಕ್ಕೆ ಕೆರೆದ್ದುಕೂಂಡು ಸರಕಾರಿ ಕೆಲಸದ ಸಮಯದಲ್ಲಿ ತನ್ನ ವೈಯಕ್ತಿಕ ಮನೆ ಕೆಲಸಕ್ಕೆ ಕೂಲಿ ಕಾರ್ಮಿಕರನ್ನು ಬಳಸಿಕೊಂಡು ಟ್ರಾಕ್ಟರ್ ಮೂಲಕ ತನ್ನ ಮನೆಗೆ ಮರಳು ಏರಿಸಿಕೊಳ್ಳುವುದು ಮಾಡಿಕೋಳುತ್ತಾನೆ. ಪಾಪ ಬಡ ಕೂಲಿ ಕಾರ್ಮಿಕರು ನಾವುಯಾಕ್ಕೆ ನಿನ್ನ ಕೆಲಸವನ್ನು ಮಾಡಬೇಕು ಎಂದರೆ ನಾಳೆ ಯಿಂದ ನೀವು ಕೆಲಸಕ್ಕೆ ಬರಬೇಡಿ ಎಂದು ಧಮಕಿ ಹಾಕಿ ನಿಮ್ಮ ಕುಲಿ ಹಣವನ್ನು ಪಡೇಯುವದು ಕಷ್ಟ ಎಂದು ಹೇಳುತ್ತಾನೆ.

ತನಗೆ ಬೇಕಾದ ನೂರಾರು ಜನ ಕೆಲಸಕ್ಕೆ ಹೋಗದೆ ಇರುವವರ ಹೆಸರಿನ ಮೇಲೆ ಎನ್ ಎಮ್ ಆರ್ ಹಾಕಿ ಲಕ್ಷಾಂತರ ರೂಪಾಯಿ ಹಣವನ್ನು ಲಪಟಾಯಿಸಿದಾರೆ

ಅರಣ್ಯ ಇಲಾಖೆಯ ಜಲಾನಯನ ಯೋಜನೆಯಡಿ ರೈತರ ಜಮೀನುಗಳ ಬದುವುಗಳ ಮೇಲೆ ಸಸಿ ನೆಡುವ ಕಾಮಗಾರಿಯಲಿಯು ಸಹ ಕೆಲಸಕ್ಕೆ ಹೋಗದೆ ಇರುವವರ ಹೆಸರಿನಲ್ಲಿ ಲಕ್ಷಾಂತರ ರೂಪಾಯಿ ಹಣವನ್ನು ಲಪಟಾಯಿಸಿದಾರೆ.

ಇದ್ದು ಸರ್ಕಾರದ ಹಾಗೂ ಸಾರ್ವಜನಿಕರು ಹಣವಾಗಿರುತ್ತದೆ ಅದ್ದಕೆ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥ ವಿರುದ್ಧ ಕಾನೂನು ಕ್ರಮ ಕೈಗೊಡು ಸರ್ಕಾರಕ್ಕೆ ಮರಳಿ ಈ ಹಣವನ್ನು ಸಂದಾಯ ಮಾಡಿಸಬೇಕು ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾಕ್ಟರ್ ಸುಶೀಲಾ ಬಿ ಅವರಿಗೆ ಮನವಿ ಪತ್ರವನ್ನು ನೀಡಲಾಯಿತು . ಮನವಿ ಪತ್ರವನ್ನು ಸ್ವೀಕರಿಸಿ ಮಾತನಾಡಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರ ಮೇಲೆ ಸೂಕ್ತ ಕಾನೂನಿನ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ವಿ ಆರ್ ನಾರಾಯಣರೆಡ್ಡಿ ಬಣದ ಗದಗ ಜಿಲ್ಲಾ ರೈತ ಸಂಘದ ಅಧ್ಯಕ್ಷ ಯಲ್ಲಪ್ಪ ಎಚ್ ಬಾಬರಿ ಹಾಗೂ ರೈತ ಸಂಘದ ಗ್ರಾಮ ಘಟಕದ ಅಧ್ಯಕ್ಷ ಹುಚ್ಚೀರಪ್ಪ ಜೋಗಿನ, ಸದಸ್ಯರಾದ ಶರಣಪ್ಪ ಜೋಗಿನ, ಯಲ್ಲಪ್ಪ ಹಾಗಲದ, ಬಸವರಾಜ ದೇವರವರ , ರಾಮಪ್ಪ ಹಚ್ಚಪ್ಪನವರ, ರಾಮಣ್ಣ ಖಂಡ್ರಿ, ಬಾಳಪ್ಪ ಗಂಗರಾತ್ರಿ, ರಾಮಣ್ಣ ಕಂಕರಿ, ಹನುಮಪ್ಪ ಆಲುರು,ಉದಯ ಗಂಗರಾತ್ರಿ, ವೆಂಕಟೇಶ ಸತ್ಯಪ್ಪನವರ, ಶೇಖಪ್ಪ ದಾಸಣ್ಣವರ ಹಾಗೂ ಇನ್ನೂ ಮುಂತಾದ ರೈತ ಮುಖಂಡರು ಪಾಲ್ಗೊಂಡಿದ್ದರು.

# ಕರುನಾಡ ಕಂದ

ಸಂಪುಟ-1 । ಸಂಚಿಕೆ-24

ದಿನಾಂಕ: 16-10-2022 । ಪುಟಗಳು: 16


# ಆತ್ಮವಿಶ್ವಾಸ

ವ್ಯವಹಾರದಲ್ಲಿ ತುಂಬಲಾರದ ನಷ್ಟ ಕಂಡ ಬಿಜಿನೆಸ್‌ಮ್ಯಾನ್ ಒಬ್ಬ ಪಾರ್ಕಿನ ಕಲ್ಲುಬೆಂಚಿನ ಮೇಲೆ ಕುಳಿತಿದ್ದ. ಇನ್ನೇನು ಆಕಾಶವೇ ಕಳಚಿ ತಲೆಮೇಲೆ ಬೀಳುತ್ತದೆ ಎಂಬಂತಿತ್ತು ಅವನ ಮುಖ. ಸಾಲಗಾರರು ಬೆನ್ನ ಹಿಂದೆ ಬಿದ್ದಿದ್ದರು, ಪಾಲುದಾರರು ಹಣ ಕೇಳುತ್ತಿದ್ದರು, ಕೆಲಸಗಾರರಿಗೆ ಸಂಬಳ ಕೊಡಬೇಕಿತ್ತು?.ಹೀಗೆ ಸಮಸ್ಯೆಗಳ ಸರಮಾಲೆ ಆತನ ಕುತ್ತಿಗೆಗೆ ಸುತ್ತಿಕೊಂಡಿತ್ತು. ಆಗ ಅಲ್ಲಿಗೆ ಮುದುಕನೊಬ್ಬ ಬಂದ. ಬಿಜಿನೆಸ್‌ಮ್ಯಾನ್‌ನ ಮುಖ ನೋಡಿದರೆ ಆತ ಕಷ್ಟದಲ್ಲಿದ್ದಾನೆಂದು ಯಾರು ಬೇಕಾದರೂ ಸುಲಭವಾಗಿ ಹೇಳಬಹುದಿತ್ತು. 'ಏನಪ್ಪಾ ನಿನ್ನ ಸಮಸ್ಯೆ?' ಅಂತ ಮುದುಕ ನೇರವಾಗಿ ವಿಷಯಕ್ಕೆ ಬಂದ. ಈತ ತನ್ನೆಲ್ಲ ಕಷ್ಟಗಳನ್ನು ಹೇಳಿಕೊಂಡ. ಸಾಯುವುದೊಂದೇ ಈಗ ಕಾಣಿಸುತ್ತಿರುವ ದಾರಿಯೆಂದು ಹೇಳಿ ಕಣ್ಣೀರಾದ.

ಆಗ ಮುದುಕ 'ನಾನು ನಿನಗೆ ಸಹಾಯ ಮಾಡುತ್ತೇನೆ. ಯೋಚಿಸಬೇಡ' ಎಂದು ಹೇಳಿ ಈತನ ಹೆಸರಿನಲ್ಲಿ ಚೆಕ್ ಒಂದನ್ನು ಬರೆದುಕೊಟ್ಟ. 'ಈ ಹಣ ತೆಗೆದುಕೋ. ನಿನ್ನ ಆರ್ಥಿಕ ಸಮಸ್ಯೆಗಳನ್ನೆಲ್ಲ ಮೊದಲು ಬಗೆ ಹರಿಸಿಕೋ. ಒಂದು ವರ್ಷದ ನಂತರ ಇದೇ ದಿನ, ಇದೇ ಜಾಗಕ್ಕೆ ಬಾ. ಆಗ ನನಗೆ ಹಣ ವಾಪಸ್ ಮಾಡು. ಒಂದು ವರ್ಷ ಸಮಯವಿದೆ, ಬೇಕಾದಷ್ಟು ಹಣವಿದೆ. ನೋಡು ಏನು ಮಾಡ್ತೀಯ' ಅಂತ ಹೇಳಿ ಬೆನ್ನು ತಿರುಗಿಸಿ ಹೊರಟೇ ಬಿಟ್ಟ!

ಬಿಜಿನೆಸ್‌ಮ್ಯಾನ್ ಚೆಕ್ ತೆಗೆದು ನೋಡಿ ಅವಾಕ್ಕಾದ. 5,00,000 ಡಾಲರ್‌ನ ಚೆಕ್‌ನ ಕೊನೆಗೆ ಅತ್ಯಂತ ಶ್ರೀಮಂತನಾಗಿದ್ದ ಜಾನ್ ಡಿ ರಾಕ್ಫೆಲ್ಲರ್‌ನ ಸಹಿ ಇತ್ತು! ಅರೇ, ಅವರನ್ನು ನಾನು ಗುರುತಿಸಲೇ ಇಲ್ಲವಲ್ಲ ಎಂದು ಬಿಜಿನೆಸ್‌ಮ್ಯಾನ್ ಕೈ ಕೈ ಹಿಸುಕಿಕೊಂಡ. ನನ್ನೆಲ್ಲ ಕಷ್ಟಗಳು ಒಂದೇ ಕ್ಷಣದಲ್ಲಿ ನಿವಾರಣೆಯಾದವೆಂದು ಹಿಗ್ಗಿದ. ಆದರೂ ಆ ಚೆಕ್‌ಅನ್ನು ನಗದು ಮಾಡಿಸಿಕೊಳ್ಳಬಾರದೆಂದು ನಿರ್ಧರಿಸಿದ. ಅಷ್ಟೊಂದು ದೊಡ್ಡ ಚೆಕ್ ಇದೆ ಎಂಬುದೇ ಆತನಿಗೆ ಬೆಟ್ಟದಷ್ಟು ಆತ್ಮವಿಶ್ವಾಸ ನೀಡಿತ್ತು. ಆತ ಹೊಸ ಹುರುಪಿನೊಂದಿಗೆ ವ್ಯವಹಾರ ಶುರುಮಾಡಿದ. ಹೊಸ ಸಾಲಗಳನ್ನು ಮಾಡಿ, ಹಳೆಯ ಬಾಕಿಗಳನ್ನು ತೀರಿಸಿದ. ಕೆಲವೊಂದಿಷ್ಟು ಮಹತ್ವದ ನಿರ್ಧಾರಗಳ ಮೂಲಕ ವ್ಯವಹಾರವನ್ನು ಹಂತ ಹಂತವಾಗಿ ಮೇಲಕ್ಕೆ ತಂದ. ಮೂರು-ನಾಲ್ಕು ತಿಂಗಳುಗಳಲ್ಲಿ ಆತ ಸಾಲದ ಹೊರೆಯಿಂದ ಮುಕ್ತನಾದ. ವ್ಯವಹಾರ ಸುಗಮವಾಗಿ ನಡೆಯತೊಡಗಿತು.

ಕೊಟ್ಟ ಮಾತಿನಂತೆ ಸರಿಯಾಗಿ ಒಂದು ವರ್ಷದ ಬಳಿಕ ಬಿಜಿನೆಸ್‌ಮ್ಯಾನ್ ಅದೇ ಪಾರ್ಕ್‌ಗೆ ಹೋದ. ಕೈಯಲ್ಲಿ ನಗದು ಮಾಡಿಸಿಕೊಳ್ಳದ ಚೆಕ್ ಇತ್ತು. ಹೇಳಿದ ಸಮಯಕ್ಕೆ ಆ ಶ್ರೀಮಂತ ಮುದುಕನೂ ಬಂದ. ಇನ್ನೇನು ಚೆಕ್ ವಾಪಸ್ ಮಾಡಿ, ತನ್ನ ಯಶಸ್ಸಿನ ಕಥೆ ಹೇಳಬೇಕೆನ್ನುವಷ್ಟರಲ್ಲಿ ಹಿಂದಿನಿಂದ ನರ್ಸ್ ಒಬ್ಬಳು ಓಡಿ ಬರುತ್ತಿರುವುದು ಕಾಣಿಸಿತು. ಆಕೆ ಏದುಸಿರು ಬಿಡುತ್ತಾ ಓಡಿ ಬಂದು ಮುದುಕನನ್ನು ಗಟ್ಟಿಯಾಗಿ ಹಿಡಿದುಕೊಂಡಳು. 'ಅಬ್ಬಾ ದೇವರೇ ಕೊನೆಗೂ ಈತನನ್ನು ಹಿಡಿದುಬಿಟ್ಟೆ!' ಎಂದು ಜೋರಾಗಿ ಉಸಿರಾಡುತ್ತಾ ಉದ್ಗರಿಸಿದಳು. 'ನಿಮಗೆ ಈತ ಏನೂ ತೊಂದರೆ ಕೊಟ್ಟಿಲ್ಲ ಎಂದು ಭಾವಿಸಿದ್ದೇನೆ. ಅಯ್ಯೋ ಈತನೊಬ್ಬ ಹುಚ್ಚು ಮುದುಕ. ಪದೇ ಪದೇ ಆಸ್ಪತ್ರೆಯಿಂದ ತಪ್ಪಿಸಿಕೊಂಡು ಹೋಗುವ ಚಟ. ತನ್ನನ್ನು ತಾನು ಜಾನ್ ಡಿ. ರಾಕ್ಫೆಲ್ಲರ್ ಅಂತ ಕಂಡವರಿಗೆಲ್ಲ ಪರಿಚಯಿಸಿಕೊಳ್ಳುತ್ತಾನೆ. ಅದನ್ನು ಹೌದು ಎಂದು ನಂಬುವ ಹುಚ್ಚರೂ ಇದ್ದಾರೆ' ಎಂದು ಹೇಳಿ ಮುದುಕನನ್ನು ಎಳೆದು ಕರೆದುಕೊಂಡು ಹೋದಳು.

ಈ ಬಿಜಿನೆಸ್‌ಮ್ಯಾನ್ ತನ್ನ ಮುಂದೆ ನಡೆದಿದ್ದು ಕನಸೋ, ನಿಜವೋ ಎಂದು ತಿಳಿಯದೆ ಬೆಪ್ಪನಂತೆ ನಿಂತಿದ್ದ. ಒಂದಿಡೀ ವರ್ಷ ಆತ ತನ್ನ ಬಳಿ ಅರ್ಧ ಮಿಲಿಯನ್ ಡಾಲರ್ ಹಣ ಇದೆ ಎಂದು ಭ್ರಮಿಸಿ ವ್ಯಾಪಾರ- ವ್ಯವಹಾರವನ್ನು ವಿಸ್ತರಿಸುತ್ತಾ, ಸಾಲ ಮಾಡಿ, ಸಾಲ ತೀರಿಸುತ್ತಾ ಹೋದ. ಆದರೀಗ ಗೊತ್ತಾಗಿದ್ದೇನೆಂದರೆ ಇವನ ಬಳಿ ಇದ್ದದ್ದು ಅರ್ಧ ಮಿಲಿಯನ್ ಡಾಲರ್ ಚೆಕ್ ಅಲ್ಲ, ಯಾವನೋ ಒಬ್ಬ ಹುಚ್ಚ ಕೊಟ್ಟಿದ್ದ ಕಾಗದದ ಚೂರು! ಹಾಗಾದರೆ ತನ್ನ ಕೈಯಲ್ಲಿ ಇನ್ನೇನೂ ಮಾಡಲು ಸಾಧ್ಯವಿಲ್ಲ ಅಂದುಕೊಂಡಿದ್ದವನಿಂದ ಅಭೂತಪೂರ್ವ ಕೆಲಸಗಳನ್ನು ಮಾಡಿಸಿದ ಆ ಶಕ್ತಿ ಯಾವುದು?

ಅದುವೇ ಆತ್ಮವಿಶ್ವಾಸ! ಅದೊಂದು ನಿಮ್ಮ ಜತೆಯಿದ್ದರೆ ಎಂಥ ಅಸಾಧ್ಯವನ್ನೂ ಸಾಧ್ಯಗೊಳಿಸಬಹುದು.



**ಶ್ರೀ ಶಿವನಗೌಡ ಪೊಲೀಸ್ ಪಾಟೀಲ್**
**ಉಪನ್ಯಾಸಕರು ಕೊಪ್ಪಳ, 9845646370**

# ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ




ಧಾರವಾಡ: ಜಿಲ್ಲೆಯ ಕಲಘಟಗಿ ತಾಲ್ಲೂಕಿನ ಬೀರವಳ್ಳಿ ಗ್ರಾಮ ಪಂಚಾಯತ್ ನಲ್ಲಿ 153ನೇ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಆಚರಣೆಯ ನಿಮಿತ್ಯವಾಗಿ ಬೀರವಳ್ಳಿ ಗ್ರಾಮ ಪಂಚಾಯತನಲ್ಲಿ ಸ್ವಚ್ಛತಾ ಹೀ ಸೇವಾ ಕುರಿತು ಗ್ರಾಮ ಸಭೆ ಹಾಗೂ 2022-23ನೇ ಸಾಲಿನ ಮೂಲ ಸಾಕ್ಷರತಾ ಕಾರ್ಯಕ್ರಮದ ಕಲಿಕಾ ಕೇಂದ್ರಗಳ ಉದ್ಘಾಟನೆ ಹಾಗೂ ಗ್ರಾಮಸಭೆ

ಕಾರ್ಯಕ್ರಮದ ಅಧ್ಯಕ್ಷತೆ ನಿಂಗಪ್ಪಾ ಮ ಲಮಾಣಿ ಅಧ್ಯಕ್ಷರು ಗ್ರಾ.ಪಂ ಬೀರವಳ್ಳಿ ವಹಿಸಿಕೊಂಡಿದ್ದರು.

ಎಸ್ ಬಿ ಸುಭರಗಟ್ಟಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಬೀರವಳ್ಳಿ ಕಾರ್ಯಕ್ರಮ ಉದ್ದೇಶಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು

ಕಾರ್ಯಕ್ರಮಕ್ಕೆ ನೋಡೆಲ್ ಅಧಿಕಾರಿ ಜಿ ಬಿ ಉಪ್ಪಿ ಸಾಕ್ಷರತಾ ಅಧಿಕಾರಿ ಎಂ ಹೆಚ್ ಪಾಟೀಲ್ ಸಿ ಆರ್ ಪಿ ಹೊನ್ನಳ್ಳಿ ಕ್ಲಸ್ಟರ್ ಮುಖ್ಯ ಅತಿಥಿಗಳು ಬೀರವಳ್ಳಿ ಗ್ರಾಮ ಪಂಚಾಯತ್ ಸದಸ್ಯರ ಕಾರ್ಯಕ್ರಮದ

ವಂದನಾರ್ಪಣೆಯನ್ನು ಆನಂದ ಜೆ ಅಂಗಡಿ ಬಿಲ್ ಕಲೆಕ್ಟರ್ ಬೀರವಳ್ಳಿ ಗ್ರಾಮ್ ಪಂಚಾಯತ್ ಬೀರವಳ್ಳಿ ಇವರು ನಡೆಸಿಕೊಟ್ಟರು.

**ವರದಿ-ಪುಂಡಲೀಕ ಧಡೆದ**

# ಗಾಂಧಿ ಜಯಂತಿ ಆಚರಣೆ



ಧಾರವಾಡ:ಜಿಲ್ಲೆಯ ಕಲಘಟಗಿ ತಾಲ್ಲೂಕಿನ ಬೆಂಡಲಗಟ್ಟಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 153ನೇ ಗಾಂಧಿ ಜಯಂತಿಯನ್ನ ಆಚರಿಸಲಾಯಿತು

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷರಾದ ಶ್ರೀ ಕೆ ಕೆ ಧಡೆದ ವಹಿಸಿಕೊಂಡಿದ್ದರು

ಕಾರ್ಯಕ್ರಮದ ನಿರೂಪಣೆಯನ್ನು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಸಿ ಕೃಷ್ಣ ಅವರು ನಡೆಸಿಕೊಟ್ಟರು ಹಾಗೂ ಎಂ ಹೆಚ್ ಪಾಟೀಲ್ , ಸಿ ಆರ್ ಪಿ ತ್ ಹೊನ್ನಳ್ಳಿ ಕ್ಲಸ್ಟರ್ ಪ್ರಾಸ್ತವಿಕವಾಗಿ ಮಾತನಾಡಿದರು ಕಾರ್ಯಕ್ರಮಕ್ಕೆ ಎಲ್ಲಾ ಎಸ್ ಡಿ ಎಂ ಸಿ ಯ ಪದಾಧಿಕಾರಿಗಳು ಹಾಗೂ ಊರಿನ ಯುವಕ ಮಂಡಲದ ಪದಾಧಿಕಾರಿಗಳಾದ ನಾಗೇಶ ಗಾಯಕವಾಡ,ಗಣಪತಿ ಆಸ್ತಕಟ್ಟಿ,ಚಂದ್ರಯ್ಯ ಕ್ವಾಟಿ,ಕಲ್ಲಪ್ಪ ಸಪ್ಪಡ್ಲ ಹಾಗೂ ಸಮಸ್ತ ಗುರುಹಿರಿಯರು ಭಾಗವಹಿಸಿದ್ದರು ಕಾರ್ಯಕ್ರಮದ ವಂದನಾರ್ಪಣೆಯನ್ನು ಶಿಕ್ಷಕಿ ಅನಿತಾ ಅವರು ನಡೆಸಿ ಕೊಟ್ಟರು

**ವರದಿ-ಪುಂಡಲೀಕ ಧಡೆದ**



ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಬಿಜೆಪಿ ಉಪಾಧ್ಯಕ್ಷರಾದ ಕೊರಟಗೆರೆ ಪ್ರಕಾಶ್ 55ನೇ ಹುಟ್ಟುಹಬ್ಬವನ್ನು ದಲಿತ ಮುಖಂಡರು ಹಾಗೂ ಬಿಜೆಪಿ ಮುಖಂಡರುಗಳು ಆಚರಿಸಿದರು ಕಾರ್ಯಕ್ರಮದಲ್ಲಿ ದೇವರಾಜ್ ಪರ್ವತಯ್ಯ ಶೇಖರ್ ಸರ್ಕಲ್ ಇನ್ಸ್ ಪೆಕ್ಟರ್ ಶ್ರೀಧರ್ ರೇಣುಕಾ ಪ್ರಸಾದ್ ಭಾಗವಹಿಸಿದ್ದರು ರೇಣುಕಾ ಪ್ರಸಾದ್ ಅವರು ಮಾತನಾಡಿ ಪ್ರಕಾಶ ಅವರು ಮೃದು ಸ್ವಭಾವದವರು ಒಳ್ಳೆಯ ಮುಖಂಡರು ಒಳ್ಳೆಯ ಕೆಲಸಗಾರರು ಹಾಗೂ ದೀನ ದಲಿತರ ಉದ್ಧಾರಕರು ಎಂದರು. ಕಾರ್ಯಕ್ರಮದ ಕೇಂದ್ರ ಬಿಂದುವಾದ ಪ್ರಕಾಶ್ ಅವರು ಮಾತನಾಡಿ ಎಲ್ಲಾ ಅಭಿಮಾನಿಗಳು ಎಲ್ಲ ಮುಖಂಡರು ರೈತರು ಬಂದು ನನ್ನ ಹುಟ್ಟುಹಬ್ಬವನ್ನು ಆಚರಿಸುತ್ತಿರುವುದು ನನ್ನ ಭಾಗ್ಯ ಎಂದು ಖುಷಿ ಪಟ್ಟರು.

**-ಹಾಲಪ್ಪ**

ಕರುನಾಡ ಕಂದ
ಸಂಪುಟ–1 । ಸಂಚಿಕೆ–24
ದಿನಾಂಕ: 16–10–2022 । ಪುಟಗಳು: 16

# ಫಾಸ್ಟ್ ಫುಡ್ ನ ದುಷ್ಪರಿಣಾಮಗಳು ಆಧುನಿಕ (ಪಾಶ್ಚಾತ್ಯ)ಪದ್ಧತಿಯ ಆಹಾರಪದಾರ್ಥಗಳು

ಕುಟುಂಬದಲ್ಲಿನ ತಾಯಿ–ಸಹೋದರಿಯರು ತಯಾರಿಸಿದ ಊಟ,ಉಪಾಹಾರ,ಖಾದ್ಯ ಅಥವಾ ಪಾನೀಯಗಳನ್ನು ಸೇವಿಸುವುದನ್ನು ಬಿಟ್ಟು, ಇತ್ತೀಚೆಗೆ ಹೊರಗಿನ ಖಾದ್ಯ ಪದಾರ್ಥಗಳನ್ನು ಉದಾ.'ಫಾಸ್ಟ್ ಫುಡ್' ಹೊರಗೆ ಹೋಗಿ ಅಥವಾ ಮನೆಗೆ ತಂದು ತಿನ್ನುವ ಪದ್ಧತಿಯು ಎಲ್ಲ ಕಡೆ ಬೆಳೆದಿದೆ.ನಾಲಿಗೆಯ ಚಪಲವನ್ನು ತೀರಿಸುವ ಪಾಶ್ಚಾತ್ಯರ ಆಹಾರ ಪದ್ಧತಿಯು ಕ್ಷಣಿಕ ಸುಖವನ್ನು ಕೊಟ್ಟರೂ ಕೊನೆಗೆ ಮಾನವೀ ಶರೀರಕ್ಕೆ ಅಹಿತಕಾರಿಯೇ ಆಗಿದೆ.

ಹಿಂದೂ ಸಂಸ್ಕೃತಿಯನ್ನು ನಾಶಗೊಳಿಸಿ ಅಸುರೀ ಜೀವನ ಪದ್ಧತಿಯನ್ನು ಪ್ರಾರಂಭಿಸಿದ ಪಾಶ್ಚಾತ್ಯರ ಆಹಾರ ಪದ್ಧತಿ

'ಈಗಿನ ಕಾಲದಲ್ಲಿ ಕ್ರಮೇಣವಾಗಿ ಮಡಿ–ಮೈಲಿಗೆಗಳು ನಾಶವಾಗುತ್ತಿವೆ. ಈಗ ಕಾಲುಗಳನ್ನು ತೊಳೆದುಕೊಂಡು ಒದ್ದೆ ಕಾಲುಗಳಿಂದ ಊಟ ಮಾಡುವುದು, ಪ್ರಾರ್ಥನೆ ಮಾಡಿ ಊಟ ಮಾಡುವುದು,ಸಾತ್ತ್ವಿಕ ಊಟವನ್ನು ಮಾಡುವುದು ಕಡಿಮೆಯಾಗಿ ಪಾಶ್ಚಾತ್ಯ ಪದ್ಧತಿಯ ಊಟವನ್ನು ಮಾಡುವುದು, ಮಾಂಸಾಹಾರ ಮಾಡುವುದು, ತಿನ್ನುವಾಗ ಬೆರಳುಗಳ ಬದಲು ಚಮಚ–ಮುಳ್ಳುಚಮಚಗಳನ್ನು ಉಪಯೋಗಿಸುವುದು, ಊಟ ಮಾಡುವಾಗ ಪರಸ್ಪರರು ಅಶ್ಲೀಲವಾಗಿ ಮಾತನಾಡುವುದು, ಹಾಗೆಯೇ ಮನೆಯಲ್ಲೂ ಬೂಟು–ಚಪ್ಪಲಿಗಳನ್ನು ಉಪಯೋಗಿಸುವುದು, ಇವುಗಳಿಂದ ಹಿಂದೂ ಸಂಸ್ಕೃತಿಯು ನಾಶವಾಗಿ ಅಸುರೀ ಜೀವನ ಪದ್ಧತಿಯು ಉದಯವಾಗುತ್ತಿದೆ.

'ಫಾಸ್ಟ್ ಫುಡ್'

ತಮೋಗುಣೀ 'ಫಾಸ್ಟ್ ಫುಡ್'ಗಳನ್ನು ತಿನ್ನುವುದರಿಂದಾಗುವ ದುಷ್ಪರಿಣಾಮಗಳು: ಈಗಿನ ಕಾಲದಲ್ಲಿ ಬಹಳಷ್ಟು ಮಕ್ಕಳಿಗೆ ಬರ್ಗರ್, ಪಿಝ್ಝಾ, ಚಿಪ್ಸ್‌ನಂತಹ ಪದಾರ್ಥಗಳು ಹಿಡಿಸುತ್ತವೆ. ಆದುದರಿಂದ ಈ ಮಕ್ಕಳು ಹಠಮಾಡಿ ತಂದೆ–ತಾಯಿಯರಿಂದ ಈ ಪದಾರ್ಥಗಳನ್ನು ಕೊಂಡು ತಿನ್ನುವುದು ಕಂಡುಬರುತ್ತದೆ. ಈ ಪದಾರ್ಥಗಳಿಗೆ 'ಫಾಸ್ಟ್ ಫುಡ್' ಎನ್ನುತ್ತಾರೆ. ಈ ಪದಾರ್ಥಗಳು ಭಾರತೀಯ ಪದಾರ್ಥಗಳಾಗಿಲ್ಲ, ಅವು ಪಾಶ್ಚಾತ್ಯ ದೇಶಗಳಿಂದ ನಮ್ಮ ಕಡೆಗೆ ಬಂದಿವೆ. ಪಾಶ್ಚಾತ್ಯರ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಟ್ಟು ನಡೆಯುವುದರಿಂದ ಈಗ ಹಿಂದೂಸ್ಥಾನದಲ್ಲಿಯೂ 'ಫಾಸ್ಟ್ ಫುಡ್' ಹೆಸರಿನ ಭೋಗವಾದ ಸಂಸ್ಕೃತಿಯು ಪಸರಿಸಿದೆ. 'ಫಾಸ್ಟ್ ಫುಡ್' ಬಾಹ್ಯತಃ ರುಚಿಕರವಾಗಿದ್ದರೂ, ಅವು ತಮೋಗುಣೀ ಆಹಾರವಾಗಿರುವುದರಿಂದ ಶಾರೀರಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ದುಷ್ಪರಿಣಾಮಗಳು ನಿರ್ಮಾಣವಾಗುತ್ತವೆ.

**ಶಾರೀರಿಕ ದುಷ್ಪರಿಣಾಮಗಳು:** ಪಿಝ್ಝಾ, ಬರ್ಗರ್, ಚಿಪ್ಸ್ ಮುಂತಾದ ಫಾಸ್ಟ್ ಫುಡ್‌ಗಳೆಂದರೆ ಕೃತಕ ಮತ್ತು ಪ್ರಕ್ರಿಯೆಗಳನ್ನು ಮಾಡಿದ ತಂಗಳು ಅನ್ನ! ಇಂತಹ ಕೃತಕ ಮತ್ತು ಪ್ರಕ್ರಿಯೆಗಳಿಗೆ ಒಳಪಟ್ಟ ತಂಗಳು ಅನ್ನವನ್ನು ಸತತವಾಗಿ ತಿನ್ನುವುದು ಶರೀರಕ್ಕೆ ಅಪಾಯಕರವಾಗಿದೆ.

**'ಫಾಸ್ಟ್ ಫುಡ್'**ಗಳು ಜೀರ್ಣವಾಗಲು ಕಠಿಣವಾಗಿರುವುದರಿಂದ ಅವುಗಳನ್ನು ತಿನ್ನುವುದರಿಂದ ಜೀರ್ಣಾಂಗ ವ್ಯೂಹವು ಕೆಡುತ್ತದೆ.

ವಿದೇಶಗಳಲ್ಲಿ 'ಫಾಸ್ಟ್ ಫುಡ್' ಮತ್ತು ಕೃತಕ ತಂಪುಪಾನೀಯಗಳ ಅತಿಯಾದ ಸೇವನೆಯಿಂದ ಮಕ್ಕಳ ಸ್ಥೂಲತನ ಹೆಚ್ಚಾಗುತ್ತಿದೆ ಮತ್ತು ಅವರ ಮುಖವು ವಿಕೃತವಾಗಿ ಕಾಣಿಸುತ್ತಿದೆ.

'ಫಾಸ್ಟ್ ಫುಡ್'ನಿಂದ ಶರೀರವು ದಪ್ಪವಾಗಿ ಮನುಷ್ಯನ ಆಯುಷ್ಯವು ಕಡಿಮೆಯಾಗಬಹುದು: 'ಫಾಸ್ಟ್ ಫುಡ್'ನಿಂದ ಶರೀರವು ದಪ್ಪವಾಗಿ ಮನುಷ್ಯನ ಆಯುಷ್ಯವು ಕಡಿಮೆ ಯಾಗಬಹುದು. ಬ್ರಿಟನ್ನಿನ ಪ್ರಾ.ಡೇವಿಡ್ ಕಿಂಗ್‌ರವರ ಮಾರ್ಗದರ್ಶನದಡಿಯಲ್ಲಿ ಸಂಶೋಧನೆ ಮಾಡುವ ಒಂದು ಘಟಕವು 'ಈ ಸ್ಥೂಲಕಾಯದಿಂದ 13 ವರ್ಷಗಳಷ್ಟು ಆಯುಷ್ಯವು ಕಡಿಮೆಯಾಗುತ್ತದೆ' ಎಂದು ಹೇಳಿದೆ.

ಬೌದ್ಧಿಕ ದುಷ್ಪರಿಣಾಮ : 'ಚೈನೀಜ ಫುಡ್' ಅನ್ನೂ 'ಫಾಸ್ಟ್ ಫುಡ್' ಎಂದೇ ಪರಿಗಣಿಸಲಾಗುತ್ತದೆ. ಅದರಲ್ಲಿ ಬಳಸುವ 'ಅಜಿನೋಮೋಟೋ' ಪದಾರ್ಥವು ಬುದ್ಧಿಗೆ ಹಾನಿಕರವಾಗಿದೆ.

ಆಧ್ಯಾತ್ಮಿಕ ದುಷ್ಪರಿಣಾಮಗಳು : 'ಫಾಸ್ಟ್ ಫುಡ್'ಗಳನ್ನು ಬಹಳಷ್ಟು ಸಮಯ ಸಂಗ್ರಹಿಸಿಡಲಾಗುತ್ತದೆ. ಇದರಿಂದ ಅವುಗಳಲ್ಲಿನ ತಮೋಗುಣ, ಅಂದರೆ ಕೆಟ್ಟ ಗುಣವು ಹೆಚ್ಚಾಗುತ್ತದೆ. ಇಂತಹ ತಮೋಗುಣಿ ಪದಾರ್ಥಗಳ ಕಡೆಗೆ ಕೆಟ್ಟ ಶಕ್ತಿಗಳು ಆಕರ್ಷಿತವಾಗುತ್ತವೆ. ಇವುಗಳನ್ನು ತಿನ್ನುವವರ ವೃತ್ತಿಯು ತಾಮಸಿಕವಾಗುತ್ತದೆ. ವ್ಯಕ್ತಿಯ ವೃತ್ತಿಯು ತಾಮಸಿಕವಾಗುವುದರಿಂದ, ಅವನಲ್ಲಿ ಸಿಟ್ಟು, ಸಿಡಿಮಿಡಿಗೊಳ್ಳುವುದು, ಗರ್ವಿಷ್ಠತನ ಮುಂತಾದ ದುರ್ಗುಣಗಳು ಹೆಚ್ಚಾಗುತ್ತವೆ. ಇದರಿಂದ ಆ ವ್ಯಕ್ತಿಗೆ ಕೆಟ್ಟ ಶಕ್ತಿಗಳ ತೊಂದರೆಯಾಗುವ ಸಾಧ್ಯತೆಯೂ ಹೆಚ್ಚುತ್ತದೆ.

'ಜಂಕ್ ಫುಡ್'

ಆಧುನಿಕ ಪದಾರ್ಥಗಳಲ್ಲಿ ಪೋಷಕಾಂಶಗಳು ಇಲ್ಲದಿರುವುದರಿಂದ ಆರೋಗ್ಯದ ದೃಷ್ಟಿಯಿಂದ ಅವು ನಿರುಪಯುಕ್ತವಾಗಿವೆ : 'ಈಗ ತಿನ್ನಲು ಪಿಝ್ಝಾ, ಬರ್ಗರ್, ಡೋನಟ, ಚಿಪ್ಸ್, ವೇಫರ್ಸ್ ಮತ್ತು ಕುರಕುರೇಗಳದ್ದೇ ನೆನಪಾಗುತ್ತದೆ. ಇವುಗಳನ್ನು ತಿನ್ನುವುದೂ ಈಗ ಆಧುನಿಕತೆಯ ಒಂದು ದೊಡ್ಡ ಲಕ್ಷಣವೆಂದು ತಿಳಿದುಕೊಳ್ಳಲಾಗುತ್ತಿದೆ. ಈ ಎಲ್ಲ ಪದಾರ್ಥಗಳಿಗೆ 'ಜಂಕ್ ಫುಡ್' ಎನ್ನಲಾಗುತ್ತದೆ. 1972ರಲ್ಲಿ ಮೈಕೆಲ್ ಜಾಬ್ಸನ್ನನು ಪೋಷಕಾಂಶಗಳಿಲ್ಲದ ಮತ್ತು ಆರೋಗ್ಯದ ದೃಷ್ಟಿಯಿಂದ ನಿರುಪಯೋಗಿ ಆಹಾರಪದಾರ್ಥಗಳನ್ನು ಉದ್ದೇಶಿಸಿ 'ಜಂಕ್ ಫುಡ್' ಎಂಬ ಶಬ್ದವನ್ನು ಉಪಯೋಗಿಸಿದನು. ಅದು ರೂಢಿಯೂ ಆಯಿತು. ಈ ಎಲ್ಲ ಪದಾರ್ಥಗಳಲ್ಲಿ ಸೋಡಿಯಂ, ಉಪ್ಪು, ಸಕ್ಕರೆ ಮತ್ತು ಕೊಬ್ಬು ಹೆಚ್ಚಿಗೆ ಇರುತ್ತದೆ. ಆದುದರಿಂದ ಅವುಗಳಲ್ಲಿ ಕ್ಯಾಲೋರಿಸ್‌ಗಳೂ ಹೆಚ್ಚಿಗೆ ಇರುತ್ತವೆ, ಆದರೆ ಆ ಕ್ಯಾಲೋರಿಗಳಿಂದ ನಮಗೇನೂ ಪ್ರಯೋಜನವಿರುವುದಿಲ್ಲ.

**ನಿರುಪಯೋಗಿ ಆಹಾರಪದಾರ್ಥಗಳಿಂದಾಗುವ ದುಷ್ಪರಿಣಾಮಗಳು :** ನಿರುಪಯೋಗಿ ಆಹಾರ ಪದಾರ್ಥಗಳಿಂದ ಅನೇಕ ದುಷ್ಪರಿಣಾಮ ಗಳಾಗುತ್ತವೆ. 'ಅತಿಕೊಬ್ಬಿರುವ ಪದಾರ್ಥಗಳಿಂದ ರಕ್ತದಲ್ಲಿನ ಸ್ನಿಗ್ಧಾಮ್ಲ (ಕೊಲೆಸ್ಟ್ರಾಲ್) ಹೆಚ್ಚಾಗುತ್ತದೆ. ಸ್ನಿಗ್ಧಾಮ್ಲ ಮತ್ತು ಹೆಚ್ಚುವರಿ ಉಪ್ಪಿನಿಂದ ರಕ್ತದೊತ್ತಡವು ಹೆಚ್ಚಬಹುದು. ಸತತವಾಗಿ ಉಪ್ಪನ್ನು ಹೆಚ್ಚಿನ ಪ್ರಮಾಣದಲ್ಲಿ ತಿಂದರೆ ಮೂತ್ರಪಿಂಡಗಳಿಗೆ ತೊಂದರೆಯಾಗಬಹುದು. ಇಂತಹ ಪದಾರ್ಥಗಳನ್ನು ಸತತವಾಗಿ ಸೇವಿಸುವುದರಿಂದ ರಕ್ತದ ಹರಿಯುವಿಕೆಯ ಮೇಲೂ ದುಷ್ಪರಿಣಾಮವಾಗಬಹುದು' ಎಂದು ತಜ್ಞರು ಹೇಳುತ್ತಾರೆ.

ಯಾವ ಮಕ್ಕಳಿಗೆ ಇಂತಹ ವಸ್ತುಗಳು ಇಷ್ಟವಾಗುತ್ತವೆಯೋ ಮತ್ತು ಯಾರ ಪಾಲಕರು ಈ ಪದಾರ್ಥಗಳನ್ನು ತಮ್ಮ ಮಕ್ಕಳಿಗೆ ತಿನ್ನಲು ಕೊಡುತ್ತಾರೆಯೋ, ಅಂತಹ ಮಕ್ಕಳಿಗೆ ಮೂವತ್ತರ ಪ್ರಾಯದಲ್ಲೇ ಹೃದಯ ವಿಕಾರವಾಗುವ ಸಾಧ್ಯತೆ ಹೆಚ್ಚಿರುತ್ತದೆ.

ಜಂಕ್ ಫುಡ್'ನಿಂದ ಬಂಜೆತನ ಹೆಚ್ಚಾಗುತ್ತಿದೆ : 'ಜಂಕ್ ಫುಡ್'ಗಳನ್ನು ಹೆಚ್ಚಿಗೆ ತಿನ್ನುವುದರಿಂದ ಶರೀರದಲ್ಲಿನ ಹಾರ್ಮೋನುಗಳ ಸಮತೋಲನವು ಏರುಪೇರಾಗಿ ಶಾಲಾ–ಕಾಲೇಜಿನ ಬಹುತೇಕ ಹುಡುಗಿಯರು ಯೌವನಾವಸ್ಥೆಯಲ್ಲಿಯೇ 'ಪಾಲಿಸಿಸ್ಟಿಕ್ ಓವರಿ ಸಿಂಡ್ರೋಮ್'ಗೆ ಬಲಿಯಾಗುತ್ತಿದ್ದಾರೆ. ಇದರಿಂದ 25ನೇ ವರ್ಷದಲ್ಲಿ ವಿವಾಹವಾಗುವ ಶೇ.25ಕ್ಕಿಂತ ಹೆಚ್ಚು ತರುಣಿಯರು ಏನಾದರೊಂದು ಕಾರಣಕ್ಕಾಗಿ ಬಂಜೆಯರಾಗುತ್ತಾರೆ.

'ಫಾಸ್ಟ್ ಫುಡ್' ಅಥವಾ 'ಜಂಕ್ ಫುಡ್'ಗಳಿಗಿಂತ ಹಿಂದೂ ಪದ್ಧತಿಯಿಂದ ತಯಾರಿಸಿದ ಪದಾರ್ಥಗಳನ್ನು ಏಕೆ ತಿನ್ನಬೇಕು? : 'ಫಾಸ್ಟ್ ಫುಡ್' ಅಥವಾ 'ಜಂಕ್ ಫುಡ್' ಗಳನ್ನು ತಿನ್ನುವುದರಿಂದ ಶರೀರಕ್ಕೆ ಪೌಷ್ಟಿಕ ಆಹಾರವು ಸಿಗುವುದಿಲ್ಲ, 'ಈ ಪದಾರ್ಥಗಳು ಜೀರ್ಣಿಸಲು ಜಡವಾಗಿರುವುದರಿಂದ ತಿನ್ನುವವರ ಆರೋಗ್ಯವು ಕೆಡುತ್ತದೆ' ಎಂದು ಅನೇಕ ಡಾಕ್ಟರುಗಳು ಅಧ್ಯಯನ ಮಾಡಿ ಹೇಳಿದ್ದಾರೆ.

ಭಾರತೀಯ ಪದ್ಧತಿಯಿಂದ ತಯಾರಿಸಿದ ಪದಾರ್ಥಗಳು ಜೀರ್ಣವಾಗಲು ಮತ್ತು ಶರೀರವನ್ನು ಚೆನ್ನಾಗಿ ಪೋಷಿಸಲು ಉಪಯುಕ್ತವಾಗಿರುವುದರಿಂದ ಅವು ನಮ್ಮ ಪ್ರಕೃತಿಗೆ ಯೋಗ್ಯವಾಗಿವೆ. ನಿಸರ್ಗೋಪಚಾರ (ನ್ಯಾಚುರೋಪತಿ) ಪದ್ಧತಿಯಲ್ಲಿ 'ನೈಸರ್ಗಿಕ ಪದಾರ್ಥಗಳನ್ನು ತಿನ್ನುವುದರಿಂದ ಶರೀರಕ್ಕೆ ಹೆಚ್ಚು ಲಾಭವಾಗುತ್ತದೆ ಮತ್ತು ಕೃತಕ ಅಥವಾ ದೀರ್ಘಕಾಲ ಉಳಿಯಲು ಆಹಾರ ಪದಾರ್ಥಗಳ ಮೇಲೆ ಪ್ರಕ್ರಿಯೆ ಮಾಡಿದ ಪದಾರ್ಥಗಳನ್ನು ತಿಂದರೆ ಶಾರೀರಿಕ ವಿಕಾರಗಳು ಹೆಚ್ಚಾಗುತ್ತವೆ', ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಭಾರತೀಯ ಪದ್ಧತಿಯಿಂದ ತಯಾರಿಸಿದ ಪದಾರ್ಥಗಳು 'ನಿಸರ್ಗೋಪಚಾರ'ಕ್ಕೆ ತುಂಬಾ ಹತ್ತಿರವಾಗಿವೆ, ಉದಾ. ಕೋಸಂಬರಿ ಮತ್ತು ತರಕಾರಿಗಳು.

ಹೆಚ್ಚಿನ ಮಾಹಿತಿಗಾಗಿ ಓದಿ ಸನಾತನ ಸಂಸ್ಥೆ ನಿರ್ಮಿಸಿದ ಗ್ರಂಥ 'ಆಧುನಿಕ ಆಹಾರದ ಹಾನಿಗಳು'

**ಸಂಗ್ರಹ – ಶ್ರೀ.ವಿನೋದ ಕಾಮತ,**
**ವಕ್ತಾರರು, ಸನಾತನ ಸಂಸ್ಥೆ.**

## ಕಪ್ಪು ಹಲಗೆಯ ಮಾಂತ್ರಿಕ

ಹೊಕ್ಕೀದಿ ದಿನ ಶಾಲಿಗಿ ಹಾಕ್ಕೊಂಡ ಹೊತ್ತಿಗೆಗಳ ಹೆಗಲಿಗೆ
ಹೆಗಲಿಗೆ ಹಾಕೊಂಡ ಜ್ಞಾನದ ಬುತ್ತಿಯ ಬಿಚ್ಚಾಕ
ಜ್ಞಾನದ ಬುತ್ತಿಯ ಬಿಚ್ಚಾಕ ನನ ಗುರುವೇ ಅಜ್ಞಾನವ ಅಳಿಸಿ
ಸುಜ್ಞಾನದ ಅಕ್ಷರವ ಬಿತ್ತಿ ಬೆಳೆಯಾಕ .!!

ದಿನ ಬೇಗ ಎದ್ದೇಳತಿ ನಿನ್ನ ಅಬ್ಬರದಿ ನೀ ಇರತಿ
ಕೆಲಸ ಕಾರ್ಯಗಳನು ಬಹುಬೇಗ ಮುಗಿಸತಿ
ತಿಂಡಿ ತಿನಿಸುಗಳನು ಮಾತ್ರ ಸಮಯವಿದ್ದರ ನೀ ತಿನ್ನತಿ
ಯಾರೇನೇ ಅಂದರೂ ನಿನ್ನ ತಯಾರಿಯಲ್ಲಿ ನೀ ಇರತಿ.....!!

ಆತುರದಲ್ಲಿರತಿ ನೀ ಶಾಲಿಗಿ ಹೋಗಾಕ
ನಕ್ಕು ನಲಿದು ಮಕ್ಕಳೊಂದಿಗೆ ಆಡಾಕಾ
ಆಟೋಟಗಳ ಮೂಲಕ ಬದುಕಿನ ಪಾಠವ ಕಲಿಸಾಕ
ಬದುಕಿಗೊಂದು ಕೈತೋರಿ ಸರಿ ದಾರಿಯ ತಿಳಿಸಾಕ....!!

ಹಾಕತೀ ಕಾಲಿಗೆ ನೀ ಹರುಕ ಚಪ್ಪಾಲು
ಇಟ್ಟೀದಿ ತಲೆಮ್ಯಾಲೊಂದು ರುಮಾಲು
ಹಿಡದಿ ಕೈಯಾಗೊಂದು ಮುರುಕ ಕೋಲು
ಆದರೂ ಎಲ್ಲಾ ಇರುವಂತೆ ತೋರತಿ ಮುಖದೊಳಗೊಂದು ಸ್ಮೈಲ...!!

ಕಳೆಯತಿ ನೀ ಸಮಯ ಅತೀಹೆಚ್ಚು ಶ್ಯಾಲ್ಯಾಗ
ಮನಿಗ್ಹೋದರ ಕುಡತಿ ಸುಮ್ಮ ಎಲ್ಲೋ ಒಂದು ಮೂಲ್ಯಾಗ
ಅಚ್ಚಳಿಯದೇ ಕೂಡತಿ ವಿದ್ಯಾರ್ಥಿಗಳ ಎದೆಯಾಗ
ನೀ ಕಲಿಸಿದ ಶಿಷ್ಯರ ಸಾಧನೆಯ ನೋಡಿ ಎದೆತಟ್ಟಿ ನಗತಿ ಮನದಾಗ.....!!

ನಿಸ್ವಾರ್ಥ ಸೇವೆಯ ಹೀರೋ ನೀ ಶಿಕ್ಷಕ
ನಮ್ಮೆಲ್ಲರ ಬದುಕಿಗೆ ನೀ ಮೊದಲ ಪ್ರೇರಕ
ಸಹನೆ ತಾಳ್ಮೆಯ ಭಾವುಕಗಳ ಸಂಪಾದಕ
ರಾಷ್ಟ್ರದ ಏಳಿಗೆಗೆ ನೀ ಮೊದಲ ಕಪ್ಪು ಹಲಗೆಯ ಮಾಂತ್ರಿಕ...!!

**– ರಚನೆ :**
**ಹನುಮಂತ ದಾಸರ ಹೊಗರನಾಳ**
**ಯುವ ಕವಿ ಸಾಹಿತಿ ಬರಹಗಾರ**
**ಭಾರತ ಸೇವಾರತ್ನ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರು.**

## ನಮ್ಮ ಬೆಂಗಳೂರು

ಅಂದಿನ ನಮ್ಮ ಬೆಂದಕಾಳೂರು
ಇಂದು ನೆಂದಕಾಳೂರಾಯ್ತು
ಕೋರೋನ ಮಹಾ ಮಾರಿಯಿಂದ ತತ್ತರಿಸಿ
ಹೋಗಿತ್ತು ಬಡಜನರ ಬದುಕು ಅಂದು
ಮಳೆಯಿಂದ ಕಣ್ಣು ಬಾಯಿ ಬಿಡುತ್ತಾ
ಕಂಗಾಲಾಗಿದ್ದಾರೆ ಸಿರಿವಂತರು ಇಂದು

ಗಾರ್ಡನ್ ಸಿಟಿ ಖ್ಯಾತಿಯ ಬೆಂಗಳೂರು
ಲಕ್ಷ ಲಕ್ಷದ ಅಡಿ ಬೆನ್ಜ್ ಕಾರು
ಸಿರಿವಂತರ ಕೈ ಹಿಡಿದಿದೆ ರೈತರ ಟ್ರ್ಯಾಕ್ಟರ್
ತುಂಬಿ ಹರಿಯುತ್ತಿದೆ ಬೆಂಗಳೂರಲ್ಲಿ ನೀರು

ಆಪತ್ಬಾಂಧವನಂತೆ ಎಲ್ಲಾ ಕಡೆ ಬಂತು
ಟ್ರ್ಯಾಕ್ಟರ್ ಎನ್ನುವ ಬಡವರ ಮಹಾ ತೇರು
ಟೆಕ್ಕಿಗಳ ವಾಹನ ನಿಂತವು ಸಾಲು ಸಾಲು
ಮಳೆ ಬಂದ ಮೇಲೆ ಎಲ್ಲೆಲ್ಲೂ ಬಾಯಿ ಬಿಟ್ಟು ಕಾಯುತ್ತಿವೆ ಸಾಯಿಸಲು ಸಾವಿರಾರು ಗುಂಡಿಗಳು

ಸಿಲಿಕಾನ್ ಸಿಟಿಯಲ್ಲಿ ಎಲ್ಲಿ ನೋಡಿದರೂ ನೀರು
ರಸ್ತೆಯ ಮೇಲೆ ಕಾಣುತ್ತಿಲ್ಲ ಟಾರ್
ಅಲ್ಲಲ್ಲಿ ತೇಲುತ್ತಿರುವ ಸ್ಕೂಟರ್ ಕಾರು
ಕೊಚ್ಚಿಕೊಂಡು ಹೋಗಿವೆ ಬಡವರ ಸೂರು
ಕುಡಿಯಲು ಸಿಗುತ್ತಿಲ್ಲ ಬಡವರಿಗೆ ಅನ್ನ,ನೀರು

**–ವಿ.ಶ್ರೀನಿವಾಸ.ವಾಣಿಗರಹಳ್ಳಿ**
**ದೊಡ್ಡಬಳ್ಳಾಪುರ( ತಾ)**

ಕರುನಾಡ ಕಂದ
ಸಂಪುಟ–1 । ಸಂಚಿಕೆ–24
ದಿನಾಂಕ: 16–10–2022 । ಪುಟಗಳು: 16

# ಹೆಣ್ಣು ಸಮಾಜದ ಕಣ್ಣು

ಪ್ರತಿಯೊಬ್ಬರ ಜೀವನದಲ್ಲಿ ಹೆಣ್ಣು ತಾಯಿಯಾಗಿ, ಗೆಳತಿಯಾಗಿ,ಹೆಂಡತಿಯಾಗಿ,ಅಕ್ಕ–ತಂಗಿಯಾಗಿ, ಮಗಳಾಗಿ ಬೇಕೇ ಬೇಕು ಸಮಾಜದಲ್ಲಿರುವ ಈ ಕಟ್ಟುಪಾಡುಗಳಲ್ಲಿ ಹೆಣ್ಣು ಮಕ್ಕಳ ಪಾಲು ಅಧಿಕವಾಗಿದೆ ಈ ಅಡೆತಡೆಗಳ ಮಧ್ಯೆ ಬಹಳಷ್ಟು ಹೆಣ್ಣು ಮಕ್ಕಳ ಮಹತ್ತರ ಸಾಧನೆಗಳನ್ನು ಮಾಡುತ್ತಿದ್ದಾರೆ. ಹೆಣ್ಣು ಬಹಳ ಸಹನೆ ಉಳ್ಳವಳಾಗಿರುವುದರಿಂದ ಆಕೆಯನ್ನು ಭೂಮಿ ತಾಯಿಗೆ ಹೋಲಿಸುತ್ತಾರೆ ಏಕೆಂದರೆ ಭೂಮಿ ತಾಯಿ ಜನರಿಂದ ಆಗುವ ಶೋಷಣೆಗಳನ್ನು ಹೇಗೆ ಸಹಿಸಿಕೊಂಡಿರುತ್ತಾಳೋ ಅದೇ ರೀತಿ ಹೆಣ್ಣು ಕೂಡಾ ತನಗೆ ಒದಗಿ ಬಂದ ಕಷ್ಟಗಳನ್ನು ಸಹಿಸಿಕೊಂಡಿರುತ್ತಾಳೆ.ಹೀಗೆ ಸಹನೆಯ ಭಾವವನ್ನು ಹೊಂದಿರುವ ಹೆಣ್ಣು ಮಕ್ಕಳ ದಿನವನ್ನು ಕಳೆದ 10 ವರ್ಷಗಳಿಂದ ಪ್ರತಿ ವರ್ಷ ಅಕ್ಟೋಬರ್ 11ರಂದು ಅಂತರಾಷ್ಟ್ರೀಯ ಹೆಣ್ಣು ಮಕ್ಕಳ ದಿನವನ್ನಾಗಿ ಆಚರಿಸಲಾಗುತ್ತಿದೆ 2012 ರಲ್ಲಿ ವಿಶ್ವಸಂಸ್ಥೆ ಮೊದಲ ಬಾರಿಗೆ ಈ ದಿನದ ಆಚರಣೆಯನ್ನು ನಡೆಸಿತ್ತು ಈ ವರ್ಷ ಅಂತರಾಷ್ಟ್ರೀಯ ಹೆಣ್ಣು ಮಗು ದಿನದ 10ನೇ ವಾರ್ಷಿಕೋತ್ಸವ ಕೂಡಾ ಹೌದು.

ಹಲವು ಸಂಕೋಲೆಗಳ ಮಧ್ಯೆ ಬದುಕುತ್ತಿರುವ ಹೆಣ್ಣು ಮಕ್ಕಳಿಗೆ ಎದುರಾಗಿರುವ ಸವಾಲುಗಳನ್ನು ಅವಲೋಕಿಸಲು ಮತ್ತು ಅವರ ಸಬಲೀಕರಣ ಮತ್ತು ಹಕ್ಕಿಗೆ ಏನು ಮಾಡಬಹುದು ಎಂಬ ಚಿಂತನೆಗಳನ್ನು ನಡೆಸಲು ಈ ದಿನ ಸೂಕ್ತ ವೇದಿಕೆಯಾಗಿದೆ."ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ" ಎಂಬ ನಾಣ್ಣುಡಿಯಂತೆ ಹೆಣ್ಣು ಕಲಿತು ಶಿಕ್ಷಕಿಯಾಗಿ ದೇಶಕ್ಕೆ ಪ್ರಗತಿಯನ್ನು ತಂದುಕೊಡುವಂತಹ ಒಳ್ಳೆಯ ಪ್ರಜೆಗಳನ್ನು ನಿರ್ಮಿಸುತ್ತಾಳೆ ಮೊಟ್ಟಮೊದಲ ಬಾರಿಗೆ ಶಿಕ್ಷಣವನ್ನು ನೀಡಬೇಕೆಂದು ಪಣ ತೊಟ್ಟ ಮಹಿಳೆ ಸಾವಿತ್ರಿಬಾಯಿ ಫುಲೆ ಆಕೆಯ ಕನಸಿನಂತೆ ಇಂದು ದೇಶಾದ್ಯಂತ ಹೆಣ್ಣು ಮಕ್ಕಳು ಶಿಕ್ಷಣವನ್ನು ಪಡೆದು ದೇಶದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿದ್ದಾರೆ.



ನಮ್ಮ ದೇಶದಲ್ಲಿ ಪ್ರತಿದಿನ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರಗಳು ನಡೆಯುತ್ತಿವೆ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಪ್ರತಿದಿನ ಸರಾಸರಿ ಇಬ್ಬರು ಅಪ್ರಾಪ್ತ ಮಹಿಳೆಯರ ಮೇಲೆ ಅತ್ಯಾಚಾರಗಳು ಆಗುತ್ತಿವೆ ಎಂದು 2021ರಲ್ಲಿ ಎನ್ ಸಿ ಆರ್ ಬಿ ವರದಿ ಹೇಳುತ್ತಿದೆ.2021 ರಲ್ಲಿ ನಾಲ್ಕು ಲಕ್ಷ ಮಹಿಳೆಯರ ಮೇಲೆ ಅಪರಾಧಗಳು ನಡೆದಿರಬಹುದು ಇಂತಹ ಅನೇಕ ಪ್ರಕರಣಗಳು ನಡೆದಿವೆ.

ಉದಾಹರಣೆಯಾಗಿ:ಅಜ್ಮೀರ್ ಅತ್ಯಾಚಾರ ಪ್ರಕರಣ 2012 ರ ದೆಹಲಿ ಸಾಮೂಹಿಕ ಅತ್ಯಾಚಾರ ಅತ್ಯಾಚಾರ ಪ್ರಕರಣ ಉನ್ನಾವೊ ಅತ್ಯಾಚಾರ ಪ್ರಕರಣ ಹೀಗೆ ಅನೇಕ ರೀತಿಯಲ್ಲಿ ಅತ್ಯಾಚಾರ ಪ್ರಕರಣಗಳು ನಡೆಯುತ್ತಿವೆ ಹಳ್ಳಿಗಳಿಗಿಂತ ನಗರಗಳಲ್ಲಿ ಬದುಕುವ ಹೆಣ್ಣು ಮಕ್ಕಳ ಬದುಕು ಬಹಳ ಕಠಿಣವಾಗಿದೆ.ಸರ್ಕಾರ ಬಹುಬೇಗನೆ ಹೆಣ್ಣು ಮಕ್ಕಳಿಗೆ ರಕ್ಷಣೆ ಒದಗಿಸುವ ವ್ಯವಸ್ಥೆ ಮಾಡಬೇಕು ಭಾರತದ ಸಂಸ್ಕೃತದ ಪ್ರಕಾರ ಹೆಣ್ಣನ್ನು ದೇವತೆಯಾಗಿ ಪೂಜಿಸಲಾಗುತ್ತದೆ ಅಂತಹ ದೇವತೆಯ ಮೇಲೆ ಅತ್ಯಾಚಾರ ನಡೆಸುವುದು ಪಾಪದ ಕೃತ್ಯವಾಗಿದೆ.

'ಹೆಣ್ಣು ಒಲಿದರೆ ನಾರಿ ಮುನಿದರೆ ಮಾರಿ' ಎಂಬ ಮಾತಿನಂತೆ ಪ್ರೀತಿಯಿಂದ ಗೆಲ್ಲಬೇಕೆಂದು ಹೊರತು ಬಲವಂತದಿಂದಲ್ಲ.

ಶಿಕ್ಷಣ,ವಿವಾಹ,ಕಾನೂನು ಹಕ್ಕು, ವೈದ್ಯಕೀಯ ಹಕ್ಕು,ಮುಂತಾದ ವಿಚಾರಗಳಲ್ಲಿ ಹೆಣ್ಣು ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳನ್ನು ಅನೇಕ ಹಕ್ಕುಗಳನ್ನು ಸರ್ಕಾರ ಒದಗಿಸಿಕೊಡಬೇಕು ಸಮಾಜದಲ್ಲಿ ಸಾಧನೆ ಮಾಡಲು ಹೆಣ್ಣು ಮಕ್ಕಳು ಸಿದ್ದರಿದ್ದಾರೆ ಪ್ರತಿಯೊಬ್ಬರು ಅವರ ಜೊತೆ ನಿಂತುಕೊಳ್ಳಬೇಕು ಹೆಣ್ಣು ಮಕ್ಕಳು ಕೀಳರೆಂದು ಯಾರು ತಿಳಿದುಕೊಳ್ಳಬೇಡಿ.

ಸರ್ಕಾರಕ್ಕೆ ಪ್ರಶ್ನೆಗಳು

1.ಅತ್ಯಾಚಾರ ನಡೆಸುವ ಪಾಪಿಗಳಿಗೆ ಸರ್ಕಾರ ಮರಣದಂಡನೆ ನೀಡುವ ಕಾನೂನನ್ನು ಯಾಕೆ ಜಾರಿಗೊಳಿಸುತ್ತಿಲ್ಲ?

2. ಪ್ರತಿ ಶಾಲಾ ಕಾಲೇಜುಗಳಲ್ಲಿ ಹೆಣ್ಣು ಮಕ್ಕಳು ತಮ್ಮ ರಕ್ಷಣೆಯನ್ನು ತಾವೇ ಮಾಡಿಕೊಳ್ಳುವಂತೆ ತರಬೇತಿಯನ್ನು ಯಾಕೆ ಪ್ರಾರಂಭಿಸಬಾರದು?

**–ಕೀರ್ತಿ ಸಾತಲಿಂಗಗೋಳ**

## ಅವನು ಯಾರು?

ದಿನವೂ ಬರುವ ಗಿರಾಕಿಗಳಿಗಿಂತ
ವಾರಕೊಮ್ಮೆ ಬರುವ ಅವನು ಮಾತ್ರ
ನನ್ನೆದೆಯೊಳಗಿನ ಮಾತುಗಳಿಗೆ ಧ್ವನಿಯಾಗಿರುತ್ತಿದ್ದ...

ನವಿರಾಗಿ ಕೆತ್ತಲಾಗಿದ್ದ
ನನ್ನ ಮಾಂಸದ ಮುದ್ದೆಯ ದೇಹವನ್ನು
ಹಸಿದಿದ್ದ ಗಿರಾಕಿಗಳು ಕಚ್ಚಾಡಿ,
ತುಂಡು ತುಂಡಾಗಿ ಮುಕ್ಕುವಾಗ...
ಆತ ಮಾತ್ರ ಮೃದುವಾಗಿ ಮುದ್ದಿಸುತ್ತಿದ್ದ
ಬೇಗುದಿಯ ಮನಕ್ಕೆ
ಸ್ವರ್ಗದ ಕಿಚ್ಚೊಂದು ತಾಗಿದಂತಿರುತ್ತಿತ್ತು

ದಿನ ಬರುವ ಗಿರಾಕಿಗಳಿಗೆ
ಭೋಗದ ವಸ್ತುವಾಗಿದ್ದ ನಾನು
ಅವನು ಬಂದಾಗ ಮಾತ್ರ ಹೆಣ್ಣಾಗಿ ಉಸಿರಾಡುತ್ತಿದ್ದೆ

ಆ ದಿನ ಮಾತ್ರ ಒರಟರಾಗಿರುತ್ತಿದ್ದ ಮೈ
ಅತನ ಬೇವರ ಸ್ನಾನದಿಂದಾಗಿ
ಹೂವಿನ ದಳದಂತಾಗುತ್ತಿತ್ತು
ವಾರದ ಕೊನೆಯ ಈ ದಿನಕ್ಕೆ
ನಾನು ಪ್ರೇಮವೆಂದೆ ಹೆಸರಿಟ್ಟಿದ್ದೆ

ಮನಕ್ಕೆ ಹಿತವೆನ್ನಿಸುವ ಮಾತು
ದೇಹಕ್ಕೆ ಸುಖವೆನ್ನಿಸುವ ಸ್ಪರ್ಶ
ತಬ್ಬಿ ಮಲಗಿದಷ್ಟು ಕ್ಷಣ ಸಾಂತ್ವನದ ಅಪ್ಪುಗೆ
ಇಷ್ಟು ಸಾಕಲ್ಲವೇ ಎನ್ನಿಸಿತ್ತು

ಗೊತ್ತಿತ್ತು,
ಅವನು ನನ್ನೊಡನೆ ತುಂಬಾ ದೂರ ಬರಲಾರನೆಂದು
ಅವನು ಬರುತ್ತಿರುವುದು
ಗಿರಾಕಿಗಳಂತೆಯೇ

ಆದರೂ ಪ್ರತಿ ಬಾರಿಯು
ಅವನ ಭೇಟಿಯಲ್ಲಿ
ಅರ್ಥವಾಗದ,ಹಿತವೆನ್ನಿಸುವ ಪ್ರೇಮವೊಂದನ್ನು
ಹುಡುಕಿಕೊಂಡಿದ್ದೆ
ಬದುಕಿಗೊಂದಿಷ್ಟು ನೆಮ್ಮದಿಗಾಗಿ

ಇಂತಹ ವಾರದ ಕೊನೆಯ ದಿನಗಳನ್ನು
ಪ್ರೀತಿಸುತ್ತಲೇ ಜೀವಿಸುತ್ತೇನೆ
ಹೊಸ ಬದುಕಿನ ಬಾಗಿಲು ತೆರೆಯುವವರೆಗೂ

**– ಮಲ್ಲಿಕಾರ್ಜುನ ಸ್ವಾಮಿ**
**ಹಿರೇಮಠ ಕರಡಕಲ್ಲ್**




## ಪ್ರೀತಿಯ ಚಿಕ್ಕಪ್ಪ

ನೀನು ನಗುವಿನ ಅಲೆಯಾಗಿದ್ದೆ
ನನ್ನೆಲ್ಲಾ ಕನಸುಗಳಿಗೆ
ಸ್ಫೂರ್ತಿಯಾಗಿದ್ದೆ
ಹೀಗೇಕೆ ಮಿಂಚಿನಂತೆ ಮಾಯವಾದೆ
ಕೊನೆ ಉಸಿರು ನಿಲ್ಲುವ ಮುನ್ನ
ಮೌನಿಯಾಗಿಬಿಟ್ಟೆ
ಅನಿರೀಕ್ಷಿತವಾಗಿ
ಕೊನೆಯುಸಿರುಳೆದೆ
ಅಗಲುವ ಮುನ್ನ ಮಾತನಾಡದೆ ಹೋದೆ
ನನ್ನ ಜೊತೆ
ಇದುವೇ ನಿಜ ಕಾರಣ ನಿಲ್ಲದ ಕಂಬನಿಗೆ
ಜೀವನದಲ್ಲಿ ಅದೆಷ್ಟೋ ಬುದ್ಧಿ ಮಾತು ಕಲಿಸಿ
ಮನದಲ್ಲಿ ಮತ್ತೆ ಬರಲಾರದ ಮಾಣಿಕ್ಯವಾದೆ...


**–ಪೂಜಾ.ಕೆ,ಅಥಣಿ**



2–10–2022 ರಂದು ಹುಬ್ಬಳ್ಳಿ ಮಹಾಲಕ್ಷ್ಮಿನಗರದ ವಿದ್ಯಾನಗರ ಮಹಾತ್ಮಾ ಗಾಂಧೀಜಿ ಅವರ ಫೋಟೋಗೆ ಮಾಲಾರ್ಪಣೆ ಮಾಡಿ ಗೌರವ ಸೂಚಿಸಿ ನಾಡಿನ ಸಮಸ್ತ ಜನತೆಗೆ 153ನೇ ಮಹಾತ್ಮ ಗಾಂಧೀಜಿ ಜಯಂತಿಯ ಶುಭಾಶಯಗಳನ್ನು ತಿಳಿಸಿದರು. ಈ ಸಂದರ್ಭದಲ್ಲಿ,ಶ್ರೀ ಓಬಲೇಶ ಎರಗಟ್ಟಿ, ಶ್ರೀಗಜಾನನ ಕಾಟವೆ,ಶ್ರೀ ಹೇಮಣ್ಣ ಉಪ್ಪಾರ, ಶ್ರೀವಿಜಯ ಕಟ್ಟಿಮನಿ,ಶ್ರೀ ಹಾಲಪ್ಪ ಶಿವಳ್ಳಿ, ಮಣಿಕಂಠ,ಸೋಮು ಬಿರಾದಾರ,ಸುರೇಶ ಅವರೊಂದಿಗೆ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು.

**–ಯೂಸುಫ್ ಎನ್ ಬೇಪಾರಿ**

ಕರುನಾಡ ಕಂದ
ಸಂಪುಟ–1 । ಸಂಚಿಕೆ–24
ದಿನಾಂಕ: 16–10–2022 । ಪುಟಗಳು: 16

ದೀಪಾವಳಿ ಹಬ್ಬದ ಹಾರ್ದಿಕ ಶುಭಾಷಯಗಳು-2022

ದೀಪದಿಂದ ದೀಪ ಬೆಳಗುವಂತೆ
ಪ್ರೀತಿಯಿಂದಲೇ ಪ್ರೀತಿ ಹರಡುವುದು
ದ್ವೇಷ, ಕೋಪ ನಶಿಸಲಿ, ಪ್ರೀತಿ ಮೂಡಲಿ

ಸರ್ವರಿಗೂ ದೀಪಾವಳಿ ಹಬ್ಬದ ಹಾರ್ದಿಕ ಶುಭಾಷಯಗಳು



ಶುಭಾಷಯ ಕೋರುವವರು :

ಶ್ರೀ ಕೆ ಆರ್ ದೇವರಾಜು

ಅಧ್ಯಕ್ಷರು
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ
ನಿಯಮಿತ ಕರಡಿ,ತಿಪಟೂರು ತಾಲೂಕು
ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು
ಗ್ರಾಮ ಪಂಚಾಯಿತಿ ಕರಡಿ
ತಾಲ್ಲೂಕು–ತಿಪಟೂರು, ಜಿಲ್ಲೆ–ತುಮಕೂರು





ಶ್ರೀಅಜೇಯ್ ಜೋಶಿ ಅಭಿಮಾನಿ ಬಳಗದ ವತಿಯಿಂದ ನಗರದ ಕಿಮ್ಸ್ ಆಸ್ಪತ್ರೆಯ ಮುಂಭಾಗದಲ್ಲಿ ಶ್ರೀಅಜಯ್ ಜೋಶಿ ಅವರ ನೇತೃತ್ವದಲ್ಲಿ ಬೈಕ್ ರ್ಯಾಲಿ ಮೂಲಕ ಗಾಂಧೀಜಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸೂಚಿಸಲಾಯಿತು ನಾಡಿನ ಸಮಸ್ತ ಜನತೆಗೆ 153ನೇ ಮಹಾತ್ಮ ಗಾಂಧೀಜಿ ಜಯಂತಿಯ ಶುಭಾಶಯಗಳನ್ನು ತಿಳಿಸಿದರು.ಈ ಸಂದರ್ಭದಲ್ಲಿ ಸುಬ್ಬರಾಯ ಭಟ್ಟ,ಬಸಯ್ಯ ಹೀರೆಮಠ,ಶರಣು ಕಾಗಿ,ವಿನಾಯಕ ಬದ್ದಿ,ರಫೀಕ್ ಪರೀಟ್, ಶಿವಾನಂದ ಕುಗಟೋಳಿ, ರಾಜೇಶ್ ನಾಯ್ಕ,ರೀಯಾಜ್ ಧೋಬಿ,ಪ್ರಶಾಂತ್ ಜಾಲಗಾರ,ಸಹದೇವ ನಾಗೊಳಿ, ಸಂಪತ್ತಕುಮಾರ ಸಾಲಿಮಠ,ಲಕ್ಷಣ ಬಂಡಿವಡ್ಡರ, ಮಂಜುನಾಥ್ ಹಬೀಬ, ಶರಣು ಸುಡಿ,ಪ್ರವೀಣ ರಾಯಚೂರ, ನೀಲಕಂಠ ನಡುವಿನಮಠ, ಪ್ರಕಾಶ್ ,ವಿನೋದ್ ಬೆಂಡಿಗೇರಿ,ರವಿರಾಜ್, ವಿಜಯ, ಉಳ್ಳೇಶ್ ಬಂಡಿವಡ್ಡರ ಬಳಗದ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು.

**–ಯೂಸೂಫ್ ಬೇಪಾರಿ.**

153ನೇ ಮಹಾತ್ಮ ಗಾಂಧಿ ಜಯಂತಿ ಪ್ರಯುಕ್ತ




2–10–2022 ರಂದು ಹುಬ್ಬಳ್ಳಿ ನಗರದ ಕಿಮ್ಸ್ ಆಸ್ಪತ್ರೆಯ ಮುಂಭಾಗದಲ್ಲಿ ಗಾಂಧೀಜಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸೂಚಿಸಲಾಯಿತು ಈ ಸಂದರ್ಭದಲ್ಲಿ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಸದಸ್ಯರು ಹಾಗೂ ಕಾರ್ಪೊರೇಟ್ ನಿರಂಜನ ಹಿರೆಮಠ ಅವರೊಂದಿಗೆ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು.

**–ಯೂಸುಫ್ ಎನ್ ಬೇಪಾರಿ**

# ಪುಸ್ತಕ ಸಂಗ್ರಹಕಾರ ಶ್ರೀರಂಗ ಪುರಾಣಿಕ



ಮೊಬೈಲ್ , ಕಂಪ್ಯೂಟರ್ ನಿಂದಾಗಿ ಪುಸ್ತಕ ಓದುಗರ ಸಂಖ್ಯೆ ಕಡಿಮೆಯಾಗುತ್ತಿದ್ದರೆ , ಇಂಗ್ಲೀಷ್ ಭಾಷೆ ಪ್ರಭಾವ ಹಾಗೂ ಕಲಿಯುವ ಅನಿವಾರ್ಯದಿಂದ ಇಂಗ್ಲಿಷ್ ಭಾಷಾಮಾದ್ಯಮದಲ್ಲಿ ಕಲಿಯುವರ ಸಂಖ್ಯೆ ಹೆಚ್ಚಾಗಿರುವುದರಿಂದ ಕನ್ನಡ ಪುಸ್ತಕ ಓದುಗರ ಸಂಖ್ಯೆ ಇಳಿಮುಖದತ್ತ ಸಾಗುತ್ತಿದ್ದೆ. ಈ ಸಮಯದಲ್ಲಿ ಜಿಲ್ಲೆಯ ಯುವ ಸಾಹಿತಿ ,ಬರಹಗಾರದ ಶ್ರೀರಂಗ ಪುರಾಣಿಕ ಕನ್ನಡ ಪುಸ್ತಕಗಳನ್ನು ಓದುವ ಹವ್ಯಾಸ ಜೊತೆಜೊತೆಗೆ ಕನ್ನಡದ ಪುಸ್ತಕಗಳ ಸಂಗ್ರಹಿಸುವ ಹವ್ಯಾಸ ರೂಢಿಕೊಂಡಿದ್ದಾರೆ. ಇವರು ಅತ್ಯಂತ ಕಡಿಮೆ ಅವಧಿಯಲ್ಲಿ ಅಂದರೆ, 2019 ರಿಂದ ಪ್ರಾರಂಭವಾದ ಇವರ ಪುಸ್ತಕಸಂಗ್ರಹ 2022 ರ ಈವರೆಗೆ, ಅಂದರೆ ಈ ಮೂರುವರ್ಷಗಳ ಅವಧಿಯಲ್ಲಿ ಸರಿಸುಮಾರು 3000 ಸಾವಿರಕ್ಕೂ ಹೆಚ್ಚಿನ ಪುಸ್ತಕಗಳನ್ನು ಸಂಗ್ರಹಿಸಿದ್ದಾರೆ.

ಸಾಹಿತ್ಯ ಲೋಕಕ್ಕೆ ಅಕಸ್ಮಾತ್ ಬಂದಿರುವುದಾಗಿ ಹೇಳುವ ಶ್ರೀರಂಗ ಪುರಾಣಿಕರಿಗೆ ಈ ಮೊದಲು ಓದುವ ಹವ್ಯಾಸವಿರಲ್ಲ , ಪತ್ರಿಕೆಗಳಿಗೆ ಬರಯಲು ಪ್ರಾರಂಭಿಸಿದ ನಂತರವಷ್ಟೇ ಅವರು ಪುಸ್ತಕ ಓದಲು ಪ್ರಾರಂಭಿಸಿದವರು.

ಪುಸ್ತಕ ಸಂಗ್ರಹಕ್ಕೆ ಪ್ರೇರಣೆಯಾದ ತೊರವೆ ರಾಮಾಯಣ

ಇವರು "ತೊರವೆ ರಾಮಾಯಣ" ಪುಸ್ತಕಕ್ಕಾಗಿ ರಾಜ್ಯದ ಮೂಲೆ ಮೂಲೆಗಳಲ್ಲಿನ ಪುಸ್ತಕ ಮಳಿಗೆಗಳಿಗೆ ಅಲೆದಾಡಿದರೂ ಯಾವ ಪುಸ್ತಕದಂಗಡಿಯಲ್ಲಿ ಆ ಪುಸ್ತಕ ಸಿಗದಿದ್ದಾಗ , ಅದನ್ನು ಪ್ರಕಟಿಸಿದ "ಕನ್ನಡ ಸಾಹಿತ್ಯ ಪರಿಷತ್" ಗೆ ಅವರಿಗೆ ನೇರವಾಗಿ ಪೋನ್ ಮೂಲಕ ಕೇಳಿದಾಗ  'ಪುಸ್ತಕ ಪ್ರತಿಗಳು ಖಾಲಿಯಾಗಿ ವರ್ಷಗಳೇ ಕಳೆದಿವೆ ಯಾವಾಗ ಮರುಮುದ್ರಣ ಆಗುತ್ತೋ ಗೊತ್ತಿಲ್ಲ' ಎಂದು ಉತ್ತರಿಸುತ್ತಾರೆ. ಇದೇ ಅನುಭವ ಇವರಿಗೆ ವೀರ ಸಾವರ್ಕರ್ ಕುರಿತು ಬರೆದ ಶಿವರಾಮು ಅವರ "ಆತ್ಮಾಹುತಿ" ಹಾಗೂ ಹಂಪಿ ವಿಶ್ವವಿದ್ಯಾಲಯ ಪ್ರಕಟಿಸಿದ "ವಿಜಯಪುರ ದೇವಾಲಯ ಕೋಶ""ಪುಸ್ತಕಗಳಿಗೂ ಆಗುತ್ತದೆ. ಹತ್ತಿಪ್ಪತ್ತು ವರ್ಷ ಹಿಂದಿನ ಮುದ್ರಣವಾದ ಹಲವಾರು ಕನ್ನಡ ಪುಸ್ತಕಗಳು ಈಗ ಲಭ್ಯವಿಲ್ಲವೆಂದು , ಅವು ಮುದ್ರಣವಾಗುವದು ಬಹಳ ವಿರಳವೆಂದು, ಬೇಡಿಕೆ ಇವರು, ಹೊಸಬರು ಪ್ರಕಟಿಸುವ ಹಾಗೂ ಕುವೆಂಪು , ಬೇಂದ್ರೆ , ಮಾಸ್ತಿ ವೆಂಕಟೇಶ ಅಯ್ಯಂಗಾರ್ , ಎಸ್ ಎಲ್ ಭೈರಪ್ಪ ಹೀಗೆ ಒಂದಿಷ್ಟು ಕನ್ನಡ ಮೇರು ಸಾಹಿತಿಗಳ ಪುಸ್ತಕಗಳು ಮಾತ್ರ ಪುನರಮುದ್ರಣವಾಗುತ್ತಿದ್ದು ಉಳಿದವರದ್ದು ಕಡಿಮೆ ಎಂದು

ತಿಳಿದ ಮೇಲೆ ಮೊದಲಿಗೆ ಅಂತಹ ಪುಸ್ತಕಗಳನ್ನು ಸಂಗ್ರಹಿಸಲು ಪ್ರಾರಂಭಿಸಿದರು. ಕರ್ನಾಟಕ ರಾಜ್ಯಾದ್ಯಂತ "ಸೆಕೆಂಡ್ ಹ್ಯಾಂಡ್ ಪುಸ್ತಕ ಮಳಿಗೆಯಲ್ಲಿ" ಹುಡುಕಾಡಿ ದಶಕಗಳಿಂದ ಮುದ್ರಣವಾಗದ ಅನೇಕ ಕನ್ನಡ ಪುಸ್ತಕಗಳನನು ಹಣಕೊಟ್ಟು ಖರೀದಿಸಿ ಅವುಗಳನ್ನು ಸಂಗ್ರಹಿಸಿದ್ದಾರೆ. ಕಡೆಗೆ ಇವರಿಗೆ "ತೊರವೆ ರಾಮಾಯಣ" ಪುಸ್ತಕ ಸಿಕ್ಕಿದ್ದು 'ಗಿನ್ನಿಸ್ ರೆಕಾರ್ಡ ಪುಸ್ತಕ ಸಂಗ್ರಹಕಾರರಾದ ಮಂಡ್ಯ ಜಿಲ್ಲೆಯ ಪಾಂಡವಪುರದ ಅಂಕೇಗೌಡರ ಬಳಿ !

ಮೊದಲು ಮುದ್ರಣವಾಗ ಪುಸ್ತಕ ಸಂಗ್ರಹಿಸುತ್ತಿದ್ದ ಶ್ರೀರಂಗ ಪುರಾಣಿಕರು ನಂತರ ದಿನಗಳಲ್ಲಿ ಜ್ಞಾನಪೀಠ ಸಾಹಿತಿಗಳು , ಕನ್ನಡ ಪ್ರಸಿದ್ಧ ಸಾಹಿತಿಗಳ , ಸಾಹಿತ್ಯ ಅಕಾಡಮಿ ಪುರಸ್ಕೃತರ , ಹಳೆಗನ್ನಡ ಸಾಹಿತಿಗಳ , ಎಲ್ಲ ಧರ್ಮಗಳ ಧಾರ್ಮಿಕ ಗ್ರಂಥಗಳು , ಪ್ರಿಸಿದ್ಧ ವ್ಯಕ್ತಿಗಳು ಹಾಗೂ ಸಾಧು–ಸಂತರ ಜೀವನ ಚರಿತ್ರೆ ಹಾಗೆ ಇತಿಹಾಸ ಆಸಕ್ತಿ ಇರುವ ಇವರು ಅನೇಕ ಶಾಸನ ಸಂಪುಗಳು , ಇತಿಹಾಸ ಸಂಭಂದಿಸಿದ ಅನುವಾದಳು , ಸಂಶೋಧನ ಪ್ರಂಭಂದಗಳು , ಅನೇಕ ಆಕರಗಳನ್ನು ಸಂಗ್ರಹಿಸಿದ್ದಾರೆ. ಇವರ ಬಳಿ ಆದಿ ಕವಿ ಪಂಪ , ರನ್ನ , ಜನ್ನ ,ರತ್ನಾಕರವರ್ಣಿ ,ಹರಹರ , ಕುಮಾರವ್ಯಾಸ , ಕುಮಾರವಾಲ್ಮೀಕಿ, ಮುದ್ದಣ್ಣ , ಕುವೆಂಪು , ದರಾ ಬೇಂದ್ರೆ , ಶಿವರಾಮ ಕಾರಂತ , ಮಾಸ್ತಿ ವೆಂಕಟೇಶ ಅಯ್ಯಂಗಾರ್ , ಗೋರುರು ರಾಮಸ್ವಾಮಿ ಅಯ್ಯಂಗಾರ್, ತರಾಸು,ಅನಕೃ, ಟಿಪಿ ಕೈಲಾಸಂ, ಗೋಪಾಲಕೃಷ್ಣ ಅಡಿಗ, ಗೋವಿಂದ ಪೈ , ಗಳಗನಾಥರು, ಸತ್ಯಕಾಮ , ರಾವಬಹದ್ದೂರ್, ಎಸ್ ಎಲ್ ಭೈರಪ್ಪ , ಯು.ಆರ್ ಅನಂತ ಮೂರ್ತಿ , ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ಚಂಪಾ , ಚೆನ್ನವೀರ ಕಣವಿ, ರವಿ ಬೆಳಗೆರೆ, ಡಾ.ಬಾಬು ಕೃಷ್ಣಮೂರ್ತಿ , ಕೃಷ್ಣಮೂರ್ತಿ ಪುರಾಣಿಕ , ಸಾಕ್ಯ ರಾಮಚಂದ್ರರಾವ್, ಕೊರಟಿ ಶ್ರೀನಿವಾಸರಾವ್ , ಯಶವಂತ ಚಿತ್ತಾಲ , ಪಿ.ಲಂಕೇಶ, ಪೂರ್ಣ ಚಂದ್ರ ತೇಜಸ್ವಿ , ಬೀಚಿ, ಸಾಯಿಸುತೆ ,ತ್ರಿವೇಣಿ , ಬಿ.ಎಸ್ ವೇಣು , ರಾಗಂ , ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಶ್ರೀನಿವಾಸ ಹಾವನೂರ, ಶೀಲಕಾಂತ ಪತ್ತಾರ, ವ್ಯಾಸರಾಯ ಬಲ್ಲಾಳ, ಗೌರೀಶ ಕಾಯ್ಕಿಣಿ , ಜಯಂತ ಕಾಯ್ಕಿಣಿ, ವಿ.ಕೃ ಗೋಕಾಕ, ಮಧುರಚೆನ್ನ , ಬಸವರಾಜ ಕಟ್ಟೀಮನಿ, ಆದ್ಯ ರಂಗಾಚಾರ್ಯ, ಆಲೂರು ವೆಂಕಟರಾಯರು,ಮುದುವೀಡು ಕೃಷ್ಣರಾಯರು, ರಂಗನಾಥ ದಿವಾಕರ,ಕೀರ್ತಿನಾಥ ಕುರ್ತಕೋಟಿ , ಯಂಡಮೂರಿ ವೀರೇಂದ್ರನಾಥ, ಶಂಭಾ ಜೋಶಿ ,ದೀನಕರ ದೇಸಾಯಿ , ಶಂಗು ಬಿರಾದಾರ , ಎಮ್ ಎಮ್ ಕಲ್ಬುರ್ಗಿ , ರಾ ಹ ದೇಶಪಾಂಡೆ ಇನ್ನೂ ಅನೇಕ ಸಾಹಿತಿಗಳ ಹಾಗೂ ಇಂದಿನ ಯುವ ತಲೆಮಾರಿನ ಸಾಹಿತಗಳ ಪುಸ್ತಕಗಳು ಹಾಗೆ ರಷ್ಯನ್ ಕಾದಂಬರಿಕಾರ ದಾಸ್ತೋವಸ್ಕಿ , ಮಾಮ್ , ಇಂಗ್ಲಿಷ್ ಕವಿ ಜಾನ್ ಕಿಟ್ಸ್ , ಜಗತ್ ಪ್ರಸಿದ್ದ ನಾಟಕಕಾರ ವಿಲಿಯಂ ಷೇಕ್ಸಪೀಯರ್ ನ ನಾಟಕಗಳು ಸೇರಿದಂತೆ ಅನೇಕ ಇಂಗ್ಲಿಷ್ , ತಮಿಳು , ಹಿಂದಿ , ಮರಾಠಿ , ಮಳಿಯಾಳಂ , ಬಂಗಾಲಿ , ಪ್ರೆಂಚ್ , ಪರ್ಷಿಯನ್ ಅನುವಾದಳ ಪುಸ್ತಕಗಳು ಇವರ ಸಂಗ್ರಹದಲ್ಲಿ ಕಾಣಬಹುದು. ಹಾಗೆ ಬಹಳ ಅಪರೂಪದ ಡಾ. ರಾಜಕುಮಾರ ಅವರಿಗೆ ಉಡುಗೊರೆ ಕೊಟ್ಟ ಪುಸ್ತಕ , ಕುವೆಂಪು ಹಸ್ತಾಕ್ಷರದ ಪುಸ್ತಕ , ಮಾಸ್ಟರ್ ಹಿರಣಯ್ಯ ಅವರಿಗೆ ಉಡುಗೊರೆ ಕೊಟ್ಟ ಪುಸ್ತಕಗಳು ಇವರ ಸಂಗ್ರದಲ್ಲಿ ಸೇರಿವೆ.

ಪ್ರವೇಟ್ ಲೈಬ್ರರಿ ಮಾಡುವ ಉದ್ದೇಶ

ತಾವು ಖರೀದಿಸುವ ಪುಸ್ತಕಗಳ ಮಾಹಿತಿ ಜನರಿಗೂ ಸಿಗಬೇಕು ಎಂಬ ಉದ್ದೇಶದಿಂದ ಶ್ರೀರಂಘ ಪುರಾಣಿಕರು , ಆ ಪುಸ್ತಕಗಳ ಕುರಿತು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳುತ್ತಾರೆ. ಇದನ್ನು ಗಮನಿಸುವ ಅನೇಕ ಓದುಗ ಆಸಕ್ತರು ಪೋನ್ ಮಾಡಿ ತಮಗೆ ಬೇಕಾಗುವ ಪುಸ್ತಕ ಕುರಿತು ಕೇಳುತ್ತಾರೆ, ತಮಗೆ ಬೇಕಾದ ಪುಸ್ತಕ ಎಲ್ಲಿಸಿಗಹುದೆಂಬ ಮಾಹಿತಿ ಪಡೆದುಕೊಳ್ಳುತ್ತಾರೆ. ಇವರಿಗೆ ಇತಿಹಾಸ ಸಂಭಂದಿಸಿದ ಸಂಶೋಧನೆ ಮಾಡುವ ವಿದ್ಯಾರ್ಥಿಗಳು , ಇತಿಹಾಸ ಆಸಕ್ತರು ಹೆಚ್ಚಾಗಿ ಫೋನ್ ಕರೆ ಕರೆಮಾಡುತ್ತಾರೆ. ಇದನ್ನು ಮನಗಂಡು ಇತಿಹಾಸ ಸಂಶೋಧನ ಅಥವಾ ಆಸಕ್ತರಿಗಾಗಿಯೇ ಪ್ರವೇಟ್ ಲೈಬ್ರರಿ ಮಾಡುವ ಉದ್ದೇಶವಿದೆ. ಈಗಿನ್ನು ಸ್ನಾತಕೋತ್ತರ ಪದವಿಮಾಡಿ ನೌಕರಿ ಹುಡುಕಾಡುತ್ತಿರುವ ಇರಿಗೆ ಸಾವಿರಾರು ಯಾರಾದರೂ ಪುಸ್ತಕ ದಾನಿಗಳು ಸಹಕಾರರ ಮಾಡಿದರೆ ಲೈಬ್ರರಿ ಕನಸು ಬೇಗ ನನಸಾಗುತ್ತದೆ ಎಂದು ಶ್ರೀರಂಗರು ತಮ್ಮ ಮನದ ಇಂತವನ್ನು ಹೇಳಿಕೋಳ್ಳುತ್ತಾರೆ.



**ಭೀಮಸೇನ ಕೃ ಪಾಟೀಲ**

ಕರುನಾಡ ಕಂದ

ಸಂಪುಟ–1 । ಸಂಚಿಕೆ–24

ದಿನಾಂಕ: 16–10–2022 । ಪುಟಗಳು: 16


# ಕೃಷಿ ಮೇಳದ ಪ್ರಯೋಜನ ಪಡೆದುಕೊಳ್ಳಲು ಕರೆ

ತಿಪಟೂರು–ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ ನವೆಂಬರ್ 3 ರಿಂದ 6ರವರೆಗೆ ಕೃಷಿ ಮೇಳ ಹಮ್ಮಿಕೊಂಡಿದೆ.ಕೃಷಿ ತಂತ್ರಜ್ಞಾನ, ಯಂತ್ರೋಪಕರಣ ಪ್ರದರ್ಶನ,ಮಾಹಿತಿ ಹಾಗೂ ಪ್ರಾತ್ಯಕ್ಷಿಕೆ ನೀಡಲಾಗುತ್ತದೆ.ರೈತರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಾಲೂಕಿನ ಕೊನೆಹಳ್ಳಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಹಾಗೂ ಜಿಲ್ಲಾ ಹಿರಿಯ ವಿಜ್ಞಾನಿ ಡಾ.ವಿ ಗೋವಿಂದೇಗೌಡ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.ಈ ಕೃಷಿ ಮೇಳಕ್ಕೆ ಎಲ್ಲಾ ರೀತಿಯ ತಯಾರಿ ನಡೆದಿದ್ದು ರೈತರಿಗೆ ಮೂಲ ಸೌಕರ್ಯ ಒದಗಿಸಲಾಗುತ್ತದೆ ಪ್ರಾತ್ಯಕ್ಷಿಕೆ ಕ್ಷೇತ್ರಗಳಿಗೆ ಭೇಟಿ,ತಜ್ಞರೊಂದಿಗೆ ಚರ್ಚೆ ಕೃಷಿ ವಸ್ತು ಪ್ರದರ್ಶನ, ಮುಂತಾದವುಗಳನ್ನು ಏರ್ಪಡಿಸಲಾಗಿದೆ.ಕೃಷಿಯಲ್ಲಿ ಉತ್ತಮ ಸಾಧನೆ ಮಾಡಿದ ರೈತಪುರುಷ ಹಾಗೂ ಮಹಿಳೆಯರಿಗೆ,ವಿಸ್ತರಣಾ ಕಾರ್ಯಕರ್ತರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**–ಮನು.ಎಸ್.ಎಮ್.**

# ಲೋಕೋಪಯೋಗಿ ಗೃಹದಲ್ಲಿ ಶ್ರೀ ವಾಲ್ಮೀಕಿ ಜಯಂತಿ ಆಚರಣೆ



ಹನೂರು:ಮಹರ್ಷಿ ಶ್ರೀ ವಾಲ್ಮೀಕಿಯವರ ಜಯಂತಿ ದಿನದಂದೇ ಸರ್ಕಾರ ಎಸ್‌ಟಿ ಸಮುದಾಯಕ್ಕೆ ಮೀಸಲಾತಿ ಹೆಚ್ಚಳ ಮಾಡಿರುವುದು ಸಂತಸ ತಂದಿದೆ ಎಂದು ಶಾಸಕ ಆರ್.ನರೇಂದ್ರ ಹೇಳಿದರು.

ಪಟ್ಟಣದ ಲೋಕೋಪಯೋಗಿ ವಸತಿ ಗೃಹ ಸಭಾಂಗಣದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ಆಯೋಜಿಸಲಾಗಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದ ಅವರು ವಾಲ್ಮೀಕಿ ಮಹರ್ಷಿ ಬರೆದ ರಾಮಾಯಣ ದೇಶ–ವಿದೇಶಗಳಲ್ಲಿ ವಿಶ್ವ ವಿಖ್ಯಾತಿ ಆಗಿದೆ.ಪ್ರಸ್ತುತ ಸಂದರ್ಭದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ವಿಶೇಷತೆಯಿಂದ ಕೂಡಿದ್ದು,ಸರ್ಕಾರ ಎಸ್ಟಿ ಸಮುದಾಯಕ್ಕೆ ಮೀಸಲಾತಿಯನ್ನು ಹೆಚ್ಚಳ ಮಾಡಬೇಕೆಂದು ಶ್ರೀ ಪ್ರಸನ್ನಂದಪುರಿ ಸ್ವಾಮೀಜಿಯವರು ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ 241 ದಿನಗಳ ಅನಿರ್ದಿಷ್ಟ ಧರಣಿ ನಡೆಸಿದ ಪ್ರಯತ್ನಕ್ಕೆ ನ್ಯಾಯ ದೊರಕಿದೆ.ರಾಜ್ಯ ಸರ್ಕಾರ ಶೀಘ್ರದಲ್ಲೇ ಅಸೆಂಬ್ಲಿಯಲ್ಲಿ ಒಪ್ಪಿಗೆ ಪಡೆದು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿಕೊಟ್ಟು ಮೀಸಲಾತಿ ಜಾರಿಯಾಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಮುಖಂಡ ಪಾಳ್ಯ ಕೃಷ್ಣ ಮಾತನಾಡಿ,ಎಸ್ಸಿ,ಎಸ್ಟಿ ಸಮುದಾಯಕ್ಕೆ ಮೀಸಲಾತಿ ಹೆಚ್ಚಳ ಮಾಡಲು ಕಾರಣಕರ್ತರಾದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿಗಳು ಹಾಗೂ ಜಿಲ್ಲೆಯ 4 ವಿಧಾನಸಭಾ ಕ್ಷೇತ್ರದ ಶಾಸಕರುಗಳು,ಸರ್ಕಾರಕ್ಕೆ ಸಮುದಾಯದ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ ಎಂದರು.ಈ ಸಂದರ್ಭದಲ್ಲಿ ಪ.ಪಂ.ಅಧ್ಯಕ್ಷೆ ಚಂದ್ರಮ್ಮ,ಉಪಾಧ್ಯಕ್ಷ ಗಿರೀಶ್, ಸದಸ್ಯರುಗಳು, ತಹಸಿಲ್ದಾರ್ ಆನಂದಯ್ಯ,ತಾ.ಪಂ. ಕಾರ್ಯ ನಿರ್ವಹಣಾಧಿಕಾರಿ ಶ್ರೀನಿವಾಸ್,ಕ್ಷೇತ್ರ ಶಿಕ್ಷಣಾಧಿಕಾರಿ ಶಿವರಾಜು,ಪಪಂ ಮುಖ್ಯಾಧಿಕಾರಿ ಪರಶಿವಯ್ಯ,ದೈಹಿಕ ಪರಿವೀಕ್ಷಕ ಮಹದೇವ್, ಆರೆಫ್‌ಒ ಪ್ರವೀಣ್,ಲೋಕೋಪಯೋಗಿ ಇಲಾಖೆ ಕಿರಿಯ ಅಭಿಯಂತರ ಸತೀಶ್, ಶಿರಸ್ತೇದಾರ್ ನಾಗೇಂದ್ರ,ಕಂದಾಯ ನಿರೀಕ್ಷಕ ಮಹದೇವಸ್ವಾಮಿ,ಗ್ರಾಮ ಲೆಕ್ಕಿಗ ಶೇಷಣ್ಣ ಸೇರಿದಂತೆ ವಿವಿಧ ಇಲಾಖೆಯ ತಾಲೂಕು ಮಟ್ಟದ ಅಧಿಕಾರಿಗಳು,ನಾಯಕ ಸಮುದಾಯದ ವಿವಿಧ ಗ್ರಾಮಗಳ ಮುಖಂಡರುಗಳು ಉಪಸ್ಥಿತರಿದ್ದರು.

**–ಉಸ್ಮಾನ್ ಖಾನ್,ಬಂಡಳ್ಳಿ**

# ದಲಿತರ ದೌರ್ಜನ್ಯದ ವಿರುದ್ಧ ಹೋರಾಟ ಮಾಡಿ: ಪರಮೇಶ್



ರಾಮನಗರ ಜಿಲ್ಲೆ ಮಾಗಡಿ ತಾಲೂಕಿನ ಕುದೂರಿನ ಬಾಬು ಜಗಜೀವನ್ ರಾಮ್ ಸಮುದಾಯ ಭವನದಲ್ಲಿ 2–2–20220ರಂದು ಭೀಮ್ ಆರ್ಮಿ ಭಾರತ್ ಏಕತಾ ಮಿಷನ್ ಮಾಗಡಿ ತಾಲೂಕು ಘಟಕ ಉದ್ಘಾಟನೆ ಮತ್ತು ನೂತನ ಪದಾದಿಕಾರಿಗಳ ಆಯ್ಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.ಈ ಕಾರ್ಯಕ್ರಮದ ಸ್ವಾಗತ ಭಾಷಣವನ್ನು ಹನುಮಂತಪ್ಪರವರು ಮಾಡಿದರು

ಕಾರ್ಯಕ್ರಮವನ್ನು ಭೀಮ್ ಆರ್ಮಿ ಜಿಲ್ಲಾದ್ಯಕ್ಷರಾದ ಪರಮೇಶ್ ರವರು ಉದ್ಘಾಟನೆ ಮಾಡಿ ಬಾಬಾ ಸಾಹೇಬರ ವಿಚಾರ ಮತ್ತು ಸಂದೇಶಗಳನ್ನು ಪ್ರತಿ ಹಳ್ಳಿ ಹಳ್ಳಿಗೂ ಮತ್ತು ಪ್ರತಿ ಮನೆ ಮನೆಗಳಿಗೂ ತಲುಪಿಸಬೇಕು ಮತ್ತು ದಲಿತರ ಮೇಲಿನ ದೌರ್ಜನ್ಯವನ್ನು ಕುರಿತು ಮಾತನಾಡಿದರು.

ನಂತರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನವೀನ್ ಮೌರ್ಯರವರು ಬಾಬಾ ಸಾಹೇಬರ ಜೀವನ ಚರಿತ್ರೆಯನ್ನು ಕುರಿತು ಮಾತನಾಡಿದರು.

ಮಾಗಡಿ ತಾಲೂಕು ಘಟಕದ ಅಧ್ಯಕ್ಷರಾಗಿ ಹನುಮಂತಪ್ಪ,ಉಪಾಧ್ಯಕ್ಷರಾಗಿ ಗೋವಿಂದರಾಜು ,ಪ್ರಧಾನ ಕಾರ್ಯದರ್ಶಿಯಾಗಿ ಮುನಿರಾಜು, ಸಂಚಲಕರಾಗಿ ನಾರಾಯಣಪ್ಪ,ಖಜಾಂಚಿಯಾಗಿ ಮಹದೇವಯ್ಯ,ಕಾರ್ಮಿಕ ಘಟಕದ ಅಧ್ಯಕ್ಷರಾಗಿ ಪ್ರವೀಣ್ ಛಲವಾದಿ,ಕಾ.ಘ ಉಪಾಧ್ಯಕ್ಷರಾಗಿ ಕುಮಾರ್ ,ಕಾರ್ಯದರ್ಶಿಯಾಗಿ ನರಸಿಂಹ ಮೂರ್ತಿ,ಸ. ಕಾರ್ಯದರ್ಶಿಯಾಗಿ ಗಂಗರಾಜು ರವರನ್ನು ಆಯ್ಕೆ ಮಾಡಿ ನೇಮಕಾತಿ ಆದೇಶ ಪತ್ರವನ್ನು ಕೊಡಲಾಯಿತು .

ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಮಿಕ ಘಟಕದ ಅಧ್ಯಕ್ಷರು ಮಹದೇವಪ್ಪ,ಜಿಲ್ಲಾ ಸಂಚಾಲಕರಾದ ಪ್ರಮೋದ್,ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾದ ಕಿರಣ್,ರಾಮನಗರ ತಾಲೂಕು ಅಧ್ಯಕ್ಷರಾದ ಕಾಂತರಾಜು,ಉಪಾಧ್ಯಕ್ಷರಾದ ವೆಂಕಟೇಶ್ ಮತ್ತು ಗ್ರಾಮಸ್ಥರು ಇದ್ದರು.

**–ಪರಮೇಶ**




ಕರುನಾಡ ಕಂದ
ಸಂಪುಟ-1 । ಸಂಚಿಕೆ-24
ದಿನಾಂಕ: 16-10-2022 । ಪುಟಗಳು: 16



ಹನೂರು ತಾಲೂಕಿನ ಕುರುಬರ ದೊಡ್ಡಿ ಗ್ರಾಮಕ್ಕೆ ಜೆ ಡಿ ಎಸ್ ರಾಜ್ಯ ಉಪಾಧ್ಯಕ್ಷ ಎಂ ಆರ್ ಮಂಜುನಾಥ್ ಭೇಟಿ  ಚಾಮರಾಜನಗರ:ಜಿಲ್ಲೆಯ ಹನೂರು ತಾಲೂಕಿನ ಕುರುಬರ ದೊಡ್ಡಿ ಗ್ರಾಮದಲ್ಲಿ ವಿಪರೀತ ಮಳೆಯಿಂದಾಗಿ ಇಡೀ ಊರು ಜಲಾವೃತ ಆಗಿರುವ ಹಿನ್ನಲೆ ಮಂಜುನಾಥ್ ರವರು ಭೇಟಿ ನೀಡಿ ಜನರ ಕಷ್ಟ ಕೇಳಿದರು ಹಾಗೆಯೇ ಮುಂದಿನ  ದಿನಗಳಲ್ಲಿ ಪರಿಹಾರ ಒದಗಿಸುವ ಭರವಸೆ ನೀಡಿದರು

**ವರದಿ:ಉಸ್ಮಾನ್ ಖಾನ್,ಬಂಡಳ್ಳಿ**

# ಶ್ರೀಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ



ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ಬಾಗೇವಾಡಿ ಗ್ರಾಮದಲ್ಲಿ ವಾಲ್ಮೀಕಿ ಸಮುದಾಯದ ವತಿಯಿಂದ  ನಡೆದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯ ಕಾರ್ಯಕ್ರಮವನ್ನು ತಹಶೀಲ್ದಾರ್ ಎನ್.ಆರ್.ಮಂಜುನಾಥ ಸ್ವಾಮಿ ಅವರು ಉದ್ಘಾಟಿಸಿದರು ನಂತರ ಮಾತನಾಡಿದ ಅವರು ಯಾವುದೇ ಸಮುದಾಯಗಳು ಆರ್ಥಿಕ, ರಾಜಕೀಯ,ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ಸಬಲವಾಗಬೇಕೆಂದರೆ ಶಿಕ್ಷಣ ಮಹತ್ವದಾಗಿದೆ. ಆದ್ದರಿಂದ ಕುಡಿತ,ಜೂಜು,ಧೂಮಪಾನ, ಇಸ್ಪೀಟ್‌ಗಳಲ್ಲಿ ಹಣವನ್ನು ದುಂದು ವೆಚ್ಚ ಮಾಡದೇ ಅಂತಹ ವಸ್ತುಗಳನ್ನು ಮಕ್ಕಳಿಂದ ತರಿಸಿಕೊಳ್ಳುವುದರೊಂದಿಗೆ ನಿಮ್ಮಂತೆಯೇ ನಿಮ್ಮ ಮಕ್ಕಳನ್ನು ದುಶ್ಚಟಗಳಿಗೆ ಬಲಿಯಾಗದಂತೆ ತಡೆದು ಗ್ರಾಮದ ಎಲ್ಲಾ ಜನಾಂಗದವರು ನಿಮ್ಮ ಮಕ್ಕಳಿಗೆ ಉನ್ನತ ಶಿಕ್ಷಣವನ್ನು ನೀಡಬೇಕು ಸರ್ಕಾರವು ಪರಿಶಿಷ್ಟ ಸಮುದಾಯಗಳಿಗಾಗಿ ವಿಶೇಷ ಸೌಲಭಗಳನ್ನು ಒದಗಿಸುತ್ತಿದ್ದು ವಿವಿಧ ಯೋಜನೆಗಳ ಮಾಹಿತಿ ಪಡೆದು ಸೌಲಭ್ಯಗಳನ್ನು ಪಡೆದುಕೊಂಡಾಗ ಮೀಸಲಾತಿಯ ಸದುಪಯೋಗ ಪಡೆದಂತಾಗುತ್ತದೆ ಎಂದು ತಿಳಿಸಿದರು.ಗ್ರಾಮದ ಸಮೀಪ ಹರಿಯುವ ತುಂಗಾಭದ್ರ ನದಿಯಲ್ಲಿ ಗಂಗಾ ಪೂಜೆ ಸಲ್ಲಿಸಿ ಸುಮಂಗಲೆಯರಿಂದ ಕಳಸ, ತನುಬಿಂದಿಗೆ,ಶ್ರೀ ಮಹರ್ಷಿ ವಾಲ್ಮೀಕಿ,ರಾಜೇನಹಳ್ಳಿ ಶ್ರೀ ವಾಲ್ಮೀಕಿ ಪೀಠದ ಲಿಂಗೈಕ್ಯ ಶ್ರೀ ಪುಣ್ಯಾನಂದ ಪುರಿ ಮತ್ತು ಈಗಿನ ಶ್ರೀ ಪ್ರಸನ್ನಾನಂದ ಪುರಿಯವರ ಭಾವಚಿತ್ರಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು.

ಇದೇ ವೇಳೆ ನಿವೃತ್ತ ಪ್ರಾಂಶುಪಾಲರಾದ ಎಂ.ವೀರೇಶಪ್ಪ,ಬಿ.ಬಸವರಾಜ,ಉಪನ್ಯಾಸಕರಾದ ಎನ್.ಬಿ.ವೆಂಕಟೇಶ್,ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಸಭಾದ ಮಾಜಿ ಅಧ್ಯಕ್ಷ ಎಂ.ಹೊನ್ನಪ್ಪ, ಜಿಲ್ಲಾ ನಿರ್ದೇಶಕ ಮುದುಕಪ್ಪ,ಮುಖಂಡರಾದ ವಿ.ಅಮರೇಶಪ್ಪ,ವಿ.ನಾಗರಾಜ,ಬಿ.ಈರಣ್ಣ, ವಿರ ುಪಾಕ್ಷಪ್ಪ,ಪರಮೇಶ್‌ನಾಯಕ,ಗ್ರಾಮಸ್ಥರಾದ ಪಂಪಯ್ಯ,ಎಂ.ಜಿ.ನಾಯಕ,ಪಿ.ರಾಮಪ್ಪ,ತಳವಾರ ಗಂಗಪ್ಪ,ಗೊರವಿ ಮಲ್ಲಯ್ಯ,ಆಲ್ಮಪ್ಪ,ಜಿ.ತಾಯಣ್ಣ, ಉಡೇದ್ ಬಸವ,ಬೈಲ್ಗುಡಿ ಶಿವಯ್ಯ ಹಾಗೂ ಮಹಿಳೆಯರು ಮಕ್ಕಳು ಇದ್ದರು.

# ಭಾರತೀಯ ಜನತಾ ಪಕ್ಷದ ಕಾರ್ಯಕರ್ತರ ಸಂಕಲ್ಪ ಸಭೆ




ಧಾರವಾಡ:13/10/2022 ರಂದು ಕಲಘಟಗಿಯ ಎ.ಪಿ ಎಂ ಸಿ ಆವರಣದಲ್ಲಿ ನಡೆದ ಭೂತ್ ಅಧ್ಯಕ್ಷರ ಮತ್ತು ಬಿ ಎಲ್ ಎ 2ಗಳ ಎಲ್ಲರ ಉಪಸ್ಥಿತಿಯಿಂದಾಗಿ ಕಾರ್ಯಕ್ರಮವು ಯಶಸ್ವಿಯಾಯಿತು ಈ ಸಂಧರ್ಭದಲ್ಲಿ ರಾಜ್ಯಾಧ್ಯಕ್ಷರಾದ ಶ್ರೀ.ನಳಿನಕುಮಾರ ಕಟೀಲ, ಧಾರವಾಡ ಜಿಲ್ಲೆಯ ಉಸ್ತುವಾರಿ ಸಚಿವರು ಶ್ರೀ ಆಚಾರ್ಯ,ಮಾಜಿ ಮುಖ್ಯಮಂತ್ರಿಗಳು ಶ್ರೀ ಜಗದೀಶ ಶೆಟ್ಟರ,ರಾಜ್ಯ ಪ್ರಧಾನ ಕಾರ್ಯದರ್ಶಿಗಳು ಶ್ರೀ ಮಹೇಶ ತೆಂಗಿನಕಾಯಿ,ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷರು ಶ್ರೀ.ಲಿಂಗರಾಜ ಪಾಟೀಲ,ಜಿಲ್ಲಾಧ್ಯಕ್ಷರು ಶ್ರೀ ಬಸವರಾಜ ಕುಂದಗೋಳಮಠ,ಎರಡೂ ಮಂಡಲದ ಅಧ್ಯಕ್ಷರು,ತಾಲೂಕ ಮತ್ತು ಜಿಲ್ಲಾ ಪದಾಧಿಕಾರಿಗಳು, ಬಿಜೆಪಿ ಹಿರಿಯ ಕಾರ್ಯಕರ್ತರು ಉಪಸ್ಥಿತರಿದ್ದರು,ಬಿ ಜೆ ಪಿ ರಾಜ್ಯಾಧ್ಯಕ್ಷರು ಕಲಘಟಗಿಯ ಹನ್ನೆರಡು ಸಾವಿರ ಮಠಕ್ಕೆ ಭೇಟಿ ಮಾಡಿ ಶ್ರೀಗಳ ಆಶೀರ್ವಾದ ಪಡೆದರು.

**ವರದಿ-ಪುಂಡಲೀಕ ಧಡೆದ ಕಲಘಟಗಿ**

# ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ಕಾರ್ಯಕ್ರಮ



ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ಬಾಗೇವಾಡಿ ಗ್ರಾಮದ ಶ್ರೀತರಸಾಲೆಪ್ಪ ಶ್ರೀ ಈರನಾಗಪ್ಪ ದೇವಸ್ಥಾನದ ಸಭಾಂಗಣದಲ್ಲಿ ಕಾಂಗ್ರೆಸ್ ಯುವ ಮುಖಂಡ ಎಂ.ಹನುಮೇಶ್ ಕುಮಾರ್ ಹುಟ್ಟುಹಬ್ಬದ ಅಂಗವಾಗಿ ಎಂ.ಹೆಚ್. ಕೆ ಫೌಂಡೇಶನ್ ವತಿಯಿಂದ ನಡೆದ ಎಸ್. ಎಸ್.ಎಲ್.ಸಿಯಲ್ಲಿ ಹೆಚ್ಚು ಅಂಕಗಳಿಸಿದ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ಪುರಸ್ಕಾರ ಕಾರ್ಯಕ್ರಮವನ್ನು ತಾಲೂಕು ಕುರುಬ ಸಂಘದ ಅಧ್ಯಕ್ಷ ದಮ್ಮೂರು ಸೋಮಪ್ಪ ಎಂ.ಹನುಮೇಶ್‌ಕುಮಾರ್ ಅವರೊಂದಿಗೆ ಕೇಕ್ ಕತ್ತರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು ಬಡತನದಲ್ಲೇ ಹುಟ್ಟಿ ಬಾಲ್ಯದಿಂದಲೇ ಪ್ರತಿಭಾವಂತರಾಗಿ ದೇಶಕ್ಕೆ ರಾಷ್ಟಪತಿಯಾಗಿರುವ ದ್ರೌಪದಿ ಮುರ್ಮ,ಸಾಪ್ಟ್ವೇರ್ ಕಂಪನಿಯ ಮಾಲಿಕರಾಗಿ ನೂರಾರು ಉದ್ಯೋಗಿಗಳಿಗೆ ನೆರವಾಗಿರುವ ಇನ್ಫೋಸಿಸ್ ಕಂಪನಿಯ ಮುಖ್ಯಸ್ಥೆ ಸುಧಾ ನಾರಾಯಣ ಮೂರ್ತಿಯರಂತೆ ಬೆಳೆಯಬೇಕು.ತಮ್ಮ ಹುಟ್ಟುಹಬ್ಬವನ್ನು ಎಲ್ಲರಂತೆ ಆಡಂಬರವಾಗಿ ವೈಭವಯುತವಾಗಿ ಆಚರಿಸದೇ ಸರಳತೆಯಿಂದ ಪಂಚಾಯಿತಿ ವ್ಯಾಪ್ತಿಯ ಬಡ ಪ್ರತಿಭೆಗಳನ್ನು ಪುರಸ್ಕರಿಸಿ ಸನ್ಮಾನಿಸುವುದರಿಂದ ಸಾರ್ಥಕತೆಯಿಂದ ಆಚರಿಸುಕೊಳ್ಳುತ್ತಿರುವ ಹನುಮೇಶ್ ಕುಮಾರರ ಕಾರ್ಯ ಶ್ಲಾಘನೀಯ, ನೀವು ಅವರಂತೆ ಮುಂದಿನ ದಿನಗಳಲ್ಲಿ ಬಡ ವಿದ್ಯಾರ್ಥಿಗಳಿಗೆ ನೆರವಾಗುವ ಮಟ್ಟದಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಿ ಬಡವಿದ್ಯಾರ್ಥಿಗಳಿಗೆ ನೆರವಾಗಬೇಕೆಂದರು.ಎಂ.ಹನುಮೇಶ್ ಮಾತನಾಡಿ ಗರ್ಭದಿಂದ ಜನಿಸಿದ ಮಗುವಿಗೆ ತಾಯಿಯೇ ಮೊದಲ ಗುರುವಾಗಿ ಹಿಂದೂ ಸಾಮ್ರಾಜ್ಯದ ನಿರ್ಮಾಣಕ್ಕೆ ಪ್ರೇರಣೆಯಾದ ಶಿವಾಜಿಯ ತಾಯಿ ಜೀಜಾಬಾಯಿ ತನ್ನ ನಾಡಿನ ರಾಣಿ ಚೆನ್ನಮ್ಮಳ ಪರವಾಗಿ ಬಲಗೈ ಬಂಟನಾಗಿ ಸಾಯುವವರೆಗೂ ಹೋರಾಡಿದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ತಾಯಿ ಕೆಂಚವ್ವ ರೋಗಣ್ಣನವರಂತೆ ಅವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಅವರಂತೆ ತಾಯ್ನಾಡಿಗೆ ಉತ್ತಮ ಹೆಸರು ಗಳಿಸುವಂತಾಗಬೇಕೆಂದು ತಿಳಿಸಿದರು.

ಇದೇ ವೇಳೆ ಮುಖಂಡರಾದ ಎನ್.ಕರಿಬಸಪ್ಪ, ಬಿ.ಈರಣ್ಣ,ವುಲ್ತಿ ಭೀಮಣ್ಣ,ಬನ್ನಿಗೌಡ, ಮಲ್ಲಿಕಾರ್ಜುನ,ಆರ್.ಡಿ.ಉಮೇಶ್ ಹಾಗೂ ಬಾಗೇವಾಡಿ ಗ್ರಾಮಸ್ಥರು ವಿದ್ಯಾರ್ಥಿನಿಯರು ಇದ್ದರು.

**ಎಮ್.ಪವನ್ ಕುಮಾರ್**

ಕರುನಾಡ ಕಂದ
ಸಂಪುಟ-1 । ಸಂಚಿಕೆ-24
ದಿನಾಂಕ: 16-10-2022 । ಪುಟಗಳು: 16

# ನದಿ ತೀರದ ಗ್ರಾಮಸ್ಥರಿಗೆ ಇಲಾಖೆಯಿಂದ ಜಾಗೃತಿ ಸಂದೇಶ



ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಉತ್ತನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಾಟಸೂಗೂರು ಆಂಧ್ರ ಮತ್ತು ಕರ್ನಾಟಕದ ಮಧ್ಯೆ ಇರುವ ವೇದಾವತಿ ನದಿ ತುಂಬಿ ಇನ್ನೂ ಹೆಚ್ಚಿನ ರೀತಿಯಲ್ಲಿ ನೀರು ಬರುತ್ತಿದ್ದು ಕೂರಿಗನೂರು ಮತ್ತು ಮಾಟಸೂಗೂರು ಗ್ರಾಮದ ಜನತೆಗೆ ಯಾರೂ ಕೂಡಾ ನದಿ ಹತ್ತಿರ ಹೋಗಬೇಡಿ ಮತ್ತು ನದಿಯ ಪಾತ್ರದ ಜನರು ಯಾರು ಕೂಡಾ ದನಕರುಗಳನ್ನು ಮಕ್ಕಳನ್ನು ನದಿಯ ಹತ್ತಿರ ಹೋಗಲು ಬಿಡಬೇಡಿ ಎಂದು ಸಾರ್ವಜನಿಕರಿಗೆ ಜಾಗೃತಿ ಮೂಡಿಸಿ ಮತ್ತು ಆಂಧ್ರ ಕಡೆಯಿಂದ ಮತ್ತು ಕರ್ನಾಟಕ ಕಡೆಯಿಂದ ಹೋಗುವ ಜನರಿಗೆ ಪೊಲೀಸ್ ಬ್ಯಾರಿಕೇಡ್ ಹಾಕಿ ಗ್ರಾಮ ಪಂಚಾಯಿತಿ ಮತ್ತು ಕಂದಾಯ ಇಲಾಖೆ ವತಿಯಿಂದ ಜಾಗೃತಿ ಮೂಡಿಸಲಾಯಿತು ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಸಿಬ್ಬಂದಿಯಾದ ಶಿವಮೂರ್ತಿ ಬಿಲ್ ಕಲೆಕ್ಟರ್ ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಗ್ರಾಮದ ಮುಖಂಡರುಗಳು ಇದ್ದರು.

**-ಎಮ್.ಪವನ್ ಕುಮಾರ್**

## ಅನ್ನದಾತ

ರೈತ ನಮ್ಮ ಅನ್ನದಾತ
ಭೂಮಿಗೆ ಬಂದ ದೇವದೂತ
ದುಡಿಯುತ ದುಡಿಯುತ
ಸುರಿಸುತಿಹನು ಬೇವರನೀತ
ಎತ್ತಿನಂತೆ ನೊಗವ ಹೊತ್ತು
ಶಕ್ತಿ ಮೀರಿ ದುಡಿಯುತ
ಸ್ವಾರ್ಥವನ್ನು ಸಹಿಸದಾತ
ಸಕಲರನ್ನು ಸಲಹುವಾತ
ನಿನಗೆ ನಮಿಸುವೆ ಶಿರಬಾಗುತ
ಆಶೀರ್ವದಿಸುವಳು ನಿನ್ನ ಭೂಮಾತಾ

**-ಬಿ ಶೈಲಜಾ**

# ಮಹಾತ್ಮ ಗಾಂಧೀಜಿ ಜಯಂತಿ ಆಚರಣೆ



ಬಾಗಲಕೋಟೆ ಜಿಲ್ಲೆಯ ಹುನಗುಂದ ಸಮೀಪದ ಮೇದಿನಾಪೂರ ಗ್ರಾಮದಲ್ಲಿ ಅಂಗನವಾಡಿ ಮುದ್ದು ಮಕ್ಕಳಿಂದ ಮಹಾತ್ಮಾ ಗಾಂಧೀಜಿ ಜಯಂತಿ ಆಚರಣೆ ಮಾಡಲಾಯಿತು. ಆಚರಣೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರಾದ ಶ್ರೀ.ಶೀಲಾ ಪಾಟೀಲ,ಸಹಾಯಕಿ ಶ್ರೀಮತಿ ಅಮೀನಾಬಿ ಸೈಯದಸಾಬ ಸುಗಂಧಿ ಮತ್ತು ಚಿತ್ತರಗಿ ಪಂಚಾಯತಿಯ ವಿ.ಆರ್.ಎಮ್ ಹನಮಂತ ಸಂಗಪ್ಪ ತಳವಾರ ಹಾಗೂ ಮುದ್ದಾದ ಪುಟಾಣಿ ಮಕ್ಕಳು ಇದ್ದರು.

**-ಹನುಮಂತ.ಎಸ್.ಕಡೇಮನಿ**

## ಮನ(ದತ್ತ ಪದ)

ಸಂಶಯವೆಂಬ ಭೂತ ಹೊಡೆದೋಡಿಸಯ್ಯ
ಪರರಮನ ನೋಯಿಸುವುದು ತರವಲ್ಲವಯ್ಯ
ಗುಣಸಾಗರದೊಳು ಮಿಂದು ಬದುಕಯ್ಯ
ದಿಟ್ಟತನವಿರಲಿಯ್ಯ ಕಟ್ಟಕಡೆಯತನಕ
ಕೆಟ್ಟತನವೆಂಬುದು ಸುಟ್ಟು ಬಿಡುತಿಹುದಯ್ಯ
ರಟ್ಟೆಯೊಳು ಬಲವಿರಲು ಭಯವೇತಕಯ್ಯ
ಸನ್ಮಾಗ9ದ ನಡೆಗೆ ಕೊನೆತನಕ ಜಯವಿಹುದು
ಮೆಚ್ಚಿ ತಾನೊಲಿಯುವನು ಮಹಾಲಿಂಗೇಶ್ವರ.

**-ಸಂಜೀವ ಪೂಜಾರಿ**

## ಸದ್ದಿಲ್ಲದೆ ಕದ್ದಿರುವೆ ನೀ...

ನನ್ನ ಹೃದಯ....
ಬಿಟ್ಟಿರಲು ಆಗುತ್ತಿಲ್ಲ
ಕೇಳದೆ ನಿನ್ನ ಧ್ವನಿಯ....
ನನಗೆ ತಿಳಿಯದೆ ನಿನ್ನ ಹತ್ತಿರ
ಬಂದಿದೆ ನನ್ನ ಹೃದಯ....
ಹುಡುಕಾಡಿದರೂ ಇಲ್ಲೆಲ್ಲೂ ಸಿಗುತ್ತಿಲ್ಲ ನನ್ನ ಹೃದಯ .....
ನಿನ್ನಲ್ಲಿಗೇನಾದರು ಬಂದಿದಿಯಾ ನನ್ನ ಹೃದಯ....
ಸ್ವಲ್ಪ ನೋಡಿ ಹೇಳುವೆಯಾ ಇನಿಯ.

**- ಎಸ್. ಬದಾಮಿ**

# ಭತ್ತದ ನಾಡಿಗೆ ಕಾಲಿಟ್ಟ ಬಿಜೆಪಿ ಸಂಕಲ್ಪ ಯಾತ್ರೆ ಯಡಿಯೂರಪ್ಪ ರಾಜಾಹುಲಿ ಆದರೆ ಶ್ರೀ ರಾಮುಲು ಚೀತಾ:ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ



ಸಿರುಗುಪ್ಪ :2023 ರ ವಿಧಾನಸಭೆ ಚುನಾವಣೆ ಹಿನ್ನಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಸೇರಿದಂತೆ ಬಿಜೆಪಿ ಹಿರಿಯ ನಾಯಕರ ಕಲ್ಯಾಣ ಕರ್ನಾಟಕ ಭಾಗದಿಂದ ಜನಸಂಕಲ್ಪ ಯಾತ್ರೆ ಆರಂಭ ಮಾಡಿದರು.

ಸಿರುಗುಪ್ಪ ನಗರದ ಬಿಜೆಪಿ ಜನಸಂಕಲ್ಪ ಯಾತ್ರೆ ತಾಲೂಕು ಕ್ರೀಡಾಂಗಣದ ಬೃಹತ್ ವೇದಿಕೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಮಾಡಿರುವ ಕಾರ್ಯಕ್ರಮಗಳು,ಕೆಲಸಗಳು,ನೀತಿಗಳು ಕೇಂದ್ರ ಸರ್ಕಾರದ ಕಾರ್ಯಕ್ರಮಗಳನ್ನು ನಾಡಿನ ಜನತೆಗೆ ತಿಳಿಸುವುದು ಯಾತ್ರೆಯ ಮುಖ್ಯ ಉದ್ದೇಶವಾಗಿದೆ ಎಂದರು.ಇನ್ನು ಕೆಲವೇ ತಿಂಗಳುಗಳಲ್ಲಿ ರಾಜ್ಯ ವಿಧಾನಸಭೆ ಚುನಾವಣೆ ಬರುತ್ತಿದ್ದು ಮತ್ತೊಮ್ಮೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಿಕ್ಕೆ ತರಲು ಬಿಜೆಪಿಯ ಎಲ್ಲಾ ಕಾರ್ಯಕರ್ತರು ಶ್ರಮವಹಿಸಬೇಕೆಂದು ಹೇಳಿದರು.ನಮ್ಮ ಸರ್ಕಾರ ಬಂದ ನಂತರ ಎಸ್ ಸಿ. ಎಸ್ ಟಿ ಸಮುದಾಯಕ್ಕೆ ಬಹಳಷ್ಟು ಅನುದಾನ ನೀಡಿದೆ ಮೀಸಲಾತಿ ಹೆಚ್ಚಳ ಮಾಡಿ ಆ ಸಮುದಾಯಕ್ಕೆ ಐತಿಹಾಸಿಕ ನೆನಪು ಇಡುವ ಕಾಲ ಒದಗಿ ಬಂದಿದೆ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೇಂದ್ರ ಸರ್ಕಾರ ಜನಪ್ರಿಯ ಯೋಜನೆಗಳನ್ನು ಜಾರಿಗೆ ತಂದಿದೆ ಕಾಂಗ್ರೆಸ್ ಮುಂದಿನ 2023 ರಲ್ಲಿ ಯಾವುದೇ ಕಾರಣಕ್ಕೂ ಕಾಂಗ್ರೆಸ್ ಪಕ್ಷ ಬರುವುದಿಲ್ಲ ಹಗಲು ಕನಸು ಕಾಣಬೇಡಿ ಮುಂದಿನ ವರ್ಷ ಮತ್ತೊಮ್ಮೆ ಬಿಜೆಪಿ ಸರ್ಕಾರ ಬರುತ್ತೆ ಎಂದು ಮಾಜಿ ಮುಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪ ಹೇಳಿದರು

ಕಾಂಗ್ರೆಸ್ ಭಾರತ್ ಜೋಡೋ ಯಾತ್ರೆ ಕೈಗೊಂಡಿದ್ದು ಈ ಯಾತ್ರೆಯಿಂದ ಬಿಜೆಪಿ ಸರ್ಕಾರಕ್ಕೆ ಯಾವುದೇ ತೊಂದರೆ ಇಲ್ಲ ನಾವು ನಮ್ಮ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಾಡಿದ ಅಭಿವೃದ್ಧಿ ಕೆಲಸಗಳನ್ನು ಜನರಿಗೆ ಮನಮುಟ್ಟುವಂತೆ ಯೋಜನೆಗಳನ್ನೆ ಕೈಗೊಂಡಿದ್ದು ಮುಂದಿನ ಚುನಾವಣೆಯಲ್ಲಿ ಗೆಲ್ಲಲು ಸಂಕಲ್ಪ ಯಾತ್ರೆ ಮಾಡುತ್ತೇವೆ ಮುಂದಿನ ವಿಧಾನಸಭಾ ಚುನಾವಣೆ ಗೆಲುವಿನ ಸಂಕಲ್ಪದೊಂದಿಗೆ ಪಕ್ಷ ಸಂಘಟನೆ ಕೈಗೊಂಡಿರುವ ಜನ ಸಂಕಲ್ಪ ಯಾತ್ರೆಯಲ್ಲಿ ಪಕ್ಷದ ಪ್ರಮುಖ ನಾಯಕರು ಸೇರಿ ಸಚಿವರ ದಂಡೇ ಸೇರುತ್ತಿದೆ ಇಲ್ಲಿ ಪ್ರತಿ ಬೂತ್ ಮಟ್ಟದಿಂದ ಕಾರ್ಯಕರ್ತರನ್ನು ಸೇರಿಸಿ ಮುಂದಿನ ಚುನಾವಣೆ ಶಕ್ತಿ ಪ್ರದರ್ಶನ ಮಾಡಿ ಪಕ್ಷವನ್ನು ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ಬರಲು ಸಲುವಾಗಿ ಜನಸಂಕಲ್ಪ ಯಾತ್ರೆ ಕೈಗೊಂಡಿದ್ದು ಕಾಂಗ್ರೆಸ್ ಪಕ್ಷ ಶೇಕಡಾ 85%ಪಕ್ಷ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ. ಹೇಳಿದರು.

ಇದೇ ಸಂದರ್ಭದಲ್ಲಿ ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ ಮಾಜಿ ಮುಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪ, ಸಚಿವರಾದ ಬಿ. ಶ್ರೀ ರಾಮುಲು, ಗೋವಿಂದ ಕಾರಜೋಳ,ವಿಧಾನ ಪರಿಷತ್ ಸದಸ್ಯ ರವಿಕುಮಾರ್,ಸಂಸದ ಕರಡಿ ಸಂಗಣ್ಣ,ಶಾಸಕ ಎಮ್ ಎಮ್ ಸೋಮಲಿಂಗಪ್ಪ,ಬಿಜೆಪಿ ಜಿಲ್ಲಾ ಅಧ್ಯಕ್ಷ ಮುರರಿಗೌಡ,ಬಿಜೆಪಿ ಹಿರಿಯ ನಾಯಕರು ಹಾಗೂ ಜಿಲ್ಲಾ ಮತ್ತು ತಾಲ್ಲೂಕು ವಿವಿಧ ಘಟಕದ ಅಧ್ಯಕ್ಷರು,ಪಧಾಧಿಕಾರಿಗಳು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

**-ಎಮ್.ಪವನ್ ಕುಮಾರ್**

ಕರುನಾಡ ಕಂದ
ಸಂಪುಟ–1 । ಸಂಚಿಕೆ–24
ದಿನಾಂಕ: 16–10–2022 । ಪುಟಗಳು: 16

# ಶ್ರೀಶೈಲ ಜಗದ್ಗುರುಗಳ ದ್ವಾದಶ ಪೀಠಾರೋಹಣ ಮಹೋತ್ಸವ



ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಸಮಸ್ತ ಬಾಂಧವರಲ್ಲಿ ಪೂಜ್ಯ ಶ್ರೀ ಶ್ರೀ ಶ್ರೀ 1008 ಶ್ರೀಶೈಲ ಜಗದ್ಗುರು ಡಾ.ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರ ದ್ವಾದಶ ಪೀಠಾರೋಹಣ ಮಹೋತ್ಸವ ಹಾಗೂ ಜನ್ಮ ಸುವರ್ಣ ಮಹೋತ್ಸವ ನಿಮಿತ್ತ ದಿ. 29–10–22 ರಿಂದ ದಿ.15–01–23ರ ವರೆಗೆ ವಿವಿಧ ಧಾರ್ಮಿಕ ಸಾಮಾಜಿಕ ಹಾಗೂ ಜನ ಜಾಗೃತಿ ಪಾದಯಾತ್ರಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಶ್ರೀ ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಶ್ರೀ ಕ್ಷೇತ್ರ ಯಡೂರದಿಂದ ಶ್ರೀಶೈಲ ಕ್ಷೇತ್ರದವರೆಗೆ ದಿ. 29–10–22ರಂದು ಪಾದಯಾತ್ರೆ ಪ್ರಾರಂಭವಾಗಲಿದೆ ತಾಲೂಕಿನ ಎಲ್ಲಾ ಮಲ್ಲಯ್ಯನ ಭಕ್ತರು ಪೂಜ್ಯರ ಜೊತೆ ಪಾದಯಾತ್ರೆಯಲ್ಲಿ ಪಾಲ್ಗೊಳ್ಳಿ ಎಂದು ಹೇಳಿದರು ಯಡೂರಿನಿಂದ ಶ್ರೀಶೈಲದವರೆಗೂ ರಸ್ತೆಯ ಎರಡು ಬದಿಯಲ್ಲಿ ಸಸಿಗಳನ್ನು ನೆಡುವಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತಾರೆ,ಬೇಸಿಗೆಕಾಲದಲ್ಲಿ ಮಲ್ಲಯ್ಯನ ಭಕ್ತರು ತುಂಬಾ ಬಿಸಿಲಿನಲ್ಲಿ ಪಾದಯಾತ್ರೆ ಮಾಡಿಕೊಂಡು ಶ್ರೀಶೈಲಕ್ಕೆ ಬರುತ್ತಿರುವುದನ್ನು ಪೂಜ್ಯರು ಮನಗಂಡು ಪೂಜ್ಯರು ರಸ್ತೆಯ ಎರಡು ಬದಿಯಲ್ಲಿ ಸಸಿಗಳನ್ನು ನೆಡುವಂತಹ ಕಾರ್ಯವನ್ನು ಪ್ರಾರಂಭ ಮಾಡಿದ್ದಾರೆ

ನಾಡಿನಲ್ಲಿರುವಂತಹ ಪೂಜ್ಯರು ಐಶಾರಾಮಿ ಕಾರಿನಲ್ಲಿ ಶ್ರೀಶೈಲಕ್ಕೆ ಬರುತ್ತಾರೆ ಆದರೆ ರಾಜ್ಯದಲ್ಲೇ ಮೊದಲ ಬಾರಿಗೆ ಶ್ರೀ ಶ್ರೀಶೈಲ ಪೀಠದ ಜಗದ್ಗುರುಗಳು ಯಡೂರಿನಿಂದ ಶ್ರೀಶೈಲದವರೆಗೆ ಪಾದಯಾತ್ರೆ ಹಮ್ಮಿಕೊಂಡಿರುವುದು ಇತಿಹಾಸದಲ್ಲಿ ಇದೆ ಮೊದಲು ಎಂದು ಹೇಳಿದರು.

ಪಾದಯಾತ್ರೆಯುದ್ದಕ್ಕೂ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಪಾದಯಾತ್ರೆಯಲ್ಲಿ ಭಕ್ತರು ಪಾಲ್ಗೊಳ್ಳಬೇಕು.ಅನ್ನ ದಾಸೋಹ ಸೇರಿದಂತೆ ವಿವಿಧ ಕಾರ್ಯಕ್ರಮಗಳಿಗೆ ತಮ್ಮ ಕೈಲಾದಷ್ಟು ಸಹಾಯ,ಸಹಕಾರ ನೀಡಬೇಕು. 33 ದಿನಗಳ ಪಾದಯಾತ್ರೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದಿದ್ದವರು ಒಂದು ದಿನದ ಪಾದಯಾತ್ರೆಯಲ್ಲಿ ಪಾಲ್ಗೊಂಡು,ಐದು ರೊಟ್ಟಿ ಹಾಗೂ 50 ರೂ. ದೇಣಿಗೆ ನೀಡಿದರೂ ಅಂಥವರ ಜೀವನ ಪಾವನವಾಗುವುದಲ್ಲದೆ,ಶ್ರೀಶೈಲ ಮಲ್ಲಯ್ಯನ ಆಶೀರ್ವಾದ ಅವರ ಮೇಲಿರಲಿದೆ ಎಂದರು.

ಜೈನಾಪುರ ಶ್ರೀಗಳು,ಶಹಾಪುರ ಶ್ರೀಗಳು,ನೂಲ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು.

**ವಿಶೇಷ ಕಾರ್ಯಕ್ರಮಗಳು**

ದಿ. 10–01–2023ರಿಂದ 14–01–23ರ ವರೆಗೆ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಇದರಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯ ಮಹಾ ಅಧಿವೇಶನ,ರಾಷ್ಟ್ರೀಯ ವೇದಾಂತ ಸಮ್ಮೇಳನ,ರಾಷ್ಟ್ರೀಯ ವಚನ ಸಮ್ಮೇಳನ, ರಾಷ್ಟ್ರೀಯ ವೀರಶೈವಾಗಮ ಸಮಾವೇಶ,ಉಚಿತ ಸಾಮೂಹಿಕ ವಿವಾಹ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಯೋಜಿಸಲಾಗಿದೆ ಎಂದು ಶ್ರೀಶೈಲ ಜಗದ್ಗುರುಗಳು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಶ್ರೀ ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿ.ಪ. ಸದಸ್ಯರಾದ ಸನ್ಮಾನ್ಯ ಶ್ರೀ ಲಕ್ಷ್ಮಣ ಸಂ. ಸವದಿಯವರ ನೇತೃತ್ವದಲ್ಲಿ ಅಥಣಿ ಪಟ್ಟಣದ ಶಿವಣಗಿ ಕಾರ್ಯಾಲಯದಲ್ಲಿ (ಶ್ರೀ ಸಿದ್ದೇಶ್ವರ ಅಗಸಿ ಹತ್ತಿರ) ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ, ಸಭೆಯನ್ನುದ್ದೇಶಿಸಿ ಮಾನ್ಯ ಮಾಜಿ ಉಪ ಮುಖ್ಯಮಂತ್ರಿಗಳು ಹಾಗೂ ವಿಧಾನಪರಿಷತ್ ಸದಸ್ಯರಾದ ಶ್ರೀ ಲಕ್ಷ್ಮಣ ಸವದಿ ಅವರು ಮಾತನಾಡಿದರು

**ವರದಿ:ಸಿದ್ದಪ್ಪ ಮದ್ದನ್ನವರ**

# ಗಾಂಧಿ ಜಯಂತಿ ಆಚರಣೆ




ಹುಬ್ಬಳ್ಳಿ:153ನೇ ಮಹಾತ್ಮಾ ಗಾಂಧಿ ಜಯಂತಿ ಪ್ರಯುಕ್ತ ಸಾಧನಾ ಎಜುಕೇಶನಲ್ ಮತ್ತು ವೇಲಫೇರ ಸೊಸೈಟಿ ವತಿಯಿಂದ ನಗರದ ಕಿಮ್ಸ್ ಆಸ್ಪತ್ರೆಯ ಮುಂಭಾಗದಲ್ಲಿ ಯೂಸೂಫ್ ಎನ್ ಬೇಪಾರಿ.ಸಾ.ಎ.ವೆ.ಸೊ.ರಾಜ್ಯ ಅಧ್ಯಕ್ಷರ ನೇತೃತ್ವದಲ್ಲಿ ಮಹಾತ್ಮಾಗಾಂಧಿಜಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸೂಚಿಸಿ ನಾಡಿನ ಸಮಸ್ತ ಜನತೆಗೆ 153ನೇ ಮಹಾತ್ಮ ಗಾಂಧೀಜಿ ಜಯಂತಿಯ ಶುಭಾಶಯಗಳನ್ನು ತಿಳಿಸಿದರು.

ಈ ಸಂದರ್ಭದಲ್ಲಿ ರಫೀಕ್ ಹುಕ್ಕೇರಿ,ಶಬ್ಬೀರ್ ಬಳ್ಳಾರಿ,ಹನಿಪ ಘೊಡೆವಾಲೆ ಹಾಗೂ ಸಮಿತಿಯ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು.

**–ಯೂಸುಫ್ ಎನ್ ಬೇಪಾರಿ**




ಹುಬ್ಬಳ್ಳಿ:3–10–2022ರಂದು ವಿಜಯದಶಮಿ ಹಾಗೂ ದಸರಾ ಹಬ್ಬದ ನಿಮಿತ್ತವಾಗಿ ಹುಬ್ಬಳ್ಳಿಯ ಗೋಪನಕದಲ್ಲಿರುವ ಶ್ರೀ ಕರಿಯಮ್ಮ ದೇವಿಯ 15ನೇ ವಾರ್ಷಿಕೋತ್ಸವ ಹಾಗೂ ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಜಗದೀಶ್ ಶೆಟ್ಟರ್ ಹಾಗೂ ಪಾಲಿಕೆ ಸದಸ್ಯರಾದ ಶ್ರೀ ಎಂ ವೈ ನರಗುಂದ ಅವರು ಉದ್ಘಾಟನೆ ಮಾಡಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು ಈ ಸಂದರ್ಭದಲ್ಲಿ ಶ್ರೀ ಮಲ್ಲಿಕಾರ್ಜುನ್ ಸಾವಕಾರ, ಶ್ರೀನಾಗೇಶ್ ಕಲಬುರ್ಗಿ,ಶ್ರೀರಮೇಶ್ ಮಹಾದೇವಪ್ಪನವರ,ಶ್ರೀ ಚಿದು ನರಗುಂದ, ಶ್ರೀಈಶ್ವರಗೌಡ ಪಾಟೀಲ್,ಶ್ರೀ ಆನಂದ್ ಬಿವಿನ್ಕಟ್ಟಿ, ಶ್ರೀ ರಾಜು ಕಾಳೆ,ಶ್ರೀ ರವಿ ಮಳಗಿ,ಕಲಂದರ್ ಮುಲ್ಲಾ,ಶ್ರೀ ಅಶೋಕ್ ವಾಲ್ಮೀಕಿ ಸೇರಿದಂತೆ ಇನ್ನೂ ಅನೇಕ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**–ಯೂಸುಫ್ ಎನ್ ಬೇಪಾರಿ**



ಹುಬ್ಬಳ್ಳಿ ಧಾರವಾಡ 9–10–2022 ರಂದು ಮುಸ್ಲಿಂ ಸಮುದಾಯದ ಹಾಗೂ ಸದಸ್ಯರು ಸೇರಿದಂತೆ ಅಂಜುಮನ್ ಎ ಇಸ್ಲಾಂ ವತಿಯಿಂದ (ಹುಜೂರ್ ಸಲ್ಲಲ್ಲಾ ಹು ಅಲ್ಲಯಿವ ಸಲಂ ಮಹಮ್ಮದ್ ಪೈಗಂಬರರ ಹುಟ್ಟುಹಬ್ಬ ಆಚರಿಸಿದರು.

**–ಯೂಸುಫ್ ಎನ್ ಬೇಪಾರಿ**



2–10–2022 ರಂದು ಹುಬ್ಬಳ್ಳಿ ನಗರದ ಕಿಮ್ಸ್ ಆಸ್ಪತ್ರೆಯ ಮುಂಭಾಗದಲ್ಲಿ ಗಾಂಧೀಜಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸೂಚಿಸಲಾಯಿತು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ (ಟ್ರಸ್ಟ್) ಧಾರವಾಡ ಜಿಲ್ಲಾ ಇವರ ಸಂಯೋಗದಲ್ಲಿ ಹಾಗೂ ಪರಮಪೂಜ್ಯ ಶ್ರೀಗಳ ಸಾನಿಧ್ಯದಲ್ಲಿ ಆಯೋಜಿಸಿದ ನೂತನವಾಗಿ ರಾಜ್ಯ ಅಧ್ಯಕ್ಷರಾಗಿ ನೇಮಕಗೊಂಡ ಶ್ರೀ ರಾಜಣ್ಣ ಕೊರವಿ, ಶ್ರೀರಮೇಶ ಮಹಾದೇವಪ್ಪ,ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಸದಸ್ಯರು ಹಾಗೂ ಕಾರ್ಪೊರೇಟ್ ನಿರಂಜನ ಹಿರೇಮಠ ಅವರೊಂದಿಗೆ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು.

**–ಯೂಸುಫ್ ಎನ್ ಬೇಪಾರಿ**

**KARUNADA KANDA** Fourthnightly, printed by, published by, owned by **KARIBASAPPA BALIGAR** Printed at Nikhil offset printers Ward no : 23, Buddha circle, Hosalli main Road, Gangavathi Tq:Gangavathi dst:Koppal Pin code No:583227 State Karnataka,and published at:#94, at-post-Gunnal,Tq-yalaburga,dst-koppal pin-583237,State -Karnataka, PH:9986366909,Editor-KARIBASAPPA BALIGAR